ಮತ್ತು

ಕರ್ನಾಟಕ ಕಾವ್ಯ ಮಂಜರಿ

ವತಿ

MYSORE LOWER SECONDARY EXAMINATION PAPERS.

GRAMMER.

ವ್ಯಾಕರಣಶಾಸ್ತ್ರ

1891.

I (a) ಆದೇಶವೆಂದರೆ ಏನು? ಉದಾಹರಣೆಯೊಡನೆ ತಿಳಿಸಿ.

(b) ಬಾಂದೊರೆ, ಹಳೆಗನ್ನಡ, ಪೂವಿನ, ಮಹರ್ಷಿ, ಸೇನಾಳಿ, ...ದ್ವೈರಿ, ಇನ್ಬರ, ಇವುಗಳನ್ನು ಸಂಧಿಬಿಡಿಸಿ ಬರೆಯಿರಿ.

(c) ಮಹತ್ + ಚಕ್ರ, ತಮಃ + ಗುಣ, ಇವುಗಳನ್ನು ಸಂಧಿಮಾಡಿ ...ರೆಯಿರಿ.

II ಬಹುವಚನದಲ್ಲಿ ಅರಸ ಎಂಬ ಶಬ್ದದ ಹೊಸಗನ್ನಡದ ಮತ್ತು ...ಳೆಗನ್ನಡದ ವಿಭಕ್ತಿರೂಪಗಳನ್ನೆಲ್ಲಾ ಬರೆಯಿರಿ.

III ಕೃದ್ವ್ಯಾಚಿಗಳೆಂದರೆ ಏನು? ಅವು ಹೇಗೆ ಆಗುತ್ತವೆ? ಅವು...ಳಲ್ಲಿ ಎಷ್ಟು ಭೇದಗಳುಂಟು? ಉದಾಹರಣೆಗಳನ್ನು ಕೊಡಿ.

IV (a) ಕಂಡು, ಈದು, ಗೆದ್ದು, ಇತ್ತು-ಇವುಗಳ ಧಾತುಗ...ನ್ನು ಕೊಡಿ.

(b) ಬಹುದು, ಬಲ್ಲೆನು, ಕೊಳ್ಳು, ಆಡು ಈ ಸಹಾಯಕ ಕ್ರಿಯಾ...ದಗಳ ಅರ್ಥವನ್ನು ವಿವರಿಸಿ.

(c) ನೇಮ, ಸನ್ನೆ, ಅಂಜೆ, ಅಜ್ಜಂ-ಇವುಗಳ ತತ್ಸಮರೂಪ...ಳನ್ನು ಕೊಡಿ.

(d) ವಿಮಲ, ಶ್ರೀಮಂತ, ಪರಿಚಾರಕ, ಅಪಕಾರ, ದುರ್ಗಮ, ...ವಿಕಲ್ಪ, ಇವುಗಳಲ್ಲಿರುವ ಉಪಸರ್ಗಗಳನ್ನೂ, ಪ್ರತ್ಯಯಗಳನ್ನೂ ಅರ್ಥ...ಹಿತ ಬರೆಯಿರಿ.

(c) ತೆರುಧಾತುವಿನ ನಿಷೇಧನ್ಯೂನ, ವರ್ತಮಾನ ಕೃದ್ವಾಚಿ, ವರ್ತಮಾನ ಕೃನ್ನಾಮ, ವರ್ತಮಾನ ಕ್ರಿಯಾನಾಮ, ಮಧ್ಯಮಪುರುಷ ವಿಧಿ ರೂಪಗಳು-ಇವುಗಳನ್ನು ಬರೆಯಿರಿ.

ಉತ್ತರಗಳು.

I (a) ಸಂಧಿಮಾಡುವಲ್ಲಿ ಮೊದಲಿದ್ದಕ್ಷರಕ್ಕೆ ಪ್ರತಿಯಾಗಿ ಮತ್ತೊಂದಕ್ಷರ ಬರುವುದಕ್ಕೆ ಆದೇಶವೆಂದು ಹೆಸರು. ಉದಾಹರಣೆ- ನೆಲದ + ತಾವರೆ = ನೆಲದಾವರೆ; [ಇಲ್ಲಿ ತ ಕಾರಕ್ಕೆ ದ ಕಾರಾದೇಶ]

(b) ಬಾಂದೊರೆ = ಬಾನ + ತೊರೆ;
ಹಳೆಗನ್ನಡ = ಹಳದು + ಕನ್ನಡ ;
ಪೂವಿನ = ಪೂ + ಇನ ;
ಮಹರ್ಷಿ = ಮಹ + ಋಷಿ ;
ಸೇನೌಘ = ಸೇನಾ + ಓಘ ;
ಷಡ್ವೈರಿ = ಷಟ್ + ವೈರಿ ;
ಇಸ್ಸರ = ಇಸಿದು + ಸರ ;

(c) ಮಹತ್ + ಚಕ್ರ = ಮಹಚ್ಚಕ್ರ ;
ತಮಃ + ಗುಣ = ತಮೋಗುಣ ;

II ಬಹುವಚನದಲ್ಲಿ ಅರಸ ಎಂಬ ಶಬ್ದದ ವಿಭಕ್ತಿರೂಪಗಳು.

ವಿಭಕ್ತಿಗಳು	ಹೊಸಗನ್ನಡ	ಹಳಗನ್ನಡ
ಪ್ರಥಮಾ	ಅರಸರು	ಅರಸರ್
ದ್ವಿತೀಯಾ	ಅರಸರನ್ನು	ಅರಸರಂ
ತೃತೀಯಾ	ಅರಸರಿಂದ	ಅರಸರಿಂ
ಚತುರ್ಥೀ	ಅರಸರಿಗೆ	ಅರಸರ್ಗೆ
ಪಂಚಮೀ	ಅರಸರದೆಸೆಯಿಂದ	ಅರಸರತ್ತಣಿಂ
ಷಷ್ಠೀ	ಅರಸರ	ಅರಸರ
ಸಪ್ತಮೀ	ಅರಸರಲ್ಲಿ	ಅರಸರೊಳ್
ಸಂಬೋಧನಾ	ಅರಸರೇ	ಅರಸರಿರಾ

III ಕೃದ್ವಾಚಿಗಳೆಂದರೆ:-ಗುಣವಾಚಕಗಳಂತ ನಾಮಪದಗಳನ್ನು ವಿಶೇಷಿಸತಕ್ಕವುಗಳು. [ಕಾರಕ ಕೃದಂತಗಳಿಗೆ ಈ ಹೆಸರು.] ಹ್ಯಾಗೆಂದರೆ ಮಾಡುವ ಕೆಲಸ ಎಂಬಲ್ಲಿ ಮಾಡುವ ಎಂಬ ವರ್ತಮಾನ ಕೃದ್ವಾಚಿಯು ಕೆಲಸ ಎಂಬ ನಾಮಪದವನ್ನು ವಿಶೇಷಿಸುತ್ತದೆ. [ಇದರಂತೆಯೇ ಭೂತ ಭವಿಷ್ಯತ್ ನಿಷೇಧರೂಪಗಳಿಗೂ ತಿಳಿಯತಕ್ಕದ್ದು.

ಧಾತುವಿಗೆ ವರ್ತಮಾನ ಭವಿಷ್ಯತ್ ರೂಪಗಳಲ್ಲಿ "ಉವ" ಎಂಬ ಪ್ರತ್ಯಯುವನ್ನೂ ಭೂತರೂಪದಲ್ಲಿ ಇದ, ದ ಎಂಬ ಪ್ರತ್ಯಯಗಳನ್ನೂ ನಿಷೇಧರೂಪದಲ್ಲಿ "ಅದ" ಎಂಬ ಪ್ರತ್ಯಯುವನ್ನೂ ಸೇರಿಸಿದರೆ ಕಾರಕ ಕೃದಂತ ಅಥವಾ ಕೃದ್ವಾಚಿಗಳಾಗುತ್ತವೆ. ಇವುಗಳಲ್ಲಿ ನಾಲ್ಕು ಭೇದಗಳುಂಟು.

ವರ್ತಮಾನ	ಭೂತ	ಭವಿಷ್ಯತ್	ನಿಷೇಧ
ಕೊಡುವ	ಕೊಟ್ಟ	ಕೊಡುವ	ಕೊಡದ

IV (a)

ರೂಪಗಳು	ಧಾತುಗಳು
ಕಂಡು	ಕಾಣು
ಈದು	ಈನು
ಗೆದ್ದು	ಗೆಲ್ಲು
ಇತ್ತು	ಇರು

(b) ಬಹುದು- ಕ್ರಿಯಾರ್ಥಕಾವ್ಯಯ ಯೋಗ್ಯವಾಗಿರುವದೊಂದನ್ನು ಬಲ್ಲೆನು-ಸಾಮರ್ಥ್ಯಕರನ್ನು ತಿಳಿಸುತ್ತದೆ.

ಕೊಳ್ಳುತ- ಕ್ರಿಯೆಯು ತನಗೋಸ್ಕರ ನಡೆಯುವದೆಂಬರ್ಥವನ್ನು ತಿಳಿಸುತ್ತದೆ.

ಆಡು-ಕ್ರಿಯೆಯು ಅನೇಕಸಾರಿ ನಡೆಯುವದೆಂಬರ್ಥವನ್ನು ತಿಳಿಸುತ್ತದೆ.

(c)

ತದ್ಭವ	ತತ್ಸಮ
ನೇಮ	ನಿಯಮ
ಸನ್ನೆ	ಸಂಜ್ಞೆ

ಅಂಚೆ ಹಂಸ

ಅಜ್ಜ ಆರ್ಯ

(d) ಶಬ್ದಗಳ ಮೊದಲಿನಲ್ಲಿ ಸೇರಿಸಲ್ಪಟ್ಟದ್ದರೆ ಉಪಸರ್ಗಗಳೆಂತಲೂ ಕೊನೆಯಲ್ಲಿ ಸೇರಿಸಲ್ಪಟ್ಟದ್ದರೆ ಪ್ರತ್ಯಯಗಳೆಂತಲೂ ತಿಳಿಯಬೇಕು.

ವಿಮಲ	ವಿ	ಇಲ್ಲದುದು
ಶ್ರೀಮಂತ	ಮಂತ	ಉಳ್ಳ
ಪರಿಚಾರಕ	ಪರಿ	ಎಲ್ಲಾಕಡೆ
ಅಪಕಾರ	ಅಪ	ಕೆಟ್ಟ [ದ್ವೇಷ್ಯ]
ದುರ್ಗಮ	ದುರ್	ಕೆಟ್ಟ [ಅಶಕ್ಯ]
ಕವಿಕಲ್ಪ	ಕಲ್ಪ	ಸಮಾನ

(c) ತರುಧಾತುವಿನ-

ನಿಷೇಧನ್ಯೂನ—ತಾರದೆ

ವರ್ತಮಾನ ಕೃದ್ವಾಚಿ—ತರುವ

ವರ್ತಮಾನ ಕೃನ್ನಾಮ—ತರುವವನು

ವರ್ತಮಾನ ಕ್ರಿಯಾನಾಮ—ತರೋಣ

ಮಧ್ಯಮ ಪುರುಷ ವಿಧಿರೂಪಗಳು—

ಏಕವಚನ—ತಾ; ಬಹುವಚನ—ತನ್ನಿ

1892.

I (a) ಗುಣಿತಾಕ್ಷರ, ಸಂಯುಕ್ತಾಕ್ಷರ—ಇವುಗಳಿಗೆ ಎರಡೆರಡು ಉದಾಹರಣೆಗಳನ್ನು ಕೊಡಿ.

(b) ವ ಎಂಬುವದನ್ನು ಕೆಲವೆಡೆಗಳಲ್ಲಿ ಅನುನಾಸಿಕವಾಗಿಯೂ ಮತ್ತು ಕೆಲವೆಡೆಗಳಲ್ಲಿ ನಿರನುನಾಸಿಕವಾಗಿಯೂ ಪ್ರಯೋಗಿಸುತ್ತಾರೆ ಉದಾಹರಿಸಿ.

II (a) ಆಗಮವೆಂದರೇನು?

(b) ಅಲ್ಲಲ್ಲಿ, ಮನೆಯಲ್ಲಿ, ಮಳೆಗಾಲ, ನೀರ್ವಾವು—ಈ ಮಾತುಗಳಲ್ಲಿ ಯಾವಯಾವ ಬಗೆಯ ಸಂಧಿಗಳಿವೆಯೋ ತಿಳಿಸಿ.

III (a) ವಧು, ರಾಮ, ಈ ಮಾತುಗಳ ಚತುರ್ಥೀ ವಿಭಕ್ತಿ ರೂಪಗಳನ್ನೆಲ್ಲಾ ಬರೆಯಿರಿ.

(c) ನಪುಂಸಕಲಿಂಗದ ಲಕ್ಷಣವನ್ನು ಹೇಳಿ ಎರಡು ಉದಾಹರಣೆಗಳನ್ನು ಕೊಡಿ.

IV (a) ಇಸು ಪ್ರತ್ಯಯದ ಪ್ರಯೋಗ ವಿಧಿಗಳು ಆವುವು?

(b) "ಉಂಡ ಮನೆಗೆ ಎರಡು ಬಗೆಯ ಬೇಡ,, ಈ ವಾಕ್ಯದಲ್ಲಿರುವ ಮಾತುಗಳನ್ನು ಒಂದೊಂದಾಗಿ ತೆಗೆದುಕೊಂಡು ಅವುಗಳ ಲಕ್ಷಣಗಳನ್ನು ತಿಳಿಸಿರಿ.

V (a) ದ್ವಿಗು ಸಮಾಸದ ಲಕ್ಷಣವೇನು? ಎರಡು ಉದಾಹರಣೆಗಳನ್ನು ಕೊಡಿ.

(b) ಮುಂದಲೆ, ಖಡ್ಗಾ ಖಡ್ಗಿ—ಇಲ್ಲಿರುವ ಸಮಾಸಗಳ ಹೆಸರುಗಳನ್ನು ಹೇಳಿ.

VI (a) ಅಂಜು, ಹರಟು, ಉಡು, ನಗು—ಇವುಗಳಿಂದ ಹುಟ್ಟಿರುವ ನಾಮಪದಗಳನ್ನು ಹೇಳಿ.

(b) ಬ್ರಾಹ್ಮಣ, ನಿಡುಗಣ್ಣ,—ಇವುಗಳ ಸ್ತ್ರೀಲಿಂಗರೂಪಗಳನ್ನು ಬರೆಯಿರಿ.

(c) ಯಮ, ಯಕ್ಷ—ಇವುಗಳ ತದ್ಭವ ರೂಪಗಳು ಯಾವುವು?

(b) ನೋಡು ಎಂಬ ಧಾತುವಿನ ಪ್ರಥಮಪುರುಷ ಪುಲ್ಲಿಂಗೈಕವಚನದ ನಿಷೇಧರೂಪವನ್ನೂ, ಉತ್ತಮ ಪುರುಷ ಬಹುವಚನದ ವಿಧಿರೂಪವನ್ನೂ ಬರೆಯಿರಿ.

ಉತ್ತರಗಳು.

I (a) ಗುಣಿತಾಕ್ಷರ:—ನೆ, ಚಾ,
ಸಂಯುಕ್ತಾಕ್ಷರ:—ತ್ತ್ರ, ಕ್ಷ್ಮ್ರ,

(b) ಅನುನಾಸಿಕ ವಕಾರಕ್ಕೆ:—ಸಾವೆ, ಮಾವಂತಂ, ಕೋವಣಂ; ನಿರನುನಾಸಿಕ ವಕಾರಕ್ಕೆ:—ಕವಳಂ, ತಿವಳಿ, ತವಕಂ, [ಯ ವ ಲಂಗಳು ಅನುನಾಸಿಕಂಗಳುಂ ನಿರನುನಾಸಿಕಂಗಳುಂ ಅಪ್ಪುವು, ಶಬ್ದಮಣಿದರ್ಪಣ ಸೂತ್ರ 16]

II (a) ಸಂಧಿಮಾಡುವುದರಲ್ಲಿ ಮೊದಲಿದ್ದ ಅಕ್ಷರಗಳಲ್ಲದೆ ನಡುವೆ ಇನ್ನೊಂದಕ್ಷರವು ಬರುವುದಕ್ಕೆ ಆಗಮವೆಂದು ಹೆಸರು ಉದಾ-ಸಂಜೆ + ಆಯಿತು = ಸಂಜೆಯಾಯಿತು [ಯಕಾರಾಗಮ.

(b) ಅಲ್ಲಲ್ಲಿ = ಅಲ್ಲಿ + ಅಲ್ಲಿ; ಇಕಾರ ಲೋಪಸಂಧಿ.
ಮನೆಯಲ್ಲಿ = ಮನೆ + ಅಲ್ಲಿ; ಯಕಾರಾಗಮ ಸಂಧಿ.
ಮಳೆಗಾಲ = ಮಳೆ + ಕಾಲ; ಕ ಕಾರಕ್ಕೆ ಗ ಕಾರಾದೇಶ.
ನೀರ್ವಾವು = ನೀರ್ + ಪಾವು ಪ,, ವ,,

III (a)

ಪ್ರಕೃತಿ.	ಏಕವಚನ.	ಬಹುವಚನ.
ವಧು	ವಧುವಿಗೆ	ವಧುಗಳಿಗೆ
ರಾಮ	ರಾಮನಿಗೆ	ರಾಮರಿಗೆ

(b) ಕನ್ನಡದಲ್ಲಿ ಪುರುಷ ವಾಚಕಗಳಾದ ಶಬ್ದಗಳೂ ಸ್ತ್ರೀ ವಾಚಕಗಳಾದ ಶಬ್ದಗಳೂ ಹೊರತು ಉಳಿದ ಶಬ್ದಗಳು ನಪುಂಸಕ ಲಿಂಗಗಳೆನಿಸುವುವು. ಉದಾ:—ಪರ್ವತ, ನದಿ;

IV (a) (1) 'ಭೋಗ' ಮೊದಲಾದ ಕೆಲವು ಸಂಸ್ಕೃತಭಾವನಾಮಗಳಿಗೂ 'ಕಳವಳ' ಮೊದಲಾದ ಕೆಲವು ಕನ್ನಡ ನಾಮವಾಚಕಗಳಿಗೂ 'ಇಸು' ಪ್ರತ್ಯಯವು ಸೇರಿದರೆ ಕನ್ನಡಕ್ಕೆ ಹೊಸದಾತುಗಳಾಗುವವು.

(2) 'ರಕ್ಷಣ' ಮೊದಲಾದ ಕೆಲವು ಸಂಸ್ಕೃತಭಾವನಾಮ

ಗಳ ಕೊನೆಯ ಅಕ್ಷರವನ್ನು ಲೋಪವಮಾಡಿ ' ಇಸು ' ಪ್ರತ್ಯಯವನ್ನು ಸೇರಿಸಿದರೆ ಕನ್ನಡಕ್ಕೆ ಹೊಸಧಾತುಗಳಾಗುವುವು.

(3) ' ಧಗಧಗ ' ' ಛಟಛಟ ' ಮೊದಲಾದ ಅನುಕರಣಶಬ್ದಗಳಮೇಲೆ ' ಇಸು ' ಪ್ರತ್ಯಯವು ಸೇರಿದರೆ ಕನ್ನಡಕ್ಕೆ ಹೊಸಧಾತುಗಳಾಗುವುವು.

(4) ಎಲ್ಲಾ ಧಾತುಗಳಮೇಲೂ * ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯವು ಬರುವುದು.

(5) ' ಇಸು ' ಪ್ರತ್ಯಯಾಂತಧಾತುಗಳಿಗೆ ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯವು ಪರವಾದರೆ ಮೊದಲಿದ್ದ ಇಸು ಪ್ರತ್ಯಯಕ್ಕೆ ಲೋಪಬರುವುದು.

(6) ' ಏಳು ' ಎಂಬ ಧಾತುವಿಗೆ ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯವು ಸೇರುವಾಗ ಧಾತುವಿನ ದೀರ್ಘಕ್ಕೆ ಹ್ರಸ್ವವೂ ಕೊನೆಯ ಅಕ್ಷರಕ್ಕೆ ದ್ವಿತ್ವ ಬಕಾರವೂ ವಿಕಲ್ಪವಾಗಿ ಬರುವುವು.

(b) ಉಂಡ—ಉಣ್ಣು ಧಾತುವಿನ ಕಾರಕಕೃದಂತದ ಭೂತರೂಪ ಮನೆಗೆ-ರೂಢನಾಮ ವಾಚಕ, ನಪುಂಸಕಲಿಂಗ, ಚತುರ್ಥೀ. ವಿಭಕ್ತಿ, ಏಕವಚನ.

ಎರಡ-ಸಂಖ್ಯಾವಾ, ನಪು, ಲಿಂ, ದ್ವಿತಿಯಾ ವಿ, ಬಹುವಚನ ಬಗೆಯ-ಬಗೆ ಎಂಬ ಧಾತುವಿನ ಭಾವರೂಪ.

ಬೇಡ-ಕ್ರಿಯಾರ್ಥಕಾವ್ಯಯ.

[ಬಗೆಯಬೇಡ-ಧಾತುಗಳಿಗೆ ಬೇಕು, ಬೇಡ, ಮೊದಲಾದ ಕ್ರಿಯಾರ್ಥಕಾವ್ಯಯಗಳು ಪರದಲ್ಲಿದ್ದರೆ ಆ ಧಾತುಗಳಮೇಲೆ ಭಾವಾರ್ಥದಲ್ಲಿ " ಅ " ಪ್ರತ್ಯಯವು ಬರುವುದು.]

(ಶಬ್ದಾದರ್ಶ ಸೂತ್ರ 136)

V (a) ಪೂರ್ವಪದವು ಸಂಖ್ಯಾವಾಚಕವಾಗಿದ್ದು ಉತ್ತರಪದವೊ

ಣನೆ ಸಮಾಸವಾದರೆ ಆ ಸಮಾಸವು ದ್ವಿಗುಸಮಾಸವೆನಿಸುವುದು. ಈ ಸಮಾಸದಲ್ಲಿ ಸಮಾಹಾರವು ತೋರಿದರೆ ಏಕವಚನಾಂತವಾಗಿ ನಿಂತು ಸಮಾಹಾರದ್ವಿಗುವೆನಿಸುವುದು.

ಉದಾ-ಮೂರಾನೆಗಳು; ಎಂಟುದಿಕ್ಕು;

(b) ಮುಂದಲೆ; ಅವ್ಯಯೀಭಾವಸಮಾಸ. [ತಲೆಯ + ಮುಂದು]

ಬಡಿಗ್ಗಡಿಗೆ : ವ್ಯತೀಹಾರ ಲಕ್ಷಣ ಬಹುವ್ರೀಹಿ ಸಮಾಸ

V (a)

ಧಾತುಗಳು	ಭಾವನಾಮಗಳು
ಅಂಜು	ಅಂಜಿಕೆ
ಹರಟು	ಹರಟೆ
ಉಡು	ಉಡಿಗೆ
ನಗು	ನಗೆ

(b) ಬ್ರಾಹ್ಮಣ=ಬ್ರಾಹ್ಮಣಿತಿ; ನಿಡುಗಣ್ಣ=ನಿಡುಗಣ್ಣೆ;

(c) ಯಮ=ಜವ; ಯತ್ನ=ಜತನ; [ತದ್ಭವರೂಪಗಳು.]

(b) ನೋಡು ಎಂಬ ಧಾತುವಿನ:—

ಪ್ರಥಮಪುರುಷ ಪುಲ್ಲಿಂಗೈಕವಚನದ ನಿಷೇಧರೂಪ, ನೋಡನು

ಉತ್ತಮಪುರುಷ ಬಹುವಚನದ ವಿಧಿರೂಪ ನೋಡೋಣ.

1898.

(a) ಯೋಗವಾಹ, ಅನ್ವರ್ಥನಾಮ, ಸಮಾಸ—ಇವುಗಳ ಅರ್ಥವನ್ನು ವಿವರಿಸಿ ಒಂದೊಂದು ಉದಾಹರಣೆಯನ್ನು ಕೊಡಿ

(b) ಕನ್ನಡದಲ್ಲಿ ಯಾವ ಯಾವ ಸಂದರ್ಭಗಳಲ್ಲಿ ಮಹಾಪ್ರಾಣಾಕ್ಷರಗಳು ಉಪಯೋಗಿಸಲ್ಪಡುತ್ತವೆ. ಉದಾಹರಣೆಗಳೊಡನೆ ತಿಳಿಸಿ.

(c) ನಡೆ, ಕುಣಿ, ತಾಳು, ಬಿಕ್ಕು—ಇವುಗಳ ಭಾವನಾಮಗಳನ್ನು ಬರೆ.

II (a) ಕಿರಿದು- ಈ ಪದದ ವಿಭಕ್ತಿರೂಪಗಳನ್ನೆಲ್ಲ ಬರೆ.

(b) ಅವನೇ + ಇವನು, ವಾಕ್ + ಮಯ, ಎಳದು + ಕರು, ಇವು ಗಳನ್ನು ಸಂಧಿಮಾಡಿ ಬರೆಯಿರಿ.

(c) ಅಂಗೈ, ಹುಣ್ಣು ಕಾಯಿ, ಆ ಮನೆ, ಮದುವೇಮಾಡು-ಇವು ಯಾವ ಸಮಾಸಗಳು ?

III (a) ಹೊಗು, ಬೇ, ಈಸು, ಸೀನು—ಈ ಧಾತುಗಳ ಉತ್ತಮ ಪುರುಷೈಕವಚನ ಭೂತರೂಪಗಳನ್ನು ಬರೆಯಿರಿ.

(b) ಗುಳ್ಳೆಗಣ್ಣ, ಅಗಸ, ಜಾಣ, ಜೋಗಿ—ಈ ಪದಗಳಿಗೆ ಸ್ತ್ರೀ ಪ್ರತ್ಯಯಗಳನ್ನು ಹಚ್ಚಿ ಬರೆಯಿರಿ.

(c) ಸಂಸ್ಕೃತದಲ್ಲಿ ಅಕಾರಾಂತ ಪದಗಳು ಕನ್ನಡದಲ್ಲಿ ಎಕಾರಾಂತ ವಾಗುವುದಕ್ಕೆ ನಾಲ್ಕು ಉದಾಹರಣೆಗಳನ್ನು ಕೊಡಿ.

IV (a) ಪಟಿಕ, ಬತ್ತಿ, ಚಿತ್ತ, ಹಗ್ಗ—ಇವುಗಳ ತತ್ಸಮಗಳನ್ನು ಬರೆಯಿರಿ.

(b) ಶೂನ್ಯ, ಶಯ್ಯಾ, ವಿಜ್ಞಾನ, ಕ್ರಕಚ—ಇವುಗಳ ತದ್ಭವಗಳನ್ನು ಬರೆಯಿರಿ.

(c) ಹೊಮ್ಮು, ಮಬ್ಬು, ಕತ್ತಲೆ—ಇವಕ್ಕೆ ಸರಿಯಾದ ಹಳಗನ್ನಡ ರೂಪಗಳನ್ನು ಬರೆಯಿರಿ.

V ಕೆಳಗಿನ ವಾಕ್ಯಗಳನ್ನು ಆವರಣಚಿಹ್ನೆಯೊಳಗೆ ಹೇಳಿರುವ ಕ್ರಿಯಾರೂಪಗಳನ್ನು ಬರೆದು ಪೂರ್ತಿಮಾಡಿರಿ.

1. ರಾಮನು ನಾಳೆ (ಬರು ಧಾತುವಿನ ಸಂಭಾವನಾರೂಪ) ______
2. ಕೃಷ್ಣನು ನಾಳೆ (ಬರು ಧಾತುವಿನ ನಿಷೇಧರೂಪ.) ______
3. ದೊರೆಯು ರಾಜ್ಯವನ್ನು ಚೆನ್ನಾಗಿ (ಆಳು ಧಾತುವಿನ ವಿಧಿ ______ ರೂಪ.
4. ನಾನೂ ನೀನೂ (ಓದು ಧಾತುವಿನ ವಿಧಿರೂಪ) ______
5. ನೀನೂ ಅವನೂ (ಈ ಧಾತುವಿನ ಭೂತರೂಪ) ______

ಉತ್ತರಗಳು.

I (a) ಬಿಂದು ವಿಸರ್ಗಗಳು ಯಾವದಾದರೂ ಒಂದು ಸ್ವರದ ಸಹಾಯವಿದ್ದ ಹೊರತು ಉಚ್ಚಾರಣೆಗೆ ಬಾರದಕಾರಣ ಇವುಗಳಿಗೆ ಯೋಗವಾಹನಗಳೆಂದು ಹೆಸರು. [ಯೋಗ-ಸಂಬಂಧವನ್ನು ವಾಹ-ಹೊಂದಿರುವಂಥಾದ್ದು] ಉದಾಹರಣೆ ಃ

ಅನ್ವರ್ಥನಾಮ-ಅರ್ಥಕ್ಕೆ ಅನುಸಾರವಾದ ಹೆಸರನ್ನು ಹೇಳುವ ಮಾತು. ಉದಾಹರಣೆ-ಕುರುಡ.

ಸಮಾಸ-ಸುಬಂತಪದಗಳು ಒಂದಕ್ಕೊಂದು ಎಡೆಬಿಡದೆ ಕೂಡಿ ಮಧ್ಯಗತವಾದ ವಿಭಕ್ತಿಪ್ರತ್ಯಯ ಲೋಪವನ್ನು ಹೊಂದಿ ಒಂದರ್ಥವನ್ನು ಕೊಡುವ ಒಂದು ಪದವಾಗುವುದೇ ಸಮಾಸವು. ಉ. ರಾಯಸಭೆ;

(b) ಸಂಖ್ಯಾವಾಚಕಗಳಲ್ಲಿಯೂ ಅನುಕರಣಾವ್ಯಯಗಳಲ್ಲಿಯೂ ಅಪೂರ್ವವಾಗಿ ಕೆಲವು ಶಬ್ದಗಳಲ್ಲಿಯೂ ಮಹಾಪ್ರಾಣಾಕ್ಷರಗಳು ಬರುತ್ತವೆ. ಹ್ಯಾಗಂದರೆ-ಎಂಭತ್ತು, ಧೊಪ್ಪನೆ, ಠಾವು.

(c)

ಧಾತುಗಳು	ಭಾವನಾಮಗಳು.
ನಡೆ	ನಡುವಳಿ; ನಡತೆ
ಕುಣಿ	ಕುಣಿತ
ತಾಳು	ತಾಳ್ಮೆ
ಬಿಕ್ಕು	ಬಿಕ್ಕಲು

II (a) ಕಿರಿದು—ಎಂಬುವದರ ವಿಭಕ್ತಿರೂಪಗಳು.

ಪ್ರಥಮಾ	ಕಿರಿದು
ಸಂಬೋಧನಾ	ಕಿರಿದೇ
ದ್ವಿತೀಯಾ	ಕಿರಿದನ್ನು
ತೃತೀಯಾ	ಕಿರಿದರಿಂದ
ಚತುರ್ಥೀ	ಕಿರಿದಕ್ಕೆ
ಪಂಚಮೀ	ಕಿರಿದರ ದೆಸೆಯಿಂದ

ಷಷ್ಠೀ	ಕಿರಿದರ
ಸಪ್ತಮೀ	ಕಿರಿದಲ್ಲಿ

(b) ಅವನೇ + ಇವನು = ಅವನೇ ಇವನು

ನಾಕ್ + ಮಡು = ನಾಲ್ವಡು

ಎಳದು + ಕರು = ಎಳಗರು

(c) ಅಂಗೈ = ಕೈಯ + ಅಡಿ; ಅವ್ಯಯೀಭಾವ ಸಮಾಸ.
ಹಣ್ಣುಕಾಯಿ = ಹಣ್ಣೂ + ಕಾಯಿಯೂ; ದ್ವಂದ್ವ ಸಮಾಸ.
ಆಮನೆ = ಅದು + ಮನೆ; ಗಮಕ ಸಮಾಸ.
ಮದುವೆ ಮಾತು = ಮದುವೆಯನ್ನು + ಮಾತು; ಕ್ರಿಯಾಸಮಾಸ.

III (a)

ಪೊಗು	ಪೊಕ್ಕನು
ಬೇ	ಬೆಂದನು
ಕಾಸು	ಕಾಸಿದನು
ನೇಸು	ನೇತನು.

(b)

ಪದಗಳು.	ಸ್ತ್ರೀಪ್ರತ್ಯಯಗಳು.
ಗುಳ್ಳಗಣ್ಣ	ಗುಳ್ಳಗಣ್ಣೆ
ಅಗಸ	ಅಗಸಗಿತ್ತಿ
ಜಾಣ	ಜಾಣೆ
ಜೋಗಿ	ಜೋಗಿತಿ

(c) ಮಾಲಾ-ಮಾಲೆ ಗಂಗಾ-ಗಂಗೆ
ಬಾಲಾ-ಬಾಲೆ ಕಾಂತಾ-ಕಾಂತೆ

IV (a)

ತದ್ಭವಗಳು.	ತತ್ಸಮಗಳು.
ಪಳಿಕ	ಸ್ಫಟಿಕ
ಬತ್ತಿ.	ವರ್ತಿ
ಚಿತ್ತ	ಚಿತ್ರ

ಹಗ್ಗ	ಪ್ರಗ್ರಹ

(b)

ತತ್ಸಮಗಳು.	ತದ್ಭವಗಳು.
ಶೂನ್ಯ	ಸೊನ್ನೆ
ಶಯ್ಯಾ	ಸೆಜ್ಜೆ
ವಿಜ್ಞಾನ	ಬಿನ್ನಣ
ಕ್ರಕಚ	ಗರಗಸ

(c)

ಹೊಸಗನ್ನಡ.	ಹಳೇಗನ್ನಡ.
ಹೊಮ್ಮು	ಪೊಣ್ಮು
ಮಬ್ಬು	ಮಬುರ್
ಕತ್ತಲೆ	ಕಳ್ತಲೆ

V 1. ರಾಮನು ನಾಳೆ ಬಂದಾನು.

2. ಕೃಷ್ಣನು ನಾಳೆ ಬರನು.

3. ದೊರೆಯು ರಾಜ್ಯವನ್ನು ಚೆನ್ನಾಗಿ ಆಳಲಿ.

4. ನಾನೂ ನೀನೂ ಓದೋಣ.

5. ನೀನೂ ಅವನೂ ಇತ್ತೀರೆ.

1894

I (a) ಸಂಧಿ ಅಂದರೆ ಏನು?

(b) ಯಾವಾಗ ಸಂಧಿಕಾರ್ಯ ಜರುವುದಿಲ್ಲ? ಉದಾಹರಣೆಯೊಡನೆ ವಿವರಿಸಿರಿ.

(c) ಇವುಗಳನ್ನು ಸಂಧಿಮಾಡಿ ಬರೆಯಿರಿ.
ಹರಿ + ಅವನು, ಹರಿ + ಅನುಜ, ಗುರು + ಆತನು, ಗುರು + ಆತ್ಮಜ, ಮಹತ್ + ಋಷಿ, ಆ + ಋಷಿ;

II (a) ಈ ಪದಗಳಿಗೆ ಬಹುವಚನ ರೂಪಗಳನ್ನು ಬರೆಯಿರಿ.

ಅಕ್ಕ, ಹೆಂಗಸು, ನವಿ, ಚಿಕ್ಕದು, ಮಗು.

(b) ಇವುಗಳ ಪುಲ್ಲಿಂಗ ಬಹುವಚನರೂಪಗಳನ್ನು ಬರೆಯಿರಿ.
ಅಪ್ಪ, ಹೊಸದು, ಮಾಡಿದುದು.

(c) ಚತುರ್ಥೀವಿಭಕ್ತಿಯಲ್ಲಿ, ಕೆ, ಪ್ರತ್ಯಯವು ಯಾವಾಗ ಬರುವುದು? ಉದಾಹರಣೆಯನ್ನು ಕೊಡಿ.

III (a) "ಎರಡು" ಎಂಬುದರ ಎಲ್ಲಾ ವಿಭಕ್ತಿರೂಪಗಳನ್ನೂ ಬರೆಯಿರಿ.

(b) "ಉಳು" ಧಾತುವಿನ ಕರ್ತ್ರರ್ಥಕ ಭೂತರೂಪ ಪ್ರಥಮ ಪುರುಷದ ರೂಪಗಳನ್ನು ಬರೆಯಿರಿ.

IV (a) ಈ ಧಾತುಗಳ ಭಾವನಾಮಗಳನ್ನು ಬರೆಯಿರಿ.
ಉಡು, ನಡೆ, ಬೇಸರು, ಮರೆ.

(b) ಇವುಗಳ ಕ್ರಿಯಾರೂಪಗಳನ್ನು ಬರೆಯಿರಿ.
ಸಲುವಳಿ, ಕಾಟಿ, ಬಪ್ಪಿತ, ತಾಳ್ಮೆ.

V ಈ ಕೆಳಗಿನ ವಾಕ್ಯಗಳನ್ನೆಲ್ಲಾ ಸೇರಿಸಿ ಒಂದು ಸಾಮಾನ್ಯ ವಾಕ್ಯವಾಗಿ ಬರೆಯಿರಿ.
(1) ಮಧ್ಯಾಹ್ನವಾಗಿತ್ತು. (2) ರಾಮನು ಒಂದು ಮನೆಯ ಬಾಗಿಲಲ್ಲಿ ನಿಂತಿದ್ದನು. (3) ಆ ಮನೆಯು ಅಂಗಡೀ ಬೀದಿಯಲ್ಲಿತ್ತು.

ಉತ್ತರಗಳು.

I

I (a) ಶ್ರಾವ್ಯವಾಗುವಂತೆ ಎರಡು ಅಕ್ಷರಗಳನ್ನು ಸೇರಿಸಿ ಉಚ್ಚರಿಸುವುದು ಸಂಧಿಯೆನಿಸುವುದು.

(b) ಸಂಧಿಕಾರ್ಯವು ಉಂಟಾಗದ ಸ್ಥಳಗಳು ;—

1. ಪ್ಲುತಕ್ಕೆ ಸ್ವರಪರವಾದರೆ ಸಂಧಿಕಾರ್ಯ ಬರುವುದಿಲ್ಲ.
ಉದಾ;— ಅಣ್ಣಾ 2 ಓಡಿಬಾ, ಕು ಕೂ ಕೂ 3 ಎಂದು;

2. ಅದು ಎಂಬ ಸರ್ವನಾಮವು ಸಮಾಸವಾಗುವಲ್ಲಿ ಆ ಎಂದಾಗುವದು. ಆ ರೀತಿಯಾಗಿ ಉಳಿದ ಆ ಎಂಬ ಶಬ್ದಕ್ಕೆ ಅ ಆ ಐ ಔ ಎಂಬ ವರ್ಣಗಳು ಸೇರಿದರೆ ಸಂಧಿಯಿಲ್ಲ.

ಉದಾ;— ಆ ಅರಸು, ಆ ಆನೆ, ಆ ಐಶ್ವರ್ಯ, ಆ ಔದಾರ್ಯ.

3. ನಿಪಾತ, ಅವಧಾರಣೆ, ವಿಶಂಕೆಗಳಿಗೆ ಸ್ವರವು ಪರವಾದರೆ ಸಂಧಿಯಿಲ್ಲ. ಉದಾ;—

ನಿಪಾತಕ್ಕೆ - ಓಹೋ ಇದೇನು.

ಅವಧಾರಣೆಗೆ - ಅವನೇ ಇವನು.

ವಿಶಂಕೆಗೆ - ಅವನೋ ಇವನೋ,

4. ರೂಢಿ ಕೆಡುವ ಪಕ್ಷದಲ್ಲಿಯೂ, ಮೆಚ್ಚಿಕೆಯಲ್ಲಿಯೂ, ಆಕ್ಷೇಪಣೆಯಲ್ಲಿಯೂ, ದುಃಖದಲ್ಲಿಯೂ, ಸಂಧಿಯಿಲ್ಲ:—

ರೂಢಿ ಕೆಡುವಿಕೆಗೆ - ಮನೆ ಇತ್ತು.

ಮೆಚ್ಚಿಕೆಗೆ - ಭಲಾ ಅವನೇ ಧೀರ.

ಆಕ್ಷೇಪಣೆಗೆ - ಇದೇನೋ ಬಿಮ್ಮಿಕೆ.

ದುಃಖಕ್ಕೆ - ಅಯ್ಯೋ ಇನ್ನೇನು.

(c) ಹರಿ + ಅವನು = ಹರಿಯವನು. [ಹರಿ + ಯ್ + ಅವನು.]

ಹರಿ + ಅನುಜ = ಹರ್ಯನುಜ, [ಇ + ಅ = ಯ]

ಗುರು + ಆತನು = ಗುರುವಾತನು. [ಗುರು + ವ್ + ಆತನು]

ಗುರು + ಆತ್ಮಜ = ಗುರ್ವಾತ್ಮಜ. [ಉ + ಆ = ವಾ]

ಮಹತ್ + ಋಷಿ = ಮಹರ್ಷಿ.

ಅ + ಋಷಿ = ಅಋಷಿ.

[ಸಂಸ್ಕೃತ ಪದಗಳಲ್ಲಿನ ಸ್ವರಗಳು ಸೇರಿ ಸಂಧಿಯಾದರೆ ಸವರ್ಣದೀರ್ಘ, ಯಣ್, ಗುಣ, ವೃದ್ಧಿ, ಸಂಧಿಗಳೆಲ್ಲ ಉಂಟಾಗುತ್ತವೆಂಬುದೂ, ಕನ್ನಡಪದ ಮಿಶ್ರವಾದರೆ ಲೋಪ, ಆಗಮ, ಆದೇಶಗಳೆಲ್ಲ ಉಂಟಾಗುತ್ತವೆಂಬುದೂ ಜ್ಞಾಪಕದಲ್ಲಿಡಬೇಕು. ಕನ್ನಡಪದಗಳೇ ಸೇರಿದಾಗ್ಯೂ ಲೋಪಾದಿ

ಸಂಧಿಗಳು ಬರುತ್ತವೆ.]

II (a)

ಪದಗಳು	ಬಹುವಚನರೂಪಗಳು.
ಅಕ್ಕ	ಅಕ್ಕಂದಿರು.
ಹೆಂಗಸು	ಹೆಂಗಸರು.
ನದಿ	ನದಿಗಳು.
ಚಿಕ್ಕದು	ಚಿಕ್ಕವುಗಳು.
ಮಗು	ಮಕ್ಕಳು.

(b)

ಪದಗಳು	ಪುಲ್ಲಿಂಗ ಬಹುವಚನ ರೂಪಗಳು
ಅಪ್ಪ	ಅಪ್ಪರು. [ಅನೆಬರು.]
ಹೊಸದು	ಹೊಸಬರು.
ಮಾಡಿದುದು	ಮಾಡಿದವರು.

(c) ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೆ ಏಕವಚನದಲ್ಲಿ 'ಇಗೆ' ಪ್ರತ್ಯಯಕ್ಕೆ ಪ್ರತಿಯಾಗಿ 'ಕ್ಕೆ' (ಕೆ) ಪ್ರತ್ಯಯವು ಬರುವುದು. ಉದಾ-ಮರಕ್ಕೆ, (ಮರಕೆ) ; ಮೃಗಕ್ಕೆ (ಮೃಗಕೆ) ;

III ಎರಡು, ಎರಡನ್ನು, ಎರಡರಿಂದ, ಎರಡಕ್ಕೆ, ಎರಡರ ದೆಸೆಯಿಂದ, ಎರಡರ, ಎರಡರಲ್ಲಿ, (ಸಂಬೋಧನಾವಿಭಕ್ತಿಯು ಸಂಖ್ಯಾವಾಚಕಗಳಿಗೆ ಇಲ್ಲ.)

(d)

	ಏಕವಚನ.	ಬಹುವಚನ.
ಪುಲ್ಲಿಂಗ	ಉತ್ತಮನು.	ಉತ್ತಮರು.
ಸ್ತ್ರೀಲಿಂಗ	ಉತ್ತಮಳು,	ಉತ್ತಮರು.
ನಪುಂಸಕಲಿಂಗ	ಉತ್ತಮದು,	ಉತ್ತಮವು.

IV (a)

ಧಾತುಗಳು	ಭಾವನಾಮಗಳು
ಉಡು	ಉಡಿಗೆ
ನಡೆ	ನಡವಳಿ
ಬೇಡು	ಬೇಡಿಕೆ.

ಮರೆ ಮರೆವು [ಮರೆಯುವಿಕೆ]

(b)

ಭಾವನಾಮಗಳು	ಧಾತುಗಳು
ಸಲುವಳಿ	ಸಲು
ಕಾಟ	ಕಾಡು
ಒಪ್ಪಿತ	ಒಪ್ಪು
ತಾಳ್ಮೆ	ತಾಳು

V ರಾಮನು ಮಧ್ಯಾಹ್ನದ ಹೊತ್ತು ಅಂಗಡಿ ಬೀದಿಯಲ್ಲಿನ ಮನೆಯ ಬಾಗಿಲಿನಲ್ಲಿ ನಿಂತಿದ್ದನು.

ಇದರಲ್ಲಿ ರಾಮನೆಂಬ ಕರ್ತೃಪದವೂ ನಿಂತಿದ್ದನೆಂಬ ಒಂದೇ ಪೂರ್ಣಕ್ರಿಯಾಪದವೂ ಇರುವ ಕಾರಣ ಸಾಮಾನ್ಯವಾಕ್ಯವಾಯಿತು.

[ಕರ್ತೃ ಮೊದಲಾದ ಕಾರಕಗಳೊಡಗೂಡಿ ಸಂಪೂರ್ಣಾರ್ಥವನ್ನುಳ್ಳ ಒಂದು ಕ್ರಿಯಾಪದವನ್ನುಳ್ಳುದು ಸಾಮಾನ್ಯವಾಕ್ಯವೆನಿಸುವುದು.]

1895.

I ಪ್ರಕೃತಿಭಾವವೆಂದರೇನು? ಯಾವ ಯಾವ ಸಂದರ್ಭಗಳಲ್ಲಿ ಪ್ರಕೃತಿಭಾವವು ಉಂಟಾಗುವುದು? ಉದಾಹರಣೆಗಳನ್ನು ಕೊಡಿರಿ.

II (a) ಹೊಲ, ಜಲ, ಮಣೆ, ಗಿಣಿ, ಮರ, ವರ, ನರಿ, ಗಿರಿ,—ಇವುಗಳಲ್ಲಿ ದೇಶ್ಯ ಶಬ್ದಗಳನ್ನೂ, ತತ್ಸಮ ಶಬ್ದಗಳನ್ನೂ ಬೇರೆಬೇರೆ ವಿಂಗಡಿಸಿ ಬರೆಯಿರಿ.

(b) ‘ಅಪ್ಪ’ ಎಂಬ ಶಬ್ದದ ಎಲ್ಲಾ ವಿಭಕ್ತಿ ರೂಪಗಳನ್ನೂ ಬರೆಯಿರಿ.

III (a) ಹೊಗು, ಬೇಸರು, ಏಳು, ನೀಸು—ಎಂಬ ಧಾತುಗಳ ಭೂತರೂಪ ಪ್ರಥಮ ಪುರುಷೈಕವಚನವನ್ನು, ತರು, ಬರು, ಎಂಬ ಧಾತುಗಳ ನಿಷೇಧರೂಪದ ಉತ್ತಮ ಪುರುಷೈಕವಚನವನ್ನು ಮತ್ತು ವಿಧ್ಯರ್ಥರೂಪದ ಮಧ್ಯಮ ಪುರುಷ ಬಹುವಚನವನ್ನು, ಬರೆಯಿರಿ.

(b) ಸೆಳೆ, ಊತು, ಹದಗು, ಮರೆ ಎಂಬ ಧಾತುಗಳಿಂದ ಬರುವ ಭಾವನಾಮಗಳನ್ನು, ಮುರಿ, ತಿರಿ, ಕರುಬು- ಎಂಬ ಧಾತುಗಳಿಂದ ಬರುವ ಕೃನ್ನಾಮಗಳನ್ನು ಬರೆಯಿರಿ.

IV (a) ಹಿರೆಗಣ್ಣು, ಕೆಂದಾವರೆ, ಮುಂಗಾಲು; ಈ ಪುಸ್ತಕ-ಇವು ಯಾವ ಸಮಾಸಗಳು ?

(b) ನಡು + ನಡು, ಕೆಣಕಿ + ಕೆಣಕಿ, ಮೊದಲು + ಮೊದಲು, ಮೆಲ್ಲನೆ + ಮೆಲ್ಲನೆ-ಇವುಗಳನ್ನು ಕೂಡಿಸಿ ಬರೆಯಿರಿ.

V (a) ಅಚ್ಚು, ಪುಸ್ತಕ, ಇಟ್ಟಿಗೆ, ಬಿಲ್ವಪತ್ರ, ಎದೆ, ಚೀಲ, ಪಾತ್ರಿ, ಅಮರಿ- ಇವುಗಳಲ್ಲಿ ತತ್ಸಮಶಬ್ದಗಳಿಗೆ ತದ್ಭವಗಳನ್ನು, ತದ್ಭವ ಶಬ್ದಗಳಿಗೆ ತತ್ಸಮ ಶಬ್ದಗಳನ್ನು ಬರೆಯಿರಿ.

(b) ತೃತೀಯಾ ವಿಭಕ್ತಿಯು ಯಾವ ಯಾವ ಅರ್ಥಗಳಲ್ಲಿ ಬರುತ್ತದೆ ? ಉದಾಹರಣೆಗಳನ್ನು ಕೊಡಿ.

VI (a) ಬಂಡಿಗಳೂ ಆಳುಗಳೂ—ಕಾಲಾಳುಗಳೂ ಕುದುರೆಗಳೂ—ನಾನೂ ರಾಮನೂ—ಕೃಷ್ಣನೂ ನೀನೂ—ಇಲ್ಲಿ ಗೆರೆ ಎಳೆದಿರುವ ಸ್ಥಳಗಳಲ್ಲಿ ಯಾವುದಾದರೂ ಒಂದು ಕ್ರಿಯಾಪದವನ್ನು ಉಪಯೋಗಿಸಿ ವಾಕ್ಯಗಳನ್ನು ಪೂರ್ತಿಮಾಡಿ ಬರೆಯಿರಿ.

(b) ಸಾಲವನ್ನು ತೀರಿಸಿಬಿಟ್ಟನು— ಮಾರ್ಗವನ್ನು ತೋರಿಸಿ ಕೊಟ್ಟನು—ಹಣವನ್ನು ತೆಗೆದುಕೊಂಡೆನು—ಇಲ್ಲಿ ಬಿಡು, ಕೊಡು, ಕೊಳ್ಳು ಎಂಬ ಧಾತುಗಳು ಸೇರಿ ಯಾವ ಅರ್ಥವನ್ನು ಕೊಡುತ್ತವೆ ?

VII (a) ವಿಭಕ್ತಿಗಳು ವ್ಯತ್ಯಸ್ತವಾಗಿ ಬರುವುದಕ್ಕೆ ಮೂರು ಉದಾಹರಣೆಗಳನ್ನು ಕೊಡಿ.

(b) ವಾಕ್ಯವೆಂದರೆ ಏನು? ಬಲಶಾಲಿಯಾದ ಭೀಮಸೇನನು ದುಷ್ಟನಾದ ಬಕಾಸುರನನ್ನು ಲೋಕೋಪಕಾರಾರ್ಥವಾಗಿ ಸಂಹರಿಸಿದನು. ಇದು ಎಂಥ ವಾಕ್ಯ? ಈ ವಾಕ್ಯದಲ್ಲಿರುವ ಶಬ್ದಗಳ ಸ್ವರೂಪವನ್ನೂ ಪರಸ್ಪರ ಸಂಬಂಧವನ್ನೂ ತಿಳಿಸಿರಿ.

ಉತ್ತರಗಳು.

I ಪ್ರಕೃತಿಭಾವ- ಸಂಧಿಕಾರ್ಯಗಳಾದ ಲೋಪ, ಆಗಮ ಆದೇಶಗಳು ಬಾರದೆ ಇರುವುದು.

ಪ್ರಕೃತಿ ಭಾವವುಂಟಾದ ಸಂದರ್ಭಗಳನ್ನೂ ಉದಾಹರಣೆಗಳನ್ನೂ ೧೯೧೮ನೇ ಇಸವಿಯ I (a) ಯಲ್ಲಿ ಬರೆದಿರುತ್ತೆ.

II (a) ತತ್ಸಮಗಳು-ಜನ, ಮಣಿ, ವರ, ನದಿ, ಗಿರಿ;
ದೇಶ್ಯಗಳು- ಹೊಲ, ಗಿಣಿ, ಮರ;

(b) ಅಷ್ಟು, ಅಷ್ಟನ್ನು ಅಷ್ಟರಿಂದ, ಅಷ್ಟಕ್ಕೆ, ಅಷ್ಟರದೆಸೆಯಿಂದ, ಅಷ್ಟರ, ಅಷ್ಟರಲ್ಲಿ; [ಸಂಬೋಧನಾ ವಿಭಕ್ತಿಯು ಪರಿಣಾಮವಾಚಕಗಳಿಗೆ ಇಲ್ಲ.]

III (a) ಭೂತರೂಪ ಪ್ರಥಮಪುರುಷೈಕವಚನ ರೂಪಗಳು;-
ಹೊಕ್ಕನು, ಬೇಸತ್ತನು, ಮಿಂದನು ನೀತನು;
ನಿಷೇಧರೂಪ ಉತ್ತಮಪುರುಷೈಕವಚನ ರೂಪಗಳು:—
ತರೆನು, (ತಾರೆನು) ಬರೆನು, (ಬಾರೆನು;)
ವಿಧ್ಯರ್ಥರೂಪದ ಮಧ್ಯಮಪುರುಷ ಬಹುವಚನ;—
ತನ್ನಿ, ಬನ್ನಿ;

(b) ಭಾವನಾಮಗಳು- ನೆಳವು ಊಟ, ಹರಗಣೆ, ಮರವು; ಕೃನ್ನಾಮಗಳು- ನುಡುಕ, ತಿರುಕ, ಕರುಬ;

IV (a) ಓರೆಗಣ್ಣು - ಸಮಾನಾಧಿಕರಣಬಹುವ್ರೀಹಿ ಸಮಾಸ.
ಕೆಂದಾವರೆ-ವಿಶೇಷಣ ಪೂರ್ವಪದ ಕರ್ಮಧಾರಯ ಸಮಾಸ.
ಅಂಗಾಲು-ಅವ್ಯಯೀ ಭಾವ ಸಮಾಸ.
ಈ ಪುಸ್ತಕ—ಗಮಕ ಸಮಾಸ.

(b) ನಟ್ಟನಡು, ಕೊನೆಕೊನೆಕಿ, ಮೊಟ್ಟಮೊದಲು, ಮೆಲ್ಲಮೆಲ್ಲನೆ.

V (a)

ತತ್ಸಮಗಳು.	ತದ್ಭವಗಳು.
ಅಕ್ಷ	ಅಚ್ಚು
ಪುಸ್ತಕ	ಹೊತ್ತಗೆ
ಅಷ್ಟಕಾ	ಅಟ್ಟಗೆ
ಬಿಲ್ವಪತ್ರ	ಬಿಲ್ಲಪತ್ರೆ
ಹೃದಯ	ಎದೆ
ಚೇಲ	ಸೀರೆ
ಪ್ರತಿಪತ್	ಪಾಡ್ಯಮಿ
ಅಮರಿ	ಅವರೆ

(b) (I) ಹೇತು, ಕರ್ತೃ, ಕರಣಾರ್ಥಗಳಲ್ಲಿರುವ ಶಬ್ದಗಳ ಮೇಲೆ ತೃತೀಯಾ ವಿಭಕ್ತಿಯು ಬರುವದು. ಉದಾ—
ಹೇತ್ವರ್ಥಕ್ಕೆ—ವಿದ್ಯೆಯಿಂದ ಯಶಸ್ಸುಂಟಾಗುವುದು.
ಕರ್ತ್ರರ್ಥಕ್ಕೆ—ಬಡಗಿಯಿಂದ ಪೆಟ್ಟಿಗೆ ಮಾಡಲ್ಪಟ್ಟಿತು.
ಕರಣಾರ್ಥಕ್ಕೆ—ಕರಣಿಕನು ಲೇಖಣಿಯಿಂದ ಬರೆದನು.

(2) ಎಡೆಬಿಡದೆ ಒಂದೇ ಕ್ರಿಯೆ ನಡೆಯಿತೆಂಬ ಅರ್ಥವು ತೋರಿದರೆ ಕಾಲವಾಚಕ, ಅಧ್ವವಾಚಕಗಳ ಮೇಲೆಯೂ ಬರುವದು. ಉದಾ.
ಕಾಲವಾಚಕಕ್ಕೆ—ಒಂದು ವರ್ಷದಿಂದ ಹೇಳುತ್ತಾನೆ.
ಅಧ್ವವಾಚಕಕ್ಕೆ—ಎರಡು ಮೈಲಿಯಿಂದ ನಡೆದೆನು.

(3) ಸಕರ್ಮಕ ಧಾತುಗಳು ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯಕರ್ತೃವಾಚಕನಮೇ

ಲೆ ತೃತೀಯಾ ವಿಭಕ್ತಿಯು ಬರುವದು. ಉದಾ—
ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿಸಿದನು.

VI (a) ಬಂಡಿಗಳೂ ಆಳುಗಳೂ ಬಂದರು. [ಪು. ಬ. ಕ್ರಿಯೆ]
ಕಾಲಾಳುಗಳೂ ಕುದುರೆಗಳೂ ಹೋದುವು. [ನಪುಂ. ಕ್ರಿಯೆ]
ನಾನೂ ರಾಮನೂ ಇದ್ದೆವು. [ಉತ್ತಮಪುರುಷ ಬಹುವ]
ಕೃಷ್ಣನೂ ನೀನೂ ಮಲಗಿದಿರಿ. [ಮಧ್ಯಮ ಪುರುಷ ಕ್ರಿ]
(b) ತೀರಿಸಿಬಿಟ್ಟನು-ಕ್ರಿಯೆ ಸಂಪೂರ್ಣವಾಗಿ ನಡೆಯಿತು.
ಎಂಬಅರ್ಥದಲ್ಲಿ ಬಿಡು ಧಾತು;
ತೋರಿಸಿಕೊಟ್ಟನು-ಪರಾರ್ಥವಾಗಿ..........ಕೊಡು ಧಾತು
ತೆಗೆದುಕೊಂಡೆನು-ಸ್ವಾರ್ಥವಾಗಿ .... ಕೊಳ್ಳುಧಾತು

VII (a) ತೃತೀಯಾವಿಭಕ್ತಿಗೆ ಬದಲಾಗಿ ಸಪ್ತಮಿ ಬರುವುದಕ್ಕೆ-
ಕೊಡಲಿಯಿಂದ ಕಡಿದನು = ಕೊಡಲಿಯಲ್ಲಿ ಕಡಿದನು.
ಷಷ್ಠೀ ವಿಭಕ್ತಿಗೆ ಪ್ರತಿಯಾಗಿ ಚತುರ್ಥೀ ವಿಭಕ್ತಿಗೆ-
ನಮ್ಮ ಗುರು = ನಮಗೆ ಗುರು
ಸಪ್ತಮಿಗೆ ಪ್ರತಿಯಾಗಿ ಪ್ರಥಮಾ ವಿಭಕ್ತಿ ಬರುವುದಕ್ಕೆ-
ರಾತ್ರಿಯಲ್ಲಿ ಬಂದನು = ರಾತ್ರಿ ಬಂದನು;

(b) ಸಂಪೂರ್ಣಾರ್ಥವನ್ನು ಕೊಡುವ ಪದಗಳ ಸಮೂಹವೇ
ವಾಕ್ಯವೆನಿಸುವುದು.
ಇದು ಸಾಮಾನ್ಯವಾಕ್ಯ.
ಭೀಮಸೇನನು-ಕರ್ತೃಪದ.
ಬಲಶಾಲಿಯಾದ-ಕರ್ತೃವಿಶೇಷಣ.
ಬಕಾಸುರನನ್ನು-ಕರ್ಮಪದ.
ದುಷ್ಟನಾದ-ಕರ್ಮವಿಶೇಷಣ.
ಸಂಹರಿಸಿದನು-ಕ್ರಿಯಾಪದ.
ಲೋಕೋಪಕಾರಾರ್ಥವಾಗಿ-ಕ್ರಿಯಾವಿಶೇಷಣ.

[ವಾಕ್ಯದಲ್ಲಿ ಸಾಮಾನ್ಯವಾಗಿ ಕರ್ತೃಪದವು ಮೊದಲಿನ

ಲ್ಲಿಯೂ ಕರ್ಮಪದವು ಮಧ್ಯದಲ್ಲಿಯೂ ಕ್ರಿಯಾಪದವು ಕಡೆಯಲ್ಲಿಯೂ ಬರುವವು. ಅವುಗಳ ವಿಶೇಷಣಗಳು ಅವರವರ ಮೊದಲಿನಲ್ಲಿ ಬರುವವು.]

1896.

I (a) ಪ, ಟ, ಲ, ಶ—ಈ ಅಕ್ಷರಗಳು ಹುಟ್ಟುವ ಸ್ಥಾನಗಳು ಯಾವವು?

(b) ಆ + ಉಡಿಗೆ, ಅ + ಐತು, ಆ + ಅರಸ, ಪಿತೃ + ಅರ್ಜಿತ, ಷಟ್ + ಆನನ, ವಾಕ್ + ಮಯ,—ಇವುಗಳನ್ನು ಸಂಧಿ ಮಾಡಿ ಬರೆಯಿರಿ.

II (a) ಅಣ್ಣ, ಮಗು, ಕಿರಿದು ಇವುಗಳ ಪ್ರಥಮಾ ಬಹುವಚನ ರೂಪಗಳನ್ನು ಬರೆಯಿರಿ.

(b) ಸಂಖ್ಯಾವಾಚಕ, ಸಂಖ್ಯೇಯವಾಚಕ—ಇವೆರಡಕ್ಕೂ ಇರುವ ಭೇದವೇನು?

(c) ಅಕ್ಕ, ಬೆಟ್ಟ, ಎರಡು, ಕಾಡು—ಇವುಗಳ ತೃತೀಯೈಕವಚನ ರೂಪಗಳನ್ನು ಬರೆದು ಇಲ್ಲಿ ಬರುವ ಸಂಧಿಕಾರ್ಯಗಳನ್ನು ವಿವರವಾಗಿ ತಿಳಿಸಿರಿ.

III (a) ಆಡು, ಅಡು, ಹೋಗು, ಹೊಗು, ತರು, ತೆರು, ಬೀಳು, ಕೀಳು—ಈ ಧಾತುಗಳಿಗೆ 'ದ' ಎಂಬ ವಿಕರಣ ಪ್ರತ್ಯಯವನ್ನು ಸೇರಿಸಿ ಬರೆಯಿರಿ.

(b) ಅಲು, ಅಲಿಕ್ಕೆ ಈ ಪ್ರತ್ಯಯಗಳಿಗೆ ಇರುವ ಅರ್ಥ ಭೇದವೇನು? ಉದಾಹರಣೆಗಳನ್ನು ಕೊಟ್ಟು ತಿಳಿಸಿರಿ.

IV (a) ಅಲುಕ್ಸಮಾಸ, ವ್ಯಧಿಕರಣ ಬಹುವ್ರೀಹಿ ಸಮಾಸ, ಕ್ರಿಯಾಸಮಾಸ, ಗಮಕಸಮಾಸ,—ಇವಕ್ಕೆ ಉದಾಹರಣೆಗಳನ್ನು ಕೊಡಿ.

(b) ನೋಡಿ ನೋಡಿ ನಕ್ಕನು, ಅವರಿಗೆ ಕಾಸುಕಾಸು ಕೊಟ್ಟ, ಕೇರಿ ಕೇರಿಯಲ್ಲಿ ಜಗಳ- ಇಲ್ಲಿ ದ್ವಿರುಕ್ತಿಗಳು ಯಾವಯಾವ ಅರ್ಥದಲ್ಲಿ ಬಂದಿವೆ?

(c) ಕನ್ನಡಿಗ, ಗಂದಿಗ, ಕೇಡಿಗ—ಇಲ್ಲಿ ಇಗ ಪ್ರತ್ಯಯಕ್ಕೆ ಅರ್ಥವೇನು?

V (a) ಏಕವಚನಕ್ಕೆ ಪ್ರತಿಯಾಗಿ ಬಹುವಚನವೂ, ವರ್ತಮಾನ ಭವಿಷ್ಯದ್ರೂಪಗಳಿಗೆ ಪ್ರತಿಯಾಗಿ ಭೂತರೂಪವೂ ಬರುವದುಂಟು. ಯಾವಾಗ? ಉದಾಹರಣೆಗಳನ್ನು ಕೊಡಿ.

(b) ಯಾಚಕರು <u>ಭಿಕ್ಷಕ್ಕೆ</u> ಹೋಗುತ್ತಾರೆ, <u>ಪುರುಷರಲ್ಲಿ</u> ಕ್ಷತ್ರಿಯನು ಶೂರನು—ಇಲ್ಲಿ ಕೆಳಗೆ ಗೆರೆಗಳೆಳೆದಿರುವ ವಿಭಕ್ತಿಗಳು ಯಾವ ಅರ್ಥದಲ್ಲಿ ಬಂದಿವೆ?

VI ವಾಕ್ಯವೆಂದರೇನು? ಅವು ಎಷ್ಟುವಿಧ? ಹೆಸರುಗಳನ್ನು ಹೇಳಿ ಒಂದೊಂದಕ್ಕೂ ಉದಾಹರಣೆಯನ್ನು ಕೊಡಿ.

ಉತ್ತರಗಳು.

I (a) ವ-ದಂತೋಷ್ಠ್ಯ, ಟ-ಮೂರ್ಧನ್ಯ, ಲ-ದಂತ್ಯ, ಹ-ಉರಸ್ಯ

(b) ಅ + ಉಡಿಗೆ, = ಅವ್ವಡಿಗೆ ಅ + ಐಮತು = ಅಯಿಮತು ;
ಅ + ಅರಸ = ಆ ಅರಸ, ಪಿತೃ + ಆರ್ಜಿತ = ಪಿತ್ರಾರ್ಜಿತ
ಷಟ್ + ಆನನ = ಷಡಾನನ, ವಾಕ್ + ಮಯ = ವಾಙ್ಮಯ

II (a) ಅಣ್ಣ-ಅಣ್ಣಂದಿರು, ಮಗು-ಮಕ್ಕಳು, ಕಿರಿದು-ಕಿರಿಯ…

(b) ಒಂದು ಮೊದಲಾದ ಲೆಕ್ಕವನ್ನು ಹೇಳುವ ಶಬ್ದಗಳು ಸಂಖ್ಯಾವಾಚಕಗಳೆಂದೆನಿಸುವವು. ಉದಾ-ಎರಡು.
ಸಂಖ್ಯಾವಾಚಕಗಳು ಲೆಕ್ಕಿಸಲ್ಪಡುವ ವಸ್ತುಗಳನ್ನು ವಿಶೇಷಿಸುವಾಗ ಸಂಖ್ಯೇಯವಾಚಕಗಳೆನಿಸುವವು.

ಉದಾ-ಎರಡನೆಯವನು, ಎರಡನೆಯವಳು.

(c) ಅಕ್ಕ-ಅಕ್ಕನಿಂದ=ಅಕ್ಕ+ನ+ಇಂದ.

ಅಕ್ಕ-ಪ್ರಕೃತಿ, ನ- ಆಗಮ, ಇಂದ-ತೃತೀಯಾ ವಿಭಕ್ತಿಪ್ರತ್ಯಯ.

ಅಕ್ಕ-ಅಕಾರಾಂತ ಸ್ತ್ರೀಲಿಂಗ ಪ್ರಕೃತಿಯಾದ್ದರಿಂದ ನಕಾರಾಗಮ ಬಂದಿರುತ್ತದೆ. [ಶಬ್ದಾದರ್ಶ ಸೂತ್ರ] 5[illegible]

ಬೆಟ್ಟ-ಬೆಟ್ಟದಿಂದ=ಬೆಟ್ಟ+ದ+ಇಂದ,

ಬೆಟ್ಟ-ಪ್ರಕೃತಿ, ದ-ಆಗಮ, ಇಂದ- ತೃ. ವಿಭಕ್ತಿಪ್ರತ್ಯಯ

ಸೂತ್ರ- ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೆ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ದಕಾರಾಗಮವು ಬರುವದು

ಎರಡು-ಎರಡರಿಂದ, ಎರಡು+ಅರ್+ಇಂದ;

ಎರಡು-ಪ್ರಕೃತಿ, ಅರ್-ಆಗಮ, ಇಂದ- ತೃ. ವಿಭಕ್ತಿ ಪ್ರತ್ಯಯ;

ಸಂಖ್ಯಾವಾಚಕಗಳಿಗೆ ನಪುಂಸಕ ಲಿಂಗದಲ್ಲಿ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿ ಪ್ರತ್ಯಯಗಳು ಪರವಾದಾಗ ಅರ್ ಎಂಬ ಆಗಮವು ಬರುವದು.

[ಸೂತ್ರ 6[illegible]]

ಕಾಡು-ಕಾಡಿನಿಂದ=ಕಾಡು, ಇನ+ಇಂದ [ಕಾಡಿಂದ]

ಕಾಡು-ಪ್ರಕೃತಿ, ಇನ-ಆಗಮ; ಇಂದ-ತೃ, ವಿ. ಪ್ರ;

ಎಲ್ಲಾ ಉಕಾರಾಂತ ಪ್ರಕೃತಿಗಳಿಗೂ ಏಕವಚನದಲ್ಲಿ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ಇನ ಎಂಬಾಗಮವು ವಿಕಲ್ಪವಾಗಿ ಬರುವದು, [ಸೂತ್ರ]

III (a) ಆಡು+ದ=ಆಡಿದ, ಅಡು+ದ=ಅಟ್ಟ, ಹೋಗು+ದ=ಹೋದ, ಹೊಗು+ದ=ಹೊಕ್ಕ, ತರು+ದ=ತಂದ, ತೆರು+ದ=ತೆತ್ತ, ಬೀಳು+ದ=ಬಿದ್ದ, ಕೀಳು+ದ=ಕಿತ್ತ

(b) ಒಂದು ಕ್ರಿಯೆ ಮತ್ತೊಂದು ಕ್ರಿಯೆಗೆ ಕಾರಣವಾಗಿದ್ದರೆ ಕಾರಣವಾದ ಕ್ರಿಯೆಯನ್ನು ಹೇಳುವ ಧಾತುವಿನಮೇಲೂ, ಮತ್ತು ಎರಡು ಕ್ರಿಯೆಗಳಿಗೂ ಸಮಾನಕಾಲವು ತೋರುವಾಗಲೂ ಅಲು ಪ್ರತ್ಯಯವು ಬರುವುದು. ಉದಾ—

ಕಾರಣಕ್ಕೆ-ಗುರುವು ಬೋಧಿಸಲು ಶಿಷ್ಯನು ಕಲಿತನು.

ಸಮಾನಕ್ಕೆ-ಸೂರ್ಯನು ಉದಯಿಸುತ್ತಿರಲು ತಾವರೆಗಳು ಅರಳಿದುವು.

ಎರಡು ಕ್ರಿಯೆಗಳಲ್ಲಿ ಒಂದುಕ್ರಿಯೆ ಮತ್ತೊಂದು ಕ್ರಿಯೆಗೆ ಪ್ರಯೋಜನವಾಗಿದ್ದರೆ ಪ್ರಯೋಜನವಾದ ಕ್ರಿಯೆಯನ್ನು ಹೇಳುವ ಧಾತುವಿನಮೇಲೆ "ಅಲಿಕ್ಕೆ" ಪ್ರತ್ಯಯಬರುವದು

ಉದಾ—ಓದಲಿಕ್ಕೆ ಬಂದನು.

IV (a) ಅಲುಕ್ಸಮಾಸ-ಬೇವಿನ ಮರ, ಮಾವಿನಹಣ್ಣು;
ವ್ಯಧಿಕರಣ ಬಹುವ್ರೀಹಿ-ಹೂ ಗಣ್ಣ, ಚಕ್ರಪಾಣಿ;
ಕ್ರಿಯಾ ಸಮಾಸ-ಹೊಳೆ ದಾಟಿದನು, ಪಾಠಹೇಳುತ್ತಾ;
ಗಮಕ ಸಮಾಸ-ಈ ಪುಸ್ತಕ, ಓದುವ ಹುಡುಗ.

(b) ನೋಡಿನೋಡಿನಕ್ಕನು-ಕ್ರಿಯೆ ಅನೇಕಾವರ್ತಿ ನಡೆಯಿತೆಂಬ ಅರ್ಥದಲ್ಲಿ; ಇವರಿಗೆ ಕಾಸುಕಾಸುಕೊಡು-ಅನೇಕ ಪ್ರಕಾರವಾದ ವಸ್ತುಗಳಲ್ಲಿ ಒಂದೊಂದು ಪ್ರಕಾರವಾದ ವಸ್ತು ಇಷ್ಟಿಷ್ಟೆಂದು ನಿರ್ಣಯಿಸುವುದರಲ್ಲಿ; ಕೇರಿಕೇರಿಯಲ್ಲಿ ಜಗಳ-ವೀಪ್ಸಾರ್ಥದಲ್ಲಿ; [ಒಂದನ್ನು ಬಿಡದೆ ಹೇಳಬೇಕೆಂಬ ಇಚ್ಛೆ]

(c) ಕನ್ನಡಿಗ-ಕನ್ನಡವನ್ನು ಅರಿತವನು.
ಗಂಡಿಗ-ಗಂಡವನ್ನು ಮಾರುವವನು.
ಕೇಡಿಗ-ಕೇಡನ್ನು ಆಚರಿಸುವವನು.

V (a) ಗೌರವದಲ್ಲಿಯೂ, ಹಾಸ್ಯದಲ್ಲಿಯೂ, ನಿಂದೆಯಲ್ಲಿಯೂ ಏಕವಚನಕ್ಕೆ ಪ್ರತಿಯಾಗಿ ಬಹುವಚನವು ಬರುವುದು.

ಗೌರವಕ್ಕೆ-ಸ್ವಾಮಿಗಳು ದಯಮಾಡಿದರು.

ಹಾಸ್ಯಕ್ಕೆ-ಏನು ಕೆಟ್ಟರೇ ನೀವೂ ತಿರುಪಕ್ಕೆ ಬಂದಿರಾ ?
ನಿಂದೆಗೆ-ತಾವು ದೊಡ್ಡವರು, ನನ್ನ ಸಹವಾಸವು ತಮಗೆ ಬೇಡಿ.
ತ್ವರೆಯೂ ನಿಶ್ಚಯವೂ ತೋರುವಾಗ ವರ್ತಮಾನಭವಿಷ್ಯದ್ರೂಪಗಳಿಗೆ ಪ್ರತಿಯಾಗಿ ಭೂತರೂಪವು ಪ್ರಯೋಗಿಸಲ್ಪಡುವುದು. ಉದಾ—

ತ್ವರೆಗೆ:-ಇದೋಬಂದೆನು. ಅದುವರೆಗೂ ನೀನು ಅಲ್ಲಿಯೇ ಇರು
ನಿಶ್ಚಯಕ್ಕೆ:-ನೀನು ನಿಶ್ಚಯವನ್ನು ಹೇಳಿದರೆ ಬದುಕಿದೆ.

(b) ಭಿಕ್ಷಕ್ಕೆ- ಉದ್ದಿಷ್ಟಾರ್ಥದಲ್ಲಿರುವ ಶಬ್ದದಮೇಲೆ ಚತುರ್ಥೀ ವಿಭಕ್ತಿ ಬಂದಿದೆ.
ಪುರುಷರಲ್ಲಿ-ಸಮುದಾಯದಲ್ಲಿ ಒಂದನ್ನು ವಿಶೇಷಿಸಿ ಹೇಳುವಾಗ ಸಮುದಾಯಬೋಧಕವಾದ ಶಬ್ದದಮೇಲೆ ಸಪ್ತಮೀ ವಿಭಕ್ತಿ ಬಂದಿದೆ.

VI ೧೮೯೪ರಲ್ಲಿನ VIIನೇ ಪ್ರಶ್ನೆ (b) ಉತ್ತರನೋಡಿ. ಪೇಜ್ ೨೦
ವಾಕ್ಯದಲ್ಲಿ ೩ ವಿಧಗಳು:—

1. ಸಾಮಾನ್ಯ ವಾಕ್ಯಕ್ಕೆ-ಸತ್ಪುರುಷರು ಪರರಿಗೆ ಉಪಕಾರ ಮಾಡುತ್ತಾರೆ.

2. ಮಿಶ್ರವಾಕ್ಯಕ್ಕೆ—ದೇವರು ಇದ್ದಾನೆ ಎಂಬುವ್ವದನ್ನು ಎಲ್ಲರೂ ನಂಬುತ್ತಾರೆ.

3 ಸಂಯೋಜಿತ ವಾಕ್ಯಕ್ಕೆ—ಶಿಷ್ಟರನ್ನು ಅರಸರು ಸನ್ಮಾನಿಸುತ್ತಾರೆ. ಮತ್ತು ಪ್ರಜೆಗಳು ಹೊಗಳುತ್ತಾರೆ.

1897.

I ಇವುಗಳನ್ನು ಸಂಧಿಮಾಡಿ ಬರೆಯಿರಿ.

(1) ಈ + ಊರು (2) ಅ + ಔಡಲ (3) ಓಹೋ + ಆವನೇ (4) ಅದರಿಂದ + ಏ (5) ನೋ + ಉತ್ತ (6) ಅ + ಋಷಿ;

II (1) ಪ್ರಾತಿಪದಿಕ (2) ವಾಚ್ಯಲಿಂಗ (3) ಅನ್ವರ್ಥನಾಮ. ಇವುಗಳ ಲಕ್ಷಣವನ್ನು ಬರೆದು ಎರಡೆರಡು ಉದಾಹರಣೆಗಳನ್ನು ಕೊಡಿ.

III ಕನ್ನಡದಲ್ಲಿ ಹೊಸದಾಗಿ ಧಾತುಗಳನ್ನು ಹೇಗೆ ಕಲ್ಪಿಸಬಹುದು? ಉದಾಹರಣೆಗಳನ್ನು ಕೊಡಿ.

IV ಕೃನ್ನಾಮವೆಂದರೇನು ? ಎಷ್ಟು ಭೇದ ? ಉದಾಹರಣೆಗಳೊಡನೆ ತಿಳಿಸಿರಿ.

V ಇವುಗಳ ಸಮಾಸರೂಪಗಳನ್ನು ಬರೆದು ಸಮಾಸದ ಹೆಸರುಗಳನ್ನು ತಿಳಿಸಿರಿ.

(1) ಹಣ್ಣು + ಕಾಯಿಹೂ (2) ಕೈಯ + ಅಡಿ (3) ಬೀಸುವುದು + ಚಾಮರ (4) ಉಂಗುರಕ್ಕೋಸ್ಕರ + ಚಿನ್ನ (5) ಊರನ್ನು + ಸೇರಿದವನು.

VI ಇಲ್ಲಿ ಗೆರೆಹಾಕಿರುವ ಕಡೆ ಬರು ಧಾತುವಿನ ವರ್ತಮಾನರೂಪವನ್ನು ಯಥಾಯೋಗ್ಯವಾಗಿ ಸೇರಿಸಿ ವಾಕ್ಯಗಳನ್ನು ಪೂರ್ತಿ ಮಾಡಿರಿ.

(1) ಗಾಡಿಗಳಾಗಲಿ ಕುದುರೆಯಾಗಲಿ___

(2) ಗಾಡಿಗಳೂ ಆಳೂ___

(3) ಕುದುರೆಗಳೂ ನೀನೂ___

(4) ನೀನೋ ಅಥವಾ ಕುದುರೆಗಳೋ___

ಉತ್ತರಗಳು.

I (1) ಈ ಯೂರು (2) ಆ ಬಿಡಲ (3) ಓಹೋ ಇವನೇ (4) ಅದರಿಂದೇ (5) ಹೋಯುತ್ತ (6) ಆ ಋಷಿ;

II (1) ನಾಮವಿಭಕ್ತಿ ಪ್ರತ್ಯಯವನ್ನು ಹೊಂದತಕ್ಕ ಶಬ್ದರೂಪಕ್ಕೆ ಪ್ರಾತಿಪದಿಕವೆಂದು ಹೆಸರು. ಹಸು. ಮನುಷ್ಯ;

(೨) ವಿಶೇಷ್ಯವು ಯಾವ ಲಿಂಗವೋ ಆ ಲಿಂಗವುಳ್ಳದ್ದು ವಾಚ್ಯಲಿಂಗವೆನಿಸುವದು. ನೀನು, ಎರಡು;

(೩) ಅರ್ಥಕ್ಕೆ ಅನುಸಾರವಾದ ಹೆಸರನ್ನು ಹೇಳುವದು ಅನ್ವರ್ಥನಾಮವೆನಿಸುವುದು. ಕುಂಟ. ಕಿವುಡ;

III ಭೋಗ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳಿಗೂ ಕಳವಳ ಮೊದಲಾದ ಕೆಲವು ಕನ್ನಡನಾಮವಾಚಕಗಳಿಗೂ ಇಸು ಪ್ರತ್ಯಯವನ್ನು ಸೇರಿಸಿದರೆ ಕನ್ನಡಕ್ಕೆ ಹೊಸಧಾತುಗಳಾಗುವವು. ಭೋಗಿಸು, ಕಳವಳಿಸು;

ರಕ್ಷಣ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳ ಕೊನೆಯ ಅಕ್ಷರವನ್ನು ಲೋಪಮಾಡಿ ಇಸು ಪ್ರತ್ಯಯವನ್ನು ಸೇರಿಸಿದರೆ ಕನ್ನಡಕ್ಕೆ ಹೊಸಧಾತುಗಳಾಗುವವು.

ರಕ್ಷಿಸು, ಘಟಿಸು;

ಧಗಧಗ, ಘಟಘಟ ಮೊದಲಾದ ಅನುಕರಣ ಶಬ್ದಗಳ ಮೇಲೆ ಇಸು ಪ್ರತ್ಯಯವನ್ನು ಸೇರಿಸಿದರೆ ಕನ್ನಡಕ್ಕೆ ಹೊಸಧಾತುಗಳಾಗುವವು. ಧಗಧಗಿಸು, ಘಟಘಟಿಸು;

IV ಕೃದ್ವಾಚಿ ಅಥವಾ ಕಾರಕಕೃದಂತಗಳಿಗೆ ವಿಭಕ್ತಿ ಪ್ರತ್ಯಯಗಳು ಪರವಾದಾಗ ಪುಂಸ್ತ್ರೀನಪುಂಸಕಲಿಂಗೈಕ ವಚನಗಳಲ್ಲಿ ನಡುವೆ ಯಥಾಕ್ರಮವಾಗಿ ಅವನು, ಅವಳು, ಉದು, ಎಂಬಾಗಮಗಳು ಬಂದು ಕೃನ್ನಾಮಗಳಾಗುವವು.

ಇದರಲ್ಲಿ ೨ ವಿಧ—

(೧) ಉಪಪದಗಳೊಡನೆ ಕೂಡಿದ ಕೃನ್ನಾಮಗಳು:—

ಮನೆಮುರುಕ, ಬಾಳುಹರಕ;

(೨) ಉಪಪದಗಳಿಲ್ಲದೆ ಪ್ರತ್ಯಯಗಳನ್ನು ಹೊಂದಿದವು.

ತಿರುಕ, ಗೋರಾಗ;

V (೧) ಹಣ್ಣುಕಾಯಿ=ಸಮಾಹಾರದ್ವಂದ್ವ ಸಮಾಸ.

(೨) ಅಂಗೈ=ಅವ್ಯಯೀಭಾವ ಸಮಾಸ.

(೩) ಬೀಸುವ ಚಾಮರ=ಗಮಕಸಮಾಸ.
(೪) ಉಂಗುರಚಿನ್ನ=ಚತುರ್ಥೀ ತತ್ಪುರುಷ ಸಮಾಸ.
(೫) ಊರುಸೇರಿದವನು=ಕ್ರಿಯಾಸಮಾಸ.

VI (೧) ಗಾಡಿಗಳಾಗಲಿ ಕುದುರೆಯಾಗಲಿ ಬರುತ್ತದೆ.
(೨) ಗಾಡಿಗಳೂ ಆಳೂ ಬರುತ್ತಾನೆ.
(೩) ಕುದುರೆಗಳೂ ನೀವೂ ಬರುತ್ತೀರಿ.
(೪) ನೀವೋ ಅಥವಾ ಕುದುರೆಗಳೋ ಬರುತ್ತವೆ.

1898

I ೧. ವಾಚ್ಯಲಿಂಗ, ಗಮಕಸಮಾಸ, ಇವುಗಳ ಲಕ್ಷಣವನ್ನು ತಿಳಿಸಿ ಒಂದೊಂದು ಉದಾಹರಣೆಯನ್ನು ಕೊಡಿ.

೨. ಸೋ + ಅಲು, ಈ + ಉಂಗುರ, ವಾಕ್ + ಮಯ, ತನು + ಅಂತರ:—ಇವುಗಳನ್ನು ಸಂಧಿಸೇರಿಸಿ ಬರೆದು ಇಂಥ ಸಂಧಿಯೆಂದು ತಿಳಿಸಿ.

೩. ಕಿರಿದು, ಅಷ್ಟು, ಐದು—ಇವುಗಳಿಗೆ ಪುಲ್ಲಿಂಗ ಬಹುವಚನರೂಪಗಳನ್ನೂ, ಏನು ಎಂಬುದರ ವಿಭಕ್ತಿರೂಪಗಳನ್ನೂ ಬರೆಯಿರಿ.

II ೧. ಹೊಗು, ಅಡು, ಬೇ, ಸಾ, ಎಂಬ ಧಾತುಗಳ ಭೂತರೂಪ ಪ್ರಥಮ ಪುರುಷೈಕವಚನವನ್ನೂ, ನೋಲು, ತರು, ಧಾತುಗಳ ಉತ್ತಮ ಪುರುಷ ಸಂಭಾವನಾರೂಪಗಳನ್ನೂ ಬರೆಯಿರಿ.

೨. ಊಡು, ಮರೆ, ಕೊಡು, ಮುಗ್ಗು-ಇವುಗಳಿಗೆ ಭಾವನಾಮಗಳೇನು? (ವ್ರದು ಸೇರಿಸಕೂಡದು.)

III ೧. ಏಕವಚನ ಕರ್ತೃವಿಗೆ ಬಹುವಚನದ ಕ್ರಿಯೆ ಯಾವಾಗ ಬರುವುದೋ ಉದಾಹರಿಸಿರಿ.

೨. ತೃತೀಯಾ ವಿಭಕ್ತಿ ಯಾವ ಯಾವ ಅರ್ಥದಲ್ಲಿ ಬರುವುದು?

ಉದಾಹರಣೆ ಕೊಡಿ.

IV 1. ರವಕೆಬಟ್ಟೆ, ಹಣೆಗಣ್ಣು, ಅನ್ನಬಟ್ಟೆ—ಇವು ಯಾವ ಸಮಾಸಗಳು ?

2. ಅಗಸ, ಕುಂಬಾರ, ಬ್ರಾಹ್ಮಣ, ಕರಿಯು—ಇವಕ್ಕೆ ಸ್ತ್ರೀಲಿಂಗ ರೂಪಗಳೇನು ?

3. ಪಿಕ್ಕೆ, ಹೋಳಿಗೆ ಇವಕ್ಕೆ ತತ್ಸಮಗಳನ್ನೂ, ಅಧ್ಯಕ್ಷ, ಕಾವ್ಯ, ಇವಕ್ಕೆ ತದ್ಭವಗಳನ್ನೂ ಬರೆಯಿರಿ.

A ಮಿಶ್ರವಾಕ್ಯವೆಂದರೇನು? ಅದು ಎಷ್ಟುವಿಧ? ಒಂದೊಂದು ವಿಧಕ್ಕೂ, ಉದಾಹರಣೆಯನ್ನು ಕೊಡಿ.

ಉತ್ತರಗಳು.

I 1. ವಿಶೇಷ್ಯವು ಯಾವಲಿಂಗವೋ ಆ ಲಿಂಗವುಳ್ಳದ್ದು ವಾಚ್ಯಲಿಂಗವೆನಿಸುವುದು. [ಇದು ತ್ರಿಲಿಂಗಗಳಲ್ಲಿಯೂ ಬರುತ್ತದೆ.]

ಸರ್ವನಾಮ, ಗುಣವಾಚಕ, ಸಂಖ್ಯಾವಾಚಕ, ಕೃದಂತವುತ್ತು ತದ್ಧಿತಾಂತಗಳೆಲ್ಲಾ ವಾಚ್ಯಲಿಂಗಗಳಾಗುತ್ತವೆ.

ಉದಾಹರಣೆ-ನೀನು ತಂದೆ, ನೀನು ತಾಯಿ, ನೀನುಮಗು,

ಗಮಕಸಮಾಸ-ಸರ್ವನಾಮ, ಕೃದಂತಗಳಲ್ಲೊಂದು ಪೂರ್ವಪದವಾಗಿದ್ದು ಸುಬಂತವಾದ ಉತ್ತರಪದದೊಡನೆ ಸಮಾಸವಾದರೆ ಗಮಕಸಮಾಸವೆನಿಸುವುದು. ಉತ್ತರಪದವು ಸಂಸ್ಕೃತವಾದರೂ ಆಗಬಹುದು.

ಉದಾಹರಣೆ-ಆ ಮನೆ, ಓದುವ ಹುಡುಗ.

2. ನೋ + ಅಲು = ನೋಯಲು [ಯಕಾರಾಗಮ ಸಂಧಿ.]

ಈ + ಉಂಗುರ = ಈವುಂಗರ [ವಕಾರಾಗಮ ಸಂಧಿ.]

ವಾಕ್ + ಮಯ = ವಾಙ್ಮಯ [ಅನುನಾಸಿಕ ಸಂಧಿ.]

ತನು + ಅಂತರ = ತನ್ವಂತರ [ಯಣ್ಸಂಧಿ.]

3. ಪ್ರಕೃತಿ. ಪುಲ್ಲಿಂಗಬಹುವಚನ.
ಕಿರಿದು = ಕಿರಿಯರು, ಕಿರಿಯರೇ, ಕಿರಿಯರನ್ನು
ಅಷ್ಟು = ಅಷ್ಟರು, ಅಷ್ಟರನ್ನು ಅಷ್ಟರಿಂದ
ಐದು = ಐವರು, ಐವರನ್ನು, ಐವರಿಂದ.

ಪಿತೃ, ಪಿತನನ್ನು ಪಿತರಿಂದ, ಪಿತೃಕ್ಕೆ, ಪಿತರದೆಸೆಯಿಂದ,
ಪಿತರ, ಪಿತರಲ್ಲಿ. [ಸಂಬೋಧನಾ ವಿಭಕ್ತಿ ಇಲ್ಲ.]

II 1. ಧಾತು. ಪ್ರಥಮಪುರುಷೈಕವಚನ ಭೂತರೂಪ.
ಹೊಗು = ಹೊಕ್ಕನು.
ಅಡು = ಅಟ್ಟನು.
ಬೇ = ಬೆಂದನು.
ಸಾ = ಸತ್ತನು.

ಧಾತು ಉತ್ತಮ ಪು, ಸಂ, ರೂಪಗಳು—
ಸೋಲು = ಸೋತೆನು, ಸೋತೆವು ;
ತರು = ತಂದೆನು, ತಂದೆವು ;

2. ಧಾತು ಭಾವನಾಮ
ಊಡು ಊಟ
ಮರೆ ಮರೆವು
ಕೊಡು ಕೊಡುವಳಿ
ಮುಗ್ಗು ಮುಗ್ಗಲು

III 1. ಜಾತ್ಯೇಕವಚನದ ಕರ್ತೃವಿನ ಕ್ರಿಯಾಪದವು ವಿಕಲ್ಪವಾಗಿ ಬಹುವಚನವಾಗುವುದು.

ಕುದುರೆ ಬಂದುವು. ಜೇನುಹುಳು ಮುತ್ತಿದವು.

2. ತೃತೀಯಾ ವಿಭಕ್ತಿ—
(i) ಕರ್ತೃ, ಕರಣ, ಹೇತ್ವರ್ಥಗಳಲ್ಲಿರುವ ಶಬ್ದಗಳಮೇಲೆ ತೃತೀಯಾ ವಿಭಕ್ತಿ ಬರುವುದು. ಉದಾ—
ಕೃಷ್ಣನಿಗೆ-ಶತ್ರುವಿನಿಂದ ಬಾಣವು ಬಿತ್ತಿಟ್ಟಿತು.

ಕರಣಕ್ಕೆ ಒಕ್ಕಲಿಗನು ಕೊಡಲಿಯಿಂದ ಕಡಿದನು.

ಹೇತುವಿಗೆ-ವಿದ್ಯೆಯಿಂದ ಯಶಸ್ಸುಂಟಾಗುವುದು.

(ii) ಎಡೆಬಿಡದೆ ಕ್ರಿಯೆ ನಡೆಯಿತೆಂಬ ಅರ್ಥವು ತೋರಿದರೆ ಕಾಲವಾಚಕದಮೇಲೂ, ಅಧ್ವವಾಚಕದಮೇಲೂ ಬರುವದು.

ಕಾಲವಾಚಕಕ್ಕೆ—ಒಂದು ತಿಂಗಳಿನಿಂದ

ಅಧ್ವವಾಚಕಕ್ಕೆ—ಮೂರು ಹರದಾರಿಯಿಂದ

(iii) ಸಕರ್ಮಕಧಾತುಗಳು ಪ್ರೇರಣಾರ್ಥದಲ್ಲಿ 'ಇಸು, ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯಕರ್ತೃವಾಚಕದ ಮೇಲೆ ತೃತೀಯಾವಿಭಕ್ತಿ ಬರುವುದು. ಉದಾ—

ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿದನು

IV I. ರವಿಕೆಬಟ್ಟೆ—ಚತುರ್ಥೀ ತತ್ಪುರುಷಸಮಾಸ.

ಹಣೆಗಣ್ಣ—ವ್ಯಧಿಕರಣ ಬಹುವ್ರೀಹಿ ಸಮಾಸ.

ಅನ್ನಬಟ್ಟೆ—ಸಮಾಹಾರ ದ್ವಂದ್ವ ಸಮಾಸ.

2 ಅಗಸ-ಅಗಸಗಿತ್ತಿ, ಕುಂಬಾರ-ಕುಂಬಾರಿತಿ, ಬ್ರಾಹ್ಮಣ-ಬ್ರಾಹ್ಮಣಿತಿ, ಕರಿಯ-ಕರಿಗಿ ; [ಸ್ತ್ರೀಲಿಂಗರೂಪಗಳು]

3 ಹಿಕ್ಕೆ-ಸ್ಪಿಕ್ಕಾ, ಹೊಳಗೆ-ಸ್ಫೋಟಕ; [ತತ್ಸಮ ರೂಪಗಳು.]

ಅಧ್ಯಕ್ಷ-ಅದ್ದಿಕ, ಕಾವ್ಯ-ಕಬ್ಬ ; [ತದ್ಭವ ರೂಪಗಳು]

V ವಾಕ್ಯಗಳನ್ನೇ ಅಂಗವಾಗಿ ಹೊಂದಿರುವ ವಾಕ್ಯವು ಮಿಶ್ರವಾಕ್ಯವೆನಿಸು[illegible]ದು.

ಇದರಲ್ಲಿ ಮ[illegible]ರುವಿಧ.

ಕಾರಕ ಮಿಶ್ರವಾಕ್ಯಕ್ಕೆ:—ಸೂರ್ಯನು ಮೂಡಲಲ್ಲಿ ಹುಟ್ಟುತ್ತಾನೆ ಎಂಬುದು ಪ್ರಸಿದ್ಧವಾಗಿದೆ.

[ಎಂಬುದು ಮೊದಲಾದ ಭಾವಕೃದಂತಗಳು ಸೇರಿರಬೇಕು.]

ಕಾರಕ ವಿಶೇಷಣ ಮಿಶ್ರವಾಕ್ಯಕ್ಕೆ:—ತಾಳಿದವನು ಬಾಳುವನು. ಎಂಬ ಗಾದೆ ಸತ್ಯವಾಗಿದೆ.

[ಹಾಗೆ ಎನ್ನುವ ಮೊದಲಾದ ಕಾರಕ ಕೃದಂತಗಳು ಸೇರಿರಬೇಕು.]

ಕ್ರಿಯಾ ವಿಶೇಷಣ ಮಿಶ್ರವಾಕ್ಯಕ್ಕೆ:—ಐಶ್ವರ್ಯವು ಸ್ಥಿರವಾಗಿರುತ್ತದೆ ಎಂದು ಅಜ್ಞರು ಭಾವಿಸುತಾರೆ.
[ಎಂದು ಎನ್ನುತ್ತಾ ಮೊದಲಾದ ಅವ್ಯಯ ಕೃದಂತಗಳು ಸೇರಿರಬೇಕು]

1899.

ಇವುಗಳನ್ನು ಸಂಧಿಮಾಡಿ ಬರೆದು ಆ ಸಂಧಿಗಳ ಹೆಸರನ್ನು ಹೇಳಿ.

ನಿರ್ಮಲ + ಉದಕ, ಅತಿ + ಉನ್ನತ, ಊರಿಂದ + ಊರಿಗೆ
ರಾಮ + ಅನುಜ, ಮನೆ + ಅಲ್ಲಿ, ಸುರ + ಇಂದ್ರ.

(b) ಪ್ಲುತಕ್ಕೂ, ನಿಪಾತಕ್ಕೂ ಸ್ವರವು ಪರವಾದರೆ ಸಂಧಿಕಾರ್ಯವು ಬರುವುದಿಲ್ಲ:—ಇದಕ್ಕೆ ಎರಡೆರಡು ಉದಾಹರಣೆಗಳನ್ನು ಕೊಡಿ.

II (a) ಪ್ರಕೃತಿ, ಪದ ಎಂದರೇನು? ಉದಾಹರಣೆಯೊಡನೆ ವಿವರಿಸಿ.

(b) ಈ ಶಬ್ದಗಳ ಲಿಂಗವನ್ನು ಹೇಳಿ.
ಮನೆ, ಅರಸು, ಹುಡುಗಿ, ಸೂರ್ಯ, ನಾನು, ಗುಂಪು.

(c) ಮಾವ, ದೊಡ್ಡದು, ಹೊಳೆ, [illegible]ಸೆ ಇವುಗಳು ಬಹುವಚನ ರೂಪಗಳನ್ನು ಬರೆಯಿರಿ.

III (a) ನಾಮವಾಚಕದಲ್ಲಿ ಎಷ್ಟು ಭೇದಗಳು? ಉದಾಹರಣೆಕೊಟ್ಟು ಅವುಗಳ ಹೆಸರನ್ನು ಹೇಳಿ.

(b) ಈ ಶಬ್ದಗಳ ಎಲ್ಲಾ ವಿಭಕ್ತಿ ರೂಪಗಳನ್ನು ಬರೆಯಿರಿ.
ಹೊಸದು—ಏಕವಚನದಲ್ಲಿ ಮಾತ್ರ, ಅಜ್ಜ - ಬಹುವಚನದಲ್ಲಿ ಮಾತ್ರ

(c) ತದ್ಧಿತಾಂತಾವ್ಯಯಗಳಿಗೂ, ನಿಪಾತಾವ್ಯಯಗಳಿಗೂ ಎರಡೆರಡು ಉದಾಹರಣೆಗಳನ್ನು ಕೊಡಿ.

IV (a) ಬೇ ಎಂಬ ಧಾತುವಿನ ವರ್ತಮಾನ ಮೊದಲಾದ ಆರುವಿಧವಾದ ಕ್ರಿಯಾಪದಗಳನ್ನು ಬರೆಯಿರಿ.

[ಉತ್ತಮ ಪುರುಷೈಕವಚನದಲ್ಲಿ ಮಾತ್ರ]

(b) ಇಡು-ಎಂಬ ಧಾತುವಿನಿಂದ "ಇಟ್ಟನು" ಎಂಬ ರೂಪವು ಆದುದು ಹೇಗೆ? ಸೂತ್ರವನ್ನು ಹೇಳಿ.

(c) ಈ ಧಾತುಗಳಿಂದಾಗುವ ಕೃದಂತ ರೂಪಗಳನ್ನು ಬರೆಯಿರಿ.
ಕಲಿ-ಇದರಿಂದಕಾರಕ ಕೃದಂತವರ್ತಮಾನ ರೂಪವನ್ನುಮಾತ್ರ
ತರು-ಇದರಿಂದಸಮಾನಕಾಲಿಕ ಅವ್ಯಯಕೃದಂತವನ್ನುಮಾತ್ರ.
ನಡೆ-ಇದರಿಂದ ಭಾವಕೃದಂತ ರೂಪವನ್ನು ಮಾತ್ರ.

V (a) ಹೊಸಮನೆ, ಪೀತಾಂಬರನು; ಈ ಸಮಾಸ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು ಸಮಾಸಗಳ ಹೆಸರನ್ನು ಹೇಳಿ.

(b) ತುದಿತುದಿಯಲ್ಲಿ ಸಣ್ಣ, ಹೇಳಿ ಹೇಳಿ, ಬೇಸತ್ತನು - ಇಲ್ಲಿ ದ್ವಿರುಕ್ತಿಗಳು ಯಾವ ಯಾವ ಅರ್ಥಗಳಲ್ಲಿ ಬಂದಿವೆ?

(c) ಗಾರ, ಇಗ, ವಂತ. ಅ - ಈ ಪ್ರತ್ಯಯಗಳು ಯಾವ ಯಾವ ಅರ್ಥದಲ್ಲಿ ಬರುವವು?

VI (a) ಬೆತ್ತ, ಪಕ್ಕ, ಅಜ್ಜ, ಬತ್ತಿ - ಇವು ಯಾವ ಸಂಸ್ಕೃತ ಶಬ್ದಗಳಿಂದ ಹುಟ್ಟಿದುವು?

(b) ಪ್ರಾತಿಪದಿಕಗಳ ಮೇಲೆ ತೃತೀಯಾವಿಭಕ್ತಿ ಯಾವ ಯಾವ ಅರ್ಥದಲ್ಲಿ ಬರುವದು?

(c) ಹಳ್ಳಕ್ಕೆ ಬಿದ್ದನು, ಕೊಡಲಿಯಲ್ಲಿ ಕಡಿದನು - ಇವುಗಳಲ್ಲಿರುವ ವಿಭಕ್ತಿ ಪಲ್ಲಟವನ್ನು ಹೇಳಿ?

VII (a) ವಾಕ್ಯಗಳೆಷ್ಟು ವಿಧ? ಅವುಗಳ ಹೆಸರನ್ನುಹೇಳಿ.

(b) ಹರಿಶ್ಚಂದ್ರನು ಬಹುಕಷ್ಟಕ್ಕೆ ಗುರಿಯಾದನು, ಆದರೂ ಅವನು ಸತ್ಯವನ್ನು ಕೊನೆಯವರಿಗೂ ಬಿಡಲಿಲ್ಲ - ಇದು ಎಂಥಾವಾಕ್ಯ?

ಉತ್ತರಗಳು.

I (a) ನಿಮ್ನಗೋದಕ - ಗುಣಸಂಧಿ,
ಅತ್ಯುನ್ನತ - ಯಣ್ಸಂಧಿ.
ಊರಿಂದೂರಿಗೆ - ಅಕಾರಲೋಪಸಂಧಿ.
ರಾಮಾನುಜ - ಸವರ್ಣದೀರ್ಘಸಂಧಿ.
ಮನೆಯಲ್ಲಿ - ಯಕಾರಾಗಮ ಸಂಧಿ.
ಸುರೇಂದ್ರ - ಗುಣಸಂಧಿ.

(b) ಪ್ಲುತಕ್ಕೆ - ಅಣ್ಣಾ 2 ಓಡಿಬಾ, ಅಮ್ಮಾ 3 ಇಲ್ಲಿಬಾ; ನಿಪಾತಕ್ಕೆ - ಹೋ ಇರು, ಅವನೇ ಇವನು.

II (a) ನಾಮವಿಭಕ್ತಿ ಪ್ರತ್ಯಯವನ್ನಾಗಲಿ ಅಥವಾ * ಆಖ್ಯಾತ ವಿಭಕ್ತಿ ಪ್ರತ್ಯಯವನ್ನಾಗಲಿ ಹೊಂದತಕ್ಕ ಶಬ್ದರೂಪಕ್ಕೆ ಪ್ರಕೃತಿ ಎಂದು ಹೆಸರು. [* ಇದಕ್ಕೆ ಧಾತುವೆಂತಲೂ ಸಂಜ್ಞೆ] ನಾಮ ವಿಭಕ್ತಿ ಪ್ರತ್ಯಯಗಳನ್ನು ಹೊಂದಿದ ಶಬ್ದಗಳಿಗೆ ನಾಮ ಪದಗಳೆಂದೂ, ಆಖ್ಯಾತ ವಿಭಕ್ತಿ ಪ್ರತ್ಯಯಗಳನ್ನು ಹೊಂದಿದ ಶಬ್ದಗಳಿಗೆ ಕ್ರಿಯಾಪದಗಳೆಂದೂ ಹೆಸರು. ಉದಾ—

ಪ್ರಕೃತಿ	ಪ್ರತ್ಯಯ	ಪದ
ಮನೆ,	ಅನ್ನು	ಮನೆಯನ್ನು [ನಾಮಪದ]
ಮಾಡು	ಎವು	ಮಾಡೆವು [ಕ್ರಿಯಾಪದ]

(b) ಮನೆ - ನಪುಂಸಕಲಿಂಗ, ಅರಸನು - ಪುಲ್ಲಿಂಗ, ಹುಡುಗಿ- ಸ್ತ್ರೀನಪುಂಸಕಲಿಂಗ, ಸೂರ್ಯ - ಪುನ್ನಪುಂಸಕಲಿಂಗ, ನಾನು- ವಾಚ್ಯಲಿಂಗ, ಗುಂಪು - ನಿತ್ಯ ನಪುಂಸಕಲಿಂಗ;

(b)

ನಾಮಪ್ರಕೃತಿ.	ಬಹುವಚನ.
ಮಾವ	ಮಾವಂದಿರು
ದೊಡ್ಡದು	ದೊಡ್ಡವು
ಹೊಳೆ	ಹೊಳೆಗಳು
ಸೊಸೆ	ಸೊಸೆಯರು

III (a) ನಾಮವಾಚಕದಲ್ಲಿ:— [ಉದಾಹರಣೆ]

1 ವಸ್ತುವಾಚಕ -	ನೆಲ, ಕುರುಡ, ರಾಮ ;
2 ಸರ್ವನಾಮ	ಅವನು, ನೀನು, ನಾನು.
3 ಗುಣವಾಚಕ	ಕರಿದು.
4 ಸಂಖ್ಯಾವಾಚಕ	ಎಂಟು.
5 ಪರಿಮಾಣವಾಚಕ	ಅಷ್ಟು.
6 ಪ್ರಕಾರವಾಚಕ	ಅಂಥದು.
7 ಅವ್ಯಯ	ಹೀಗೆ, ನಾಳೆ, ಇಲ್ಲ ಇತ್ಯಾದಿ.

(b)

ವಿಭಕ್ತಿ		ರೂಪಗಳು
ಪ್ರ.	ಹೊಸದು,	ಅಣ್ಣಂದಿರು,
ಸಂ.	[ಇಲ್ಲ]	ಅಣ್ಣಂದಿರೇ,
ದ್ವಿ.	ಹೊಸದನ್ನು,	ಅಣ್ಣಂದಿರನ್ನು,
ತೃ.	ಹೊಸದರಿಂದ,	ಅಣ್ಣಂದಿರಿಂದ,
ಚ.	ಹೊಸದಕ್ಕೆ,	ಅಣ್ಣಂದಿರಿಗೆ,
ಪಂ.	ಹೊಸದರ ದೆಸೆಯಿಂದ,	ಅಣ್ಣಂದಿರ ದೆಸೆಯಿಂದ.
ಷ.	ಹೊಸದರ	ಅಣ್ಣಂದಿರ,
ಸ.	ಹೊಸದರಲ್ಲಿ	ಅಣ್ಣಂದಿರಲ್ಲಿ.

(c) ತದ್ಧಿತಾಂತಾವ್ಯಯಗಳು:— ಚಂದ್ರನಹಾಗೆ, ಊರಿನವರಿಗೆ.
ನಿಪಾತಾವ್ಯಯಗಳು:— ಅಯ್ಯೋ, ಅಹಹ.—

IV (a) ಬೇ - ಧಾತುವಿನ ಉತ್ತಮಪುರುಷೈಕವಚನ ರೂಪಗಳು.

ವರ್ತಮಾನರೂಪ -	ಬೇಯುತ್ತೇನೆ.
ಭೂತರೂಪ -	ಬೆಂದೆನು.
ಭವಿಷ್ಯದ್ರೂಪ -	ಬೇಯುವೆನು.
ಸಂಭಾವನಾರೂಪ -	ಬೆಂದೇನು.
ವಿಧಿರೂಪ -	ಬೇಯುವೆ.

ನಿಷೇಧರೂಪ - ಬೇಯಿಸನು.

(b) ಇಡು + ದ + ಅನು - ಇಟ್ಟನು.

ಆದಿಯಲ್ಲಿ ಲಘುವುಳ್ಳ ಎರಡಕ್ಷರದ "ಡು" ವರ್ಣಾಂತ ಧಾತು ಗಳಿಗೆ ದ ಕಾರಾದಿ ಪ್ರತ್ಯಯಗಳು ಸೇರುವಾಗ ಧಾತುವಿನಕೊನೆಯ ಅಕ್ಷರಕ್ಕೆ ಟಕಾರಾದೇಶ ಬರುವುದು.

(c) ಕಲಿ - ಕಲಿಯುವ.

ತರು - ತರುವ.

ನವೆ - ನವೆವಳ.

(a) ವಿಗ್ರಹವಾಕ್ಯ ಸಮಾಸ,

ಹೊಸದಾದ + ಮನೆ = ವಿಶೇಷಣ ಪೂರ್ವಪದ ಕ. ಸ.

ಪೀತವಾದ + ಅಂಬರವು ಯಾರಿಗೋ ಅವನು = ಪೀತಾಂಬರ = ಸಮಾನಾಧಿಕರಣ ಬಹುವ್ರೀಹಿ ಸ.

(b) ತುದಿತುದಿಯಲ್ಲಿ ಸಣ್ಣ - ಕ್ರಮಾನುಲ್ಲಂಘನೆಯಲ್ಲಿ

ಹೇಳಿಹೇಳಿ ಬೇಸತ್ತನು - ಕ್ರಿಯೆ ಅನೇಕಾವರ್ತಿ ನಡೆಯಿತು ಎಂಬರ್ಥದಲ್ಲಿ ದ್ವಿರುಕ್ತಿ ಬಂದಿದೆ.

(c) ಗಾರ - ಇದನ್ನು ಇವನು ಮಾಡುತ್ತಾನೆ ಎಂಬರ್ಥದಲ್ಲಿ ಜಾತಿ ತೋರುವಾಗ ದ್ವಿತೀಯಾ ವಿಭಕ್ತ್ಯಂತವಾದ ಶಬ್ದದಮೇಲೆ ಗಾರಪ್ರತ್ಯಯವು ಬರುವದು.

ಇಗ - ಇವನ್ನು ಇವನು ಆಚರಿಸುತ್ತಾನೆ, ಇದನ್ನು ಇವನು ಮಾಡುತ್ತಾನೆ, ಇದನ್ನು ಇವನು ಅರಿತನು ಎಂಬ ಅರ್ಥಗಳಲ್ಲಿ ದ್ವಿತೀಯಾ ವಿಭಕ್ತ್ಯಂತವಾದ ಶಬ್ದದಮೇಲೆ ಬರುವದು.

ವಂತ - ಇದು ಇವನಲ್ಲಿ ಉಂಟು ಎಂಬರ್ಥದಲ್ಲಿ ಪ್ರಥಮಾ ವಿಭಕ್ತ್ಯಂತವಾದ ಶಬ್ದದಮೇಲೆ ವಂತ ಪ್ರತ್ಯಯವು ಬರುವದು.

ಇ - ಅಲ್ಲಿರುವವನು ಅಥವಾ ಅಲ್ಲಿ ಹುಟ್ಟಿದವನು ಎಂಬರ್ಥದಲ್ಲಿ ಸಪ್ತಮ್ಯಂತವಾದ ಮನೆ ಮೊದಲಾದ ದಿಗ್ವಾಚಿಗಳ ಮೇಲೂ, ಅಲ್ಲಿ ಮೊದಲಾದ ಸ್ಥಾನವಾಚಕಗಳಮೇಲೂ 'ಇ' ಪ್ರತ್ಯಯವು ಬರುವುದು.

VI (a)

ತದ್ಭವ	ತತ್ಸಮ.
ಬೆತ್ತ	ವೇತ್ರ.
ಪಕ್ಕ	ಪಕ್ಷ.
ಅಜ್ಜ	ಆರ್ಯ.
ಬತ್ತಿ	ವರ್ತಿ.

(b) 1. ಹೇತು, ಕರ್ತೃ, ಕರಣಾರ್ಥಗಳಲ್ಲಿರುವ ಶಬ್ದಗಳ ಮೇಲೆ ತೃತಿಯಾ ವಿಭಕ್ತಿಯು ಬರುವುದು. ಉದಾ——

ಹೇತ್ವರ್ಥಕ್ಕೆ—ವಿದ್ಯೆಯಿಂದ ಯಶಸ್ಸುಂಟಾಗುವುದು.

ಕರ್ತ್ರರ್ಥಕ್ಕೆ—ಬಡಗಿಯಿಂದ ಪೆಟ್ಟಿಗೆ ಮಾಡಲ್ಪಟ್ಟಿತು.

ಕರಣಾರ್ಥಕ್ಕೆ—ಕರಣಿಕನು ಲೇಖಣಿಯಿಂದ ಬರೆದನು

2. ಎಡೆಬಿಡದೆ ಒಂದೇ ಕ್ರಿಯೆ ನಡೆಯುತ್ತೆಂಬರ್ಥವು ತೋರಿದರೆ ಕಾಲವಾಚಕ, ಅಧ್ವವಾಚಕಗಳ ಮೇಲೆಯೂ ತೃತೀಯಾ ವಿಭಕ್ತಿ ಬರುವುದು. ಉದಾ—

ಕಾಲವಾಚಕಕ್ಕೆ—ಒಂದು ವರ್ಷದಿಂದ ಹೇಳುತ್ತಾನೆ.

ಅಧ್ವವಾಚಕಕ್ಕೆ—ಎರಡು ಮೈಲಿಯಿಂದ ನಡೆದನು.

3. ಸಕರ್ಮಕ ಧಾತುಗಳು ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯ ಕರ್ತೃವಾಚಕದ ಮೇಲೆ ತೃತೀಯಾ ವಿಭಕ್ತಿ ಬರುವದು. ಉದಾ—

ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿಸಿದನು.

(c) ಹಳ್ಳಕ್ಕೆ ಬಿ[illegible]ನು-ಸಪ್ತಮಿಗೆ ಪ್ರತಿಯಾಗಿ ಚತುರ್ಥಿ ವಿಭಕ್ತಿ ಬಂದಿದೆ.

ಕೊಡಲಿಯ[illegible] ಕಡಿದನು—ತೃತೀಯಾ ವಿಭಕ್ತಿಗೆ ಪ್ರತಿಯಾಗಿ ಸಪ್ತಮೀ ವಿಭಕ್ತಿ ಬಂದಿದೆ.

III (a) ವಾಕ್ಯಗಳಲ್ಲಿ ಸಾಮಾನ್ಯ ವಾಕ್ಯ, ಮಿಶ್ರವಾಕ್ಯ, ಸಂಯೋಜಿತವಾಕ್ಯವೆಂದು ಮೂರುವಿಧ.

(b) ಇದು ವಿರೋಧಾರ್ಥಕ ಸಂಯೋಜಿತವಾಕ್ಯವು.

1900.

I (a) ಪದಮಧ್ಯ ಸಂಧಿ, ಪದಾಂತ ಸಂಧಿ ಎಂದರೇನು ?
ಒಂದೊಂದು ಉದಾಹರಣೆಯನ್ನು ಕೊಡಿ.

(b) ಇವುಗಳನ್ನು ಸಂಧಿವಿಭಾಗಮಾಡಿ ಸಂಧಿಯ ಹೆಸರನ್ನುಹೇಳಿ.
1. ಆವ್ರೋಲೆ 2. ಉಚ್ಛ್ವಾಸ 3. ಧಾತ್ರಂಶ 4. ಮಾವಿನೆಲೆ.

II (a) ಎಲ್ಲ ಎಂಬುದರ ನಪುಂಸಕರೂಪದ ವಿಭಕ್ತಿರೂಪಗಳನ್ನು ಬರೆಯಿರಿ.

(b) ಇವುಗಳ ಪುಲ್ಲಿಂಗ ಬಹುವಚನರೂಪಗಳನ್ನು ಬರೆಯಿರಿ.
1. ಜನ 2. ಮಗು 3. ಹೊಸತು 4. ಎರಡು.

III (a) ಬರು, ನಿಲ್ಲು, ಕೊಳ್ಳು—ಈ ಧಾತುಗಳ ಸಂಭಾವನಾರೂಪ, ವಿಧ್ಯಾದಿರೂಪಗಳ ಮಧ್ಯಮಪುರುಷ ರೂಪಗಳನ್ನು ಬರೆಯಿರಿ.

(b) ಈ ಭಾವನಾಮಗಳು ಯಾವಧಾತುಗಳಿಂದ ಬಂದಿವೆ ?
(1) ಅಡಿಗೆ (2) ಊಟ (3) ಬಿಕ್ಕಲು (4) ನೋವು

IV (a) ಇವುಗಳ ವಿಗ್ರಹವಾಕ್ಯಗಳನ್ನು ಬರೆದು ಸಮಾಸದ ಹೆಸರನ್ನು ಹೇಳಿ.
(1) ಬೀದಿಯಬಾಗಿಲು (2) ಐದಾನೆ (3) ಮುಕ್ಕಣ್ಣ (4) ಅಂಗಾಲು.

(b) ಇವುಗಳ ಸ್ತ್ರೀಲಿಂಗ ರೂಪಗಳನ್ನು ಬರೆಯಿರಿ.
(1) ಗಾಣಿಗ (2) ಹಣವಂತ (3) ಮ[illegible]ಕ (4) ಬ್ರಾಹ್ಮಣ.

V (a) ಸಂಯೋಜಿತವಾಕ್ಯಕ್ಕೂ ಮಿಶ್ರವಾಕ್ಯಕ್ಕೂ ಭೇದವೇನು? ಉದಾಹರಣೆಯನ್ನು ಕೊಟ್ಟು ತಿಳಿಸಿ.

(b) ಇವುಗಳನ್ನು ಒಂದು ಸಾಮಾನ್ಯವಾಕ್ಯವಾಗಿ ಬರೆಯಿರಿ.
(1) ಒಂದು ಪುಸ್ತವಿತ್ತು (2) ಅದು ರಾಮನದು (3) ಅದನ್ನು ನಾನು ಓದಿದೆನು (4) ಅದನ್ನು ಓದಿ ಎರಡು ದಿವಸವಾಯಿತು.

VI ಈ ವಾಕ್ಯಗಳಲ್ಲಿರುವ ಅರ್ಥಭೇದವನ್ನು ತಿಳಿಸಿ.

(೧) ನೀನುಹೋಗು (೨) ನೀನೇ ಹೋಗು (೩) ನೀನೂ ಹೋಗು (೪) ನೀನಾಗಿಹೋಗು(೫) ನೀನಾದರೂಹೋಗು(೬) ನೀನು ಮಾತ್ರ ಹೋಗು.

ಉತ್ತರಗಳು.

I (a) ಪದಮಧ್ಯಸಂಧಿ—ಪ್ರಕೃತಿಗಾಗಲಿ ಧಾತುವಿಗಾಗಲಿ ಪ್ರತ್ಯಯಗಳನ್ನು ಹತ್ತಿಸುವಾಗ ಆಗುವ ಸಂಧಿ. ಉದಾಹರಣೆ:— ಪುಸ್ತಕ + ಅನ್ನು = ಪುಸ್ತಕವನ್ನು.

ಪದಾಂತ ಸಂಧಿ—ಪ್ರತ್ಯಯಾಂತ ಶಬ್ದಗಳಿಗೆ ಅಥವಾ ಅವ್ಯಯಗಳಿಗೆ ಮತ್ತೊಂದು ಪದವನ್ನು ಕೂಡಿಸುವಾಗ ಆಗುವ ಸಂಧಿ. ಉದಾಹರಣೆ:—ಬೇರೆ + ಒಬ್ಬನು = ಬೇರೊಬ್ಬನು.

(b) [1] ಆ + ಓಲೆ = ವಕಾರಾಗಮ ಸಂಧಿ.

[2] ಉತ್ + ಶ್ವಾಸ = ಛತ್ವಸಂಧಿ.

[3] ಧಾತೃ + ಅಂಶ = ಯಣ್ ಸಂಧಿ.

[4] ಮಾಸಿನ + ಎಲೆ = ಅಕಾರಲೋಪಸಂಧಿ.

II (a) ಎಲ್ಲ ಎಂಬುದು ಪರಿಮಾಣ ವಾಚಕ ಶಬ್ದ ಬಹುವಚನ.

ಪ್ರಥಮಾ ಎಲ್ಲವು, ಎಲ್ಲವುಗಳು,
ದ್ವಿತೀಯಾ ಎಲ್ಲವನ್ನು, ಎಲ್ಲವುಗಳನ್ನು,
ತೃತೀಯಾ ಎಲ್ಲವುಗಳಿಂದ,
ಚತುರ್ಥೀ ಎಲ್ಲವುಗಳಿಗೆ,
ಪಂಚಮೀ ಎಲ್ಲವುಗಳ ದೆಸೆಯಿಂದ,
ಷಷ್ಠೀ ಎಲ್ಲವುಗಳ,
ಸಪ್ತಮೀ ಎಲ್ಲವುಗಳಲ್ಲಿ.

[ಸಂಬೋಧನಾ ವಿಭಕ್ತಿಯುಪರಿಮಾಣ ವಾಚಕಗಳಿಗೆ ಇಲ್ಲ.]

(b) (1) ಜನರು. (2) ಮಕ್ಕಳು. (3) ಹೊಸಬರು. (4) ಇಬ್ಬರು.

III (a) ಮಧ್ಯಮ ಪುರುಷ ಸಂಭಾವನಾ ರೂಪಗಳು:—

ಧಾತು	ಏಕವಚನ	ಬಹುವಚನ.
ಬರು	ಬಂದೀಯೆ	ಬಂದೀರಿ
ನಿಲ್ಲು	ನಿಂತೀಯೆ	ನಿಂತೀರಿ
ಕೊಳ್ಳು.	ಕೊಂಡೀಯೆ	ಕೊಂಡೀರಿ

ಮಧ್ಯಮ ಪುರುಷ ವಿಧಿರೂಪಗಳು:—

ಬರು ಬಾ ಬನ್ನಿರಿ
ನಿಲ್ಲು ನಿಲ್ಲು ನಿಲ್ಲಿರಿ
ಕೊಳ್ಳು ಕೊಳ್ಳು ಕೊಳ್ಳಿರಿ.

(b) [೧] ಅಡು [೨] ಊಡು [೩] ಬಿಕ್ಕು [೪] ನೋ

IV (a) [1] ಬೀದಿಯ + ಬಾಗಿಲು = ಷಷ್ಠೀತತ್ಪುರುಷ ಸಮಾಸ
[2] ಐದು + ಆನೆಗಳ ಸಮಾಹಾರ = ದ್ವಿಗು ಸ.
[3] ಮೂರಾದ + ಕಣ್ಣುಗಳು ಯಾರಿಗುಂಟೋ ಅವನು = ವ್ಯಧಿಕರಣ ಬಹುವ್ರೀಹಿ ಸಮಾಸ.
[4] ಕಾಲಿನ + ಅಡಿ = ಅವ್ಯಯೀಭಾವ ಸಮಾಸ.

(b) (1) ಗಾಣಿಗ = ಗಾಣಗಿತ್ತಿ
(2) ಹಣವಂತ = ಹಣವಂತೆ
(3) ಮುದುಕ = ಮುದುಕಿ
(4) ಬ್ರಾಹ್ಮಣ = ಬ್ರಾಹ್ಮಣಿತಿ [ಬ್ರಾಹ್ಮಣಿ]

V (a) ವಾಕ್ಯಗಳನ್ನೇ ಅಂಗವಾಗಿ ಹೊಂದಿರುವ ವಾಕ್ಯಕ್ಕೆ ಮಿಶ್ರವಾಕ್ಯವೆಂದೂ, ಎರಡು ಅಥವಾ ಅನೇಕ ಸ್ವತಂತ್ರವಾಕ್ಯಗಳು ಮತ್ತು, ಆದರೆ, ಮೊದಲಾದವುಗಳಿಂದ ಸೇರಿಸಲ್ಪಟ್ಟಿದ್ದರೆ ಸಂಯೋಜಿತವಾಕ್ಯವೆಂದೂ ಹೆಸರು.

ಉದಾಹರಣೆ.

ಮಿಶ್ರವಾಕ್ಯಕ್ಕೆ, ತಾಳಿದವನು ಬಾಳುವನು ಎಂಬ ಗಾದೆ ಸತ್ಯವಾಗಿದೆ, ಸಂಯೋಜಿತ ವಾಕ್ಯಕ್ಕೆ; ಜನರು ವ್ಯಾಪಾರದಿಂದ ಜೀವಿಸು

ತ್ತಾರೆ. ಅಥವಾ ವ್ಯವಸಾಯದಿಂದ ಜೀವಿಸುತ್ತಾರೆ.

(b) ನಾನು ರಾಮನ ಪುಸ್ತಕವನ್ನು ಓದಿ ಎರಡು ದಿವಸವಾಯಿತು.

ಇದರಲ್ಲಿ ನಾನು ಎಂಬ ಕರ್ತೃಪದವೂ ಆಯಿತು ಎಂಬ ಒಂದೇ ಪೂರ್ಣಕ್ರಿಯಾಪದವೂ ಇರುವಕಾರಣ ಸಾಮಾನ್ಯ ವಾಕ್ಯವಾಯಿತು.

[ಕರ್ತೃ ಮೊದಲಾದ ಕಾರಕಗಳೊಡಗೂಡಿ ಸಂಪೂರ್ಣಾರ್ಥವನ್ನುಳ್ಳ ಒಂದು ಕ್ರಿಯಾಪದವನ್ನುಳ್ಳದ್ದು ಸಾಮಾನ್ಯ ವಾಕ್ಯವೆನಿಸುವದು.]

VI (1) ನೀನು ಹೋಗು—ವಿಧ್ಯರ್ಥಕ

(2) ನೀನೇ ಹೋಗು—ಅವಧಾರಣಾರ್ಥಕ

(3) ನೀನೂ ಹೋಗು—ಸಮುಚ್ಚಯಾರ್ಥಕ

(4) ನೀನಾಗಿ ಹೋಗು—ಕ್ರಿಯಾವಿಶೇಷಣ ಅಪ್ರೇರಿತ ಪ್ರಾರ್ಥನಾರ್ಥಕ

(5) ನೀನಾದರೂ ಹೋಗು—ನಿಶ್ಚಯಗಾತವಿಕಲ್ಪಾರ್ಥಕ

(6) ನೀನು ಮಾತ್ರ ಹೋಗು—ಅನ್ಯನಿಷೇಧಾರ್ಥಕ

1901

I (a) ಕನ್ನಡ ವರ್ಣಮಾಲೆಯಲ್ಲಿ ಅಕ್ಷರಗಳೆಷ್ಟು? ಋ, ೠ, ಶ, ಷ, ಮಹಾಪ್ರಾಣಾಕ್ಷರಗಳು, ವಿಸರ್ಗ ಈ ವರ್ಣಗಳು ಕನ್ನಡದಲ್ಲಿ ಇವೆಯೋ? ಸಂಸ್ಕೃತದಲ್ಲಿ ಇಲ್ಲದೆ ಕನ್ನಡದಲ್ಲಿ ಇರುವ ವರ್ಣಗಳು ಯಾವುವು?

(b) 1. ಯೋಗವಾಹ, 2. ಅನುನಾಸಿಕ, 3. ಅವ್ಯಯ—ಈ ಪದಗಳನ್ನು ಒಂದೊಂದು ಉದಾಹರಣೆಯೊಡನೆ ವಿವರಿಸಿರಿ.

II (a) ಪ್ರಕೃತಿಭಾವವೆಂದರೇನು? ಇದು ಎಲ್ಲೆಲ್ಲಿ ಬರುವುದು? ಒಂದೊಂದು ಉದಾಹರಣೆ ಕೊಡಿರಿ.

(b) ೧. ಸೂರ್ಯೋದಯ, ೨ ಪಿತ್ರಾರ್ಜಿತ, ೩. ವರ್ಷರ್ತು, ೪. ಸುಬಂತ, ೫. ಉಚ್ಛ್ವಾಸ—ಈ ಪದಗಳ ಸಂಧಿಯನ್ನು ವಿಂಗಡಿಸಿ ಸಂಧಿಯ ಹೆಸರನ್ನು ಬರೆಯಿರಿ.

(c) "ನೀನು" ಎಂಬ ಸರ್ವನಾಮದ ಪ್ರಥಮಾದಿ ಸಪ್ತ ವಿಭಕ್ತಿಗಳನ್ನು ಬರೆಯಿರಿ.

"ಇಸು" ಪ್ರತ್ಯಯವು ಎಲ್ಲೆಲ್ಲಿ ಬರುವುದು? ಉದಾಹರಣೆಗಳನ್ನು ಕೊಡಿರಿ.

(d) ಈ ಧಾತುಗಳ ಭಾವಕೃದಂತರೂಪಗಳನ್ನು ಬರೆಯಿರಿ—

೧. ಉಡು, ೨. ಹೇಸು, ೩. ಇರಿ, ೪. ಮೊಳೆ ೫. ತಡೆ.

IV (a) ಕನ್ನಡಕ್ಕೆ ಮಾತ್ರ ವಿಶೇಷವಾದ ಸಮಾಸಗಳು ಯಾವುವು? ಉದಾಹರಣೆ ಸಹಿತವಾಗಿ ಬರೆಯಿರಿ.

(b) "ಚೆನ್ನಾಗಿ ನೋಡಿದರೆ ಸಮಾಸಗಳು ನಾಲ್ಕೇ ವಿಧವು" ಎಂಬದಾಗಿ ಹೇಳಿದೆ. ಏಕೆ? ಈ ನಾಲ್ಕು ಯಾವುವು? ಉಳಿದವುಗಳು ಎಲ್ಲೆಲ್ಲಿ ಸೇರಿಕೊಳ್ಳುವುವು?

(c) ಈ ಕೆಳಗಣ ಸಮಸ್ತ ಪದಗಳಿಗೆ ವಿಗ್ರಹವಾಕ್ಯಗಳನ್ನು ಬರೆದು ಯಾವ ಸಮಾಸವೆಂದು (ಒಳಭೇದಗಳು ಸಹಿತವಾಗಿ) [illegible]ರೆಯಿರಿ:—೧. ಒಳಬಾಗಿಲು, ೨. [illegible]ಪ್ಪವು, ೩. [illegible]ಮನೆ, ೪. ನೂರಾರು ವರುಷ, ೫. ಪೀತಾ[illegible].

V (a) ಈ ಕೆಳಗಣ ಶಬ್ದಗಳ ಹಳೆಗನ್ನಡ ರೂ[illegible]ಗಳನ್ನು ಕೊಡಿರಿ:—

೧. ಇರುವೆ, ೨. ಕಿವುಚು, ೩. ಹೊರಡು, ೪. ಎತ್ತು, ೫. ಹಗೆ.

(b) ಸಂಸ್ಕೃತ ಪದಗಳು ತದ್ಭವಗಳಾಗುವಲ್ಲಿ ಈ ಕೆಳಗಿನಂತೆ ಬದಲಾಗುವುದಕ್ಕೆ ಒಂದೊಂದು ಉದಾಹರಣೆ ಕೊಡಿರಿ.

(೧) ಅನೇಕ ಸ್ತ್ರೀಪ್ರತ್ಯಯ ಆಕಾರಾಂತ ಶಬ್ದಗಳು ಎಕಾರಾಂತಗಳಾಗುವುವು. ಕೆಲವು ಅಕಾರಾಂತಗಳಾಗುವುವು.

(೨) ವ್ಯಂಜನಾಂತಗಳಾದ ಕೆಲವು ಶಬ್ದಗಳ ವ್ಯಂಜನಕ್ಕೆ ಲೋಪವಾಗಲಿ ಉಕಾರದೊಡನೆ ದ್ವಿತ್ವವಾಗಲಿ ಬರುವುದು.

(೩) ನಕಾರಕ್ಕೆ ಣಕಾರಬರುತ್ತದೆ.

(c) ಈ ಕೆಳಗಣ ಶಬ್ದಗಳನ್ನು ತತ್ಸಮ ತದ್ಭವಗಳನ್ನಾಗಿ ವಿಂಗಡಿಸಿ, ತತ್ಸಮಗಳಿಗೆ ತದ್ಭವಗಳನ್ನೂ ತದ್ಭವಗಳಿಗೆ ತತ್ಸಮಗಳನ್ನೂ ಕೊಡಿರಿ.

೧. ಸೊಗಸು, ೨. ಹರ್ಷಕಿ, ೩. ಇಷ್ಟಿಕಾ, ೪. ಕಡ್ಡಿ, ೫. ಗ್ರಂಥಿ, ೬. ಸಲಗೆ, ೭. ಕೋಡು, ೮. ಪಾವರಿ ;

VI ಮಿಶ್ರವಾಕ್ಯವೆಂದರೇನು ? ಇದರಲ್ಲಿ ಭೇದಗಳೆಷ್ಟು? ಯಾವುವು? ಉದಾಹರಣೆ ಸಹಿತವಾಗಿ ಬರೆಯಿರಿ.

ಉತ್ತರಗಳು.

I (a) ಕನ್ನಡದಲ್ಲಿ ಐವತ್ತೆರಡಕ್ಷರಗಳಿವೆ.

ಋ, ೠ, ಶ. ಷ. ಎಂಬಿವು ಅಚ್ಚಗನ್ನಡದಲ್ಲಿಲ್ಲ. ಸಂಸ್ಕೃತದಲ್ಲಿವೆ. ಮಹಾಪ್ರಾಣಾಕ್ಷರಗಳು—ಕನ್ನಡದಲ್ಲಿ ಪ್ರಾಯಶಃ ಇಲ್ಲ. ಆದರೆ ಸಂಖ್ಯಾನುಕರಣಗಳಲ್ಲಿ ಮಾತ್ರ ಉಂಟು. ವಿಸರ್ಗವು—ಹಳೆಗನ್ನಡದಲ್ಲಿ ಇದೆ.

ಸಂಸ್ಕೃತದಲ್ಲಿ ಇಲ್ಲದೆ ಕನ್ನಡದಲ್ಲಿ ಇರುವುವು—ಎ, ಒ;

(b) ೧. ಯೋಗವಾಹ ಬಿಂದುವಿಸರ್ಗಗಳು ಯಾವುದಾದರೂ ಒಂದು ಸ್ವರದ ಸಹಾಯವಿದ್ದ ಹೊರತು ಉಚ್ಚಾರಣೆಗೆ ಬಾರದ ಕಾರಣ ಇವುಗಳಿಗೆ ಹೆಸರು. ಉದಾ—ಕಂ

[ಯೋಗ-ಸಂಬಂಧವನ್ನು, ವಾಹ-ಪಡೆದಿರುವಂಥಾದ್ದು.]

೨. ಅನುನಾಸಿಕ-ಮೂಗಿನ ಸಹಾಯದಿಂದ ಹುಟ್ಟುವ ವರ್ಗದ ಪಂಚಮಾಕ್ಷರ. ಉದಾ—ಙ.

೩. ಅವ್ಯಯ - ಲಿಂಗವಚನ ವಿಭಕ್ತಿಗಳಿಂದ ವ್ಯತ್ಯಾಸವನ್ನು ಹೊಂದದೆ ಮೊದಲಿನಂತೆ ಇರುವ ರೂಪವು. ಉದಾ, ನಾಳೆ

II (a) ಪ್ರಕೃತಿಭಾವ-ಸಂಧಿಕಾರ್ಯಗಳಾದ ಲೋಪ, ಆಗಮ, ಆದೇಶಗಳು ಬಾರದೆ ಇರುವದು.

ಪ್ರಕೃತಿಭಾವವುಂಟಾಗುವ ಸ್ಥಳಗಳು:—

(೧) ಪ್ಲುತಕ್ಕೆ ಸ್ವರವು ಪರವಾದರೆ ಪ್ರಕೃತಿಭಾವವುಂಟಾಗುವದು. ಉದಾ:—ಅಮ್ಮಾ 2 ಇಲ್ಲಿ ಬಾ;

(೨) ಅದು ಎಂಬ ಸರ್ವನಾಮವು ಸಮಾಸವಾಗುವಾಗ ಆ ಎಂದಾಗುವದು. ಆ ರೀತಿಯಾಗಿ ಆದ, ಆ ಎಂಬ ಶಬ್ದಕ್ಕೆ ಅ ಆ ಐ ಔ ಎಂಬ ವರ್ಣಗಳು ಪರವಾದರೆ ಪ್ರಕೃತಿಭಾವವುಂಟಾಗುವದು. ಉದಾ:—ಆ ಅರಸು, ಆ ಔದಾರ್ಯ;

(೩) ನಿಪಾತ, ವಿಶಂಕೆ, ಅವಧಾರಣೆಗಳಿಗೆ ಸ್ವರವು ಪರವಾದರೆ ಪ್ರಕೃತಿಭಾವವುಂಟಾಗುವದು. ಉದಾ:—

ನಿಪಾತಕ್ಕೆ—ಓಹೋ ಇದೇನು.

ವಿಶಂಕೆಗೆ—ಅವನೋ? ಇವನೋ?

ಅವಧಾರಣೆಗೆ—ಅವನೇ ಇವನು.

(೪) ರೂಢಿ ಕೆಡುವ ಪಕ್ಷದಲ್ಲಿಯೂ ಮೆಚ್ಚಿಕೆಯಲ್ಲಿಯೂ ಆಕ್ಷೇಪಣೆಯಲ್ಲಿಯೂ ದುಃಖದಲ್ಲಿಯೂ ಪ್ರಕೃತಿಭಾವವುಂಟಾಗುವದು. ಉದಾ:—

ರೂಢಿ ಕೆಡುವಿಕೆಗೆ—ಮನೆ ಇತ್ತು.

ಮೆಚ್ಚಿಕೆಗೆ—ಭಲಾ ಅವನೇ ಧೀರ.

ಆಕ್ಷೇಪಣೆಗೆ—ಇದೇನೋ [illegible]ವಿಕೆ.

ದುಃಖಕ್ಕೆ—ಅಯ್ಯೋ ಇನ್ನೇನ[illegible]

(b) ೧. ಸೂರ್ಯ + ಉದಯ = ಗುಣಸಂಧಿ.

೨. ಪಿತೃ + ಅರ್ಜಿತ = ಯಣ್ಸಂಧಿ.

೩. ವರ್ಷಾ + ಋತು = ಗುಣಸಂಧಿ.

೪. ಸುಪ್ + ಅಂತ = ಜಸ್ತ್ವಸಂಧಿ.

೫. ಉತ್ + ಶ್ವಾಸ = ಛತ್ವಸಂಧಿ.

(c) ಏನು, ಏನನ್ನು, ಏತರಿಂದ, ಏತಕ್ಕೆ, ಏತರ ದೆಸೆಯಿಂದ ಏತರ, ಏತರಲ್ಲಿ ; [ಸಂಬೋಧನಾ ವಿಭಕ್ತಿ ಇಲ್ಲ]

III (a) ಭೋಗ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳೂ ಕಳವಳ ಮೊದಲಾದ ಕೆಲವು ಕನ್ನಡ ನಾಮವಾಚಕಗಳೂ ಕನ್ನಡಕ್ಕೆ ಹೊಸಧಾತುಗಳಾಗುವಾಗ " ಇಸು " ಪ್ರತ್ಯಯ ಸೇರುತ್ತದೆ. ಉದಾ-ಭೋಗ + ಇಸು = ಭೋಗಿಸು ; ಕಳವಳ + ಇಸು = ಕಳವಳಿಸು.

ರಕ್ಷಣ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳು ಕನ್ನಡಕ್ಕೆ ಹೊಸಧಾತುಗಳಾಗುವಾಗ ಕೊನೆಯ ಅಕ್ಷರ ಲೋಪ ಹೊಂದಿ " ಇಸು " ಪ್ರತ್ಯಯ ಸೇರುತ್ತದೆ.

ಉದಾ-ರಕ್ಷಣ + ಇಸು = ರಕ್ಷಿಸು, ಭಜಿಸು.

ಧಗಧಗ, ಛಟಛಟ, ಮೊದಲಾದ ಅನುಕರಣ ಶಬ್ದಗಳು ಕನ್ನಡಕ್ಕೆ ಹೊಸಧಾತುಗಳಾಗುವಾಗ " ಇಸು " ಪ್ರತ್ಯಯ ಸೇರುತ್ತದೆ. ಉದಾ—ಧಗಧಗ + ಇಸು = ಧಗಧಗಿಸು.

ಎಲ್ಲಾ ಧಾತುಗಳ ಮೇಲೂ ಪ್ರೇರಣಾರ್ಥದಲ್ಲಿ " ಇಸು " ಪ್ರತ್ಯಯವು ಬರುವುದು. ಉದಾ-ಮಾಡು + ಇಸು = ಮಾಡಿಸು.

(b)

	ಧಾತು.	ಭಾವಕೃದಂತ
1.	ಉಡು	ಉಡಿಗೆ.
2.	ಹೇಸು	ಹೇಸಿಕೆ.
3.	ಇ[illegible]	ಇರಿತ.
4.	ಮೊ[illegible]	ಮೊಳಕೆ.
5.	ತಡೆ	ತಡೆ [ಧಾತುರೂಪದಲ್ಲಿಯೇ]

IV (a) ಕನ್ನಡಕ್ಕೆ ವಿಶೇಷವಾದ ಸಮಾಸಗಳು ಎರಡು.—

1. ಗಮಕ ಸಮಾಸ-ಉದಾ. ಆಮನೆ,
2. ಕ್ರಿಯಾಸಮಾಸ- ,, ಊರು ಸೇರಿದನು.

(b) 1. ಪೂರ್ವಪದಾರ್ಥ ಪ್ರಧಾನವಾದ ಅವ್ಯಯೀಭಾ

2. ಉತ್ತರ ಪದಾರ್ಥ ಪ್ರಧಾನವಾದ ತತ್ಪುರುಷ,
3. ಉಭಯ ಪದಾರ್ಥ ಪ್ರಧಾನವಾದ ದ್ವಂದ್ವ,
4. ಅನ್ಯಪದಾರ್ಥ ಪ್ರಧಾನವಾದ ಬಹುವ್ರೀಹಿ,

ಎಂದು ಸಮಾಸಗಳು ನಾಲ್ಕೇ ವಿಧವು. ದ್ವಿಗು ಕರ್ಮಧಾರಯಗಳೆರಡೂ ಉತ್ತರ ಪದಾರ್ಥ ಪ್ರಧಾನಗಳಾದುದರಿಂದ ತತ್ಪುರುಷ ಸಮಾಸ ಭೇದಗಳೇ (ಕನ್ನಡದಲ್ಲಿ ಹೆಚ್ಚಿಗೆ ಇರುವ ಕ್ರಿಯಾಸಮಾಸ ಗಮಕಸಮಾಸಗಳೆರಡೂ ಉತ್ತರ ಪದಾರ್ಥ ಪ್ರಧಾನಗಳಾಗಿರುವುದರಿಂದ ಗಮಕ ಸಮಾಸವನ್ನು ಕರ್ಮಧಾರಯ ಭೇದವೆಂದೂ, ಕ್ರಿಯಾಸಮಾಸವನ್ನು ತತ್ಪುರುಷಭೇದವೆಂದೂ ತಿಳಿಯತಕ್ಕದ್ದು.)

(c) ವಿಗ್ರಹವಾಕ್ಯ. ಸಮಾಸ.

೧. ಒಳಗಿನ + ಬಾಗಿಲು ; ಷಷ್ಠೀ ತತ್ಪುರುಷ ಸಮಾಸ.
೨. ಹಿರಿದಾದ + ಹಾವು; ವಿಶೇಷಣ ಪೂರ್ವಪದ ಕರ್ಮಧಾರಯ ಸ.
೩. ಅದು + ಮನೆ, ಗಮಕ ಸಮಾಸ.
೪. ನೂರಾದ + ವರಹಗಳ ಸಮಾಹಾರವು ಸಮಾಹಾರದ್ವಿಗು ಸ.
೫. ಪೀತವಾದ + ಅಂಬರವು ಯಾರಿಗೋ ಅವನು, ಸಮಾನಾಧಿಕರಣ ಬಹುವ್ರೀಹಿ ಸಮಾಸ.

V (a)

	ಹೊಸಗನ್ನಡ	ಹಳಗನ್ನಡ
೧.	ಇರುವೆ	ಇರುಂಪೆ
೨.	ಕಿ[illegible]	ಕಿವುಳ್ಚು
೩.	ಹೊರಡು	ಪೊರಮಡು
೪.	ಎತ್ತ	ಎಲ್ತ
೫.	ಹಗೆ	ಪಗೆ

(b) ೧. ಅಕಾರಾಂತ ಎಕಾರಾಂತವಾಗುವುದಕ್ಕೆ, ಗಂಗಾ—ಗಂಗೆ
ಆಕಾರಾಂತ ಅಕಾರಾಂತವಾಗುವುದಕ್ಕೆ, ಕರುಣಾ-ಕರುಣ.

೨. ಜಗತ್-ಜಗ, ಜಗತ್ತು ;

೩. ಕೆಳಕೆ ನೋಡಿ;

(೧)	ತತ್ಸಮ	ತದ್ಭವ
೧.	ಸೌಭಾಗ್ಯ	ಸೊಬಗು
೨.	ವರ್ಧಕಿ	ಬಡಗಿ
೩.	ಇಷ್ಟಿಕ	ಇಟ್ಟಿಗೆ
೪.	ಕಾಷ್ಠ	ಕಡ್ಡಿ
೫.	ಗ್ರಂಥಿ	ಗಂಟು
೬.	ಶಲಾಕಾ	ಸಲಗೆ
೭.	ಕೂಟ	ಕೋಡು
೮.	ಪಾಟಲ	ಪಾದರಿ

IV [೧೮೯೮ನೇ ಇಸವಿ ೮ನೇ ಪ್ರಶ್ನೆಯ ಉತ್ತರ ನೋಡಿ]

1092.

I (a) ಪ್ರಾತಿಪದಿಕ, ಸರ್ವನಾಮ, ಅರಿಸಮಾಸ,—ಇವುಗಳ ಅರ್ಥವನ್ನು ವಿವರಿಸಿ ಉದಾಹರಣೆಗಳನ್ನು ಕೊಡಿರಿ.

(b) ಆ + ಋತು, ಅ + ಅಟವಿ, ವಾಕ್ + ಮಯ, ಅಪ್ + ಮಯ ಇವುಗಳನ್ನು ಸಂಧಿಮಾಡಿ ಬರೆಯಿರಿ.

(c) ಹಿರಿದು ಎಂಬುದಕ್ಕೆ ಏಕವಚನದಲ್ಲಿಯೂ, ಮಾವ ಎಂಬುದಕ್ಕೆ ಬಹುವಚನದಲ್ಲಿಯೂ ಎಲ್ಲಾ ವಿಭಕ್ತಿ ರೂಪಗಳನ್ನೂ ಬರೆಯಿರಿ.

II (a) ಕನ್ನಡದಲ್ಲಿ ಧಾತುಗಳನ್ನು ಹೊಸದಾಗಿ ಹೇಗೆ ಕಲ್ಪಿಸಬಹುದು ಉದಾಹರಿಸಿರಿ,

(b) ಆಡು, ಅಡು, ತಾಕು, ತಗ್ಗು, ತೀರು, ತೆರು, ನಿಲ್ಲು, ಕೊಲ್ಲು;- ಈ ಧಾತುಗಳಿಗೆ ಭೂತರೂಪದಲ್ಲಿ ಪ್ರಥಮಪುರುಷ ಪುಲ್ಲಿಂಗೈಕವಚನವನ್ನು ಮಾತ್ರ ಬರೆಯಿರಿ.

(c) ಏಕವಚನ ಕರ್ತೃವಿಗೆ ಬಹುವಚನ ಕ್ರಿಯೆ ಯಾವಾಗ ಬರಬಹುದು?

III (a) ಆಗಾಲು, ಕೆಂಗಣ್ಣನು, ತೂಗುವತೊಟ್ಟಿಲು, ಕೆಲಸವಾಡಿದವನು—ಈ ಸಮಾಸಗಳ ಹೆಸರನ್ನು ಮಾತ್ರ ಬರೆಯಿರಿ.

(b) ಅಲು, ಅಲಕ್ಕೆ ಈ ಪ್ರತ್ಯಯಗಳಿಗೆ ಇರುವ ಅರ್ಥಭೇದವನ್ನು ತಿಳಿಸಿ ಉದಾಹರಣೆಗಳನ್ನು ಕೊಡಿರಿ.

(c) ಚತುರ, ಮುದುಕ, ನಾಯಿಂದ—ಇವಕ್ಕೆ ಸ್ತ್ರೀಲಿಂಗ ರೂಪಗಳನ್ನು ಬರೆಯಿರಿ.

IV (a) ಕೇಡಿಗೆ ದುರ್ಬುದ್ಧಿ, ಲೇಖಣಿಯಿಂದ ಬರೆದನು, ಆನೆಯು ಹಿಂಡು, ಅವರಲ್ಲಿ ಈತನು ನಮ್ಮವನು - ಇವುಗಳಲ್ಲಿ ವಿಭಕ್ತಿಗಳು ಯಾವ ಯಾವ ಅರ್ಥದಲ್ಲಿ ಬಂದಿವೆ?

(b) ಇಗ, ಅನೆಯು, ಮತ - ಈ ಪ್ರತ್ಯಯಗಳಿಗೆ ಅರ್ಥವೇನು? ಉದಾಹರಿಸಿರಿ.

(c) ಎದೆ, ಹಿಟ್ಟು, ಬಿನ್ನಣ - ಇವಕ್ಕೆ ತತ್ಸಮಗಳನ್ನೂ; ವಿಜ್ಞಾಪನ, ದ್ವಿತೀಯಾ, ದಂತ—ಇವಕ್ಕೆ ತದ್ಭವಗಳನ್ನೂ ಬರೆಯಿರಿ.

V ವಾಕ್ಯವೆಂದರೇನು? ಅದರ ಭೇದಗಳಾವುವು? ಒಳಭೇದಗಳಿದ್ದರೆ ಅವುಗಳನ್ನೂ ಹೇಳಿ ಉದಾಹರಣೆಗಳನ್ನು ಕೊಡಿರಿ.

ಉತ್ತರಗಳು.

I (a) ಪ್ರಾತಿಪದಿಕ - ನಾಮವಿಭಕ್ತಿ ಪ್ರತ್ಯಯವನ್ನು ಹೊಂದತಕ್ಕ ಶಬ್ದರೂಪ. ಉದಾ—ಅರಸು, ನೆ...

ಸವರ್ಣ—ಅಕಾರದಿಂದ ಔಕಾರದವರೆಗೆ ಆಯಾ ಹ್ರಸ್ವ ದೀರ್ಘಸ್ವರಗಳು ಒಂದಕ್ಕೊಂದು ಸವರ್ಣಗಳೆನಿಸುವವು. ಉದಾ—ಅಕಾರಕ್ಕೆ ಅಕಾರವಾಗಲಿ ಆಕಾರವಾಗಲಿ ಸವರ್ಣ.

ಅರಿಸಮಾಸ-ಸಂಸ್ಕೃತ ಶಬ್ದವೂ, ಕನ್ನಡ ಶಬ್ದವೂ, ಸೇರಿ ಸಮಾಸವಾದರೆ ಅರಿಸಮಾಸವೆನಿಸುವುದು.

ಉದಾ - ವಳನಿ, ಮಂಗಳಾವಳಿ;

(b) ಅ + ಯುತ = ಅಯುತ

ಆ + ಅಡವಿ = ಆ ಅಡವಿ

ವಾಕ್ + ಮಯ = ವಾಙ್ಮಯ

ಅಪ್ + ಮಯ = ಅಮ್ಮಯ

(c)

ಪ್ರಥಮಾ	ಕಿರಿದು	ಮಹಾಮಂದಿರು
ಸಂ. ಪ್ರ	ಇಕ್ಕ...	ಮಹಾಮಂದಿರೇ
ದ್ವಿತೀಯಾ	ಕಿರಿದನ್ನು	ಮಹಾಮಂದಿರನ್ನು
ತೃತೀಯಾ	ಕಿರಿದರಿಂದ	ಮಹಾಮಂದಿರಿಂದ
ಚತುರ್ಥೀ	ಕಿರಿದಕ್ಕೆ	ಮಹಾಮಂದಿರಿಗೆ
ಪಂ.	ಕಿರಿದರ ದೆಸೆಯಿಂದ	ಮಹಾಮಂದಿರ ದೆಸೆಯಿಂದ
ಷಷ್ಠೀ	ಕಿರಿದರ	ಮಹಾಮಂದಿರ
ಸಪ್ತಮೀ	ಕಿರಿದರಲ್ಲಿ	ಮಹಾಮಂದಿರಲ್ಲಿ

II (a) [1901 ರಲ್ಲಿ III ನೇ ಪ್ರಶ್ನೆಯ ಉತ್ತರ ನೋಡಿ]

(b)

ಧಾತು	ಪ್ರ. ಪು. ಭೂ. ಕಾ. ಪು. ಏಕವಚನ.
ಆಡು	ಆಡಿದನು.
ಅಡು	ಅಟ್ಟನು
ತಾಗು	ತಾಗಿದನು
ತಗ್ಗು	ತಗ್ಗಿದನು
ತೇಗು	ತೇಗಿದನು.
ತೆರು	ತೆತ್ತನು
ನಿಲ್ಲು	ನಿಂತನು
ಕೊಲ್ಲು	ಕೊಂದನು

(c) ಕೆಲವು ಏಕವಚನದ ಕರ್ತೃಗಳು ಒಂದೇ ಕ್ರಿಯೆಯಲ್ಲಿ ಅನ್ವಯಿಸುವಾಗ ಅವುಗಳ ವಿಶೇಷಣವೂ ಕ್ರಿಯಾಪದವೂ ಬಹು

ವಚನವಾಗಿರುವದು.

ಉದಾ-ಆ ಮರದಲ್ಲಿ ಹಣ್ಣುಕಾಯಿ ಹೀಚು ತುಂಬಿದ್ದವು.

III (a) ಅಂಗಾಲು—ಅವ್ಯಯೀಭಾವ ಸಮಾಸ.

ಕೆಂಗಣ್ಣನು-ಸಮಾನಾಧಿಕರಣ ಬಹುವ್ರೀಹಿ ಸಮಾಸ.

ತೂಗುವ ತೊಟ್ಟಿಲು-ಗಮಕ ಸಮಾಸ.

ಕೆಲಸ ಮಾಡಿದವನು—ಕ್ರಿಯಾಸಮಾಸ.

(b) ಎರಡು ಕ್ರಿಯೆಗಳಲ್ಲಿ ಒಂದು ಕ್ರಿಯೆ ಮತ್ತೊಂದು ಕ್ರಿಯೆಗೆ ಕಾರಣವಾಗಿದ್ದರೆ ಕಾರಣವಾದ ಕ್ರಿಯೆಯನ್ನು ಹೇಳುವ ಧಾತುವಿನ ಮೇಲೂ ಎರಡು ಕ್ರಿಯೆಗಳಿಗೂ ಸಮಾನಕಾಲವು ತೋರುವಾಗಲೂ "ಅಲು" ಪ್ರತ್ಯಯವು ಬರುವುದು. ಉದಾ-

ಕಾರಣಕ್ಕೆ-ಗುರುವು ಬೋಧಿಸಲು ಶಿಷ್ಯನು ಕಲಿತನು.

ಸಮಾಸಕ್ಕೆ-ಸೂರ್ಯನು ಉದಯಿಸುತ್ತಿರಲು ತಾವರೆಗಳು ಅರಳಿದವು.

ಎರಡು ಕ್ರಿಯೆಗಳಲ್ಲಿ ಒಂದು ಕ್ರಿಯೆ ಮತ್ತೊಂದು ಕ್ರಿಯೆಗೆ ಪ್ರಯೋಜನವಾಗಿದ್ದರೆ ಪ್ರಯೋಜನವಾದ ಕ್ರಿಯೆಯನ್ನು ಹೇಳುವ ಧಾತುವಿನಮೇಲೆ " ಅಲಿಕ್ಕೆ " ಪ್ರತ್ಯಯು ಬರುವುದು.

ಉದಾ.—ಓದಲಿಕ್ಕೆ ಬಂದನು.

(c)

ಪದ.	ಸ್ತ್ರೀಲಿಂಗ ರೂಪ.
ಚದುರ	ಚದುರೆ
ಮುದುಕ	ಮುದುಕಿ
ನಾಯಿಂದ	ನಾಯಿಂದಗಿತಿ

IV (a) ಕೇಡಿಗೆ ದುರ್ಬುದ್ಧಿ-ಚತುರ್ಥೀ ವಿಭಕ್ತಿ ಹೇತ್ವರ್ಥದಲ್ಲಿ;
ಲೇಖಣಿಯಿಂದ ಬರೆದನು-ತೃತೀಯಾವಿಭಕ್ತಿ ಕರಣಾರ್ಥದಲ್ಲಿ;
ಆನೆಯ ಹಿಂಡು-ಷಷ್ಠೀ ವಿಭಕ್ತಿ ಜಾತಿಸಂಬಂಧದಲ್ಲಿ;
ಅವರಲ್ಲಿ ಈತನು ನಮ್ಮವನು-ಸಪ್ತಮೀ ವಿಭಕ್ತಿ ಸಮುದಾಯಾರ್ಥದಲ್ಲಿ ಬಂದಿದೆ.

(b) ಇದನ್ನು ಇವನು ಆಚರಿಸುತ್ತಾನೆ, ಇದನ್ನು ಇವನು ಮಾರುತ್ತಾನೆ. ಇದನ್ನು ಇವನು ಅರಿತವನು, ಎಂಬ ಅರ್ಥಗಳಲ್ಲಿ

"ಇಗ" ಪ್ರತ್ಯಯ ಬರುವುದು. ಉದಾ.—

ತಟವಟಿಗ, ಗಂದಿಗ, ಕನ್ನಡಿಗ;

[ಸಂಖ್ಯಾವಾಚಕಗಳ ಮೇಲೂ ಸಂಖ್ಯಾಪರಿಮಿತಿ ತೋರುವಾಗ ಪರಿಮಾಣವಾಚಕಗಳ ಮೇಲೂ ಮೊದಲು ಎಂಬ ಶಬ್ದದ ಮೇಲೂ] ಪೂರಣಾರ್ಥದಲ್ಲಿ "ಅನೆಯ" ಪ್ರತ್ಯಯವು ಬರುವುದು. ಉದಾ-

ಹತ್ತನೆಯ, ಅಷ್ಟನೆಯ, ಮೊದಲನೆಯ;

ಇದು ಇವನಲ್ಲಿ ಉಂಟು ಎಂಬ ಅರ್ಥದಲ್ಲಿ "ವಂತ" ಪ್ರತ್ಯಯವು ಬರುವುದು. ಉದಾ.—

ಹಣವಂತ, ಗುಣವಂತ;

(c)

ತತ್ಸಮ	ತದ್ಭವ
ಪತಿ	ಹೃದಯ
ಮುಷ್ಟಿ	ಪಿಷ್ಟ
ವಿಷ್ಣು	ವಿಜ್ಞಾನ
ತಕ್ಷನು	ತನ್ಘವ
ವಿಜ್ಞಾಪನ	ಜಿಷ್ಣು
ದ್ವಿತೀಯಾ	ಬಿದಿಗೆ
ದಂತ	ಜಾತ

V ಪೂರ್ಣಾರ್ಥವನ್ನು ಕೊಡುವ ಪದಗಳ ಸಮೂಹಕ್ಕೆ ವಾಕ್ಯವೆನಿಸುವುದು. ಇದರಲ್ಲಿ 3 ವಿಧಗಳು.—

1. ಸಾಮಾನ್ಯವಾಕ್ಯ—ಸತ್ಪುರುಷರು ಪರರಿಗೆ ಉಪಕಾರ ಮಾಡುತ್ತಾರೆ.

2. ಮಿಶ್ರವಾಕ್ಯ—ದೇವರು ಇದ್ದಾನೆ ಎಂಬುದನ್ನು ಎಲ್ಲರೂ ನಂಬುತ್ತಾರೆ.

[ಇದರಲ್ಲಿ 3 ಒಳಭೇದಗಳು.]

1. ಕಾರಕ ಮಿಶ್ರವಾಕ್ಯ—ಸೂರ್ಯನು ಮೂಡಲಲ್ಲಿ ಹುಟ್ಟುತ್ತಾ

ನೆಂಬುದು ಪ್ರಸಿದ್ಧವಾಗಿದೆ.

2. ನಾಮ ವಿಶೇಷಣ ಮಿಶ್ರವಾಕ್ಯ—[illegible] ಎಂಬ ಗಾದೆ ಸತ್ಯವಾಗಿದೆ.

3. ಕ್ರಿಯಾ ವಿಶೇಷಣ ಮಿಶ್ರವಾಕ್ಯ—ಆತ್ಮತೃಪ್ತಿ ಸ್ಥಿರವಾಗಿರುತ್ತದೆ ಎಂದು ಆಜ್ಞರು ಭಾವಿಸುತ್ತಾರೆ.

3 ಸಂಯೋಜಿತವಾಕ್ಯ—ಶಿಷ್ಯರನ್ನು ಅರಸನು ಸನ್ಮಾನಿಸುತ್ತಾನೆ ಮತ್ತು ಪ್ರಜೆಗಳು ಹೊಗಳುತ್ತಾರೆ.

1903

I (a) ಪ್ರಕೃತಿಭಾವ, ಕೃದಂತ, ದ್ವಿರುಕ್ತಿ, ವಿಭಕ್ತಿಪಲ್ಲಟ—ಇವುಗಳ ಅರ್ಥವನ್ನು ವಿವರಿಸಿ ಒಂದೊಂದು ಉದಾಹರಣೆ ಕೊಡಿರಿ.

(b) ಇವುಗಳನ್ನು ಸಂಧಿಮಾಡಿ ಬರೆಯಿರಿ:—
ಆ + ಅಯ್ಯ, ಈ + ಊರು, ತ್ರಿ + ಲಗ್ನ, ಷಟ್ + ಅಂಗ,

(c) ಈ ವಾಕ್ಯದಲ್ಲಿರುವ ತಪ್ಪುಗಳನ್ನು ತೋರಿಸಿ ಅವುಗಳನ್ನು ತಿದ್ದಿ ಬರೆಯಿರಿ:—
ನಮ್ಮಗಳ ಕೈಲಾದರೆ ಸೂರ್ಯನಿಕ್ಕಿಂತ ಆಚೆ ಹೋಗಿ ನೋಡೇವು.

II (a) "ಕೆಲವು ಧಾತುಗಳಿಗೆ ಬರು [illegible] ಗಳಲ್ಲಿ ಮಾತ್ರ ಪ್ರಯೋಗವುಂಟು" [illegible] ಸಿದ್ಧನಾದ ಧಾತುಗಳಿಗೆ ಮೂರುದಾಹರಣೆಗಳನ್ನು ಕೊಡಿರಿ.

(b) ಮುರಿ, ಬಡಿ, ಗೊಣಗು, ತಿರಿ—ಇವುಗಳಿಂದ [illegible] ವ [illegible] ಗಳನ್ನು ಬರೆಯಿರಿ:—

(c) ಇವುಗಳ ಸಮಾಸ ರೂಪಗಳನ್ನು ಬರೆಯಿರಿ:—
ಪುಸ್ತಕವನ್ನು + ಮಾರುವವನು; ಹಳದಾದ + ಕಾಲು; ಯಮ ಗುಂಟೋ ಅವಳು; [illegible] + ಕಲ್ಲು; ಬರುವವರು + ಜನರು

III (a) ಕನ್ನಡವನ್ನು ಬರೆತವನು; ಗೆಜ್ಜೆಯು ಬಂದಿದೆ.
ಮನೆಯಲ್ಲಿ ಮಲ್ಲಿಗೆಯಿದೆ; ಹೂವಾಡಿಗ ಷಷ್ಠೀ ವಿಭಕ್ತಿ ಬಂ
ಈ ಅರ್ಥವನ್ನು ಕೊಡುವ ತದ್ಧಿತಾಂತ ಪದಗಳನ್ನು ವಿಶಾವಿಭಕ್ತಿ

(b) ಈ ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಯಾವ ಪಡೆಯುತ್ತವೆ? ಕಮಲಾ, ರೂಪ, ಅಸ್ತ್ರ, ಜಗತ್.

(c) ಇವುಗಳ ತದ್ಭವ ರೂಪಗಳನ್ನು ಬರೆಯಿರಿ:—

[illegible]

(b) ಇವುಗಳ ತತ್ಸಮ ರೂಪಗಳನ್ನು ಕೊಡಿರಿ.—

[illegible]

IV (a) ಇವುಗಳಲ್ಲಿ ವಿಭಕ್ತಿಗಳು ಯಾವ ಯಾವ ಅರ್ಥದಲ್ಲಿ ಬಂದಿವೆ, ಹುಲಿಯಿಂದ ಹೆದರಿದನು; ತಿಂಗಳಿಂದ ಓದುತ್ತಾನೆ; ಹಾಗಿನ ಮುದುಕ, ಮರಗೆಲಸದಲ್ಲಿ ಜಾಣ.

(b) ಮಿಶ್ರವಾಕ್ಯವೆಂದರೇನು? ಅವುಗಳಲ್ಲಿ ಎಷ್ಟು ಭೇದವುಂಟು? ಉದಾಹರಣೆಯೊಡನೆ ವಿವರಿಸಿರಿ.

V (a) ಈ ವಾಕ್ಯವನ್ನು ನಿತ್ಯಸಂಬಂಧ ವಾಕ್ಯಮಾಡಿರಿ:—
ತನಗೆ ಸೌಖ್ಯವಾದ ಕಡೆಯಲ್ಲಿ ವಾಸಮಾಡಬೇಕು.

(b) ಈ ವಾಕ್ಯವನ್ನು ಸಾಮಾನ್ಯವಾಕ್ಯ ಮಾಡಿರಿ:—
ಸೂರ್ಯನು ಮೂಡಣದಲ್ಲಿ ಹುಟ್ಟುತ್ತಾನೆ ಎಂಬುದು ಪ್ರಸಿದ್ಧವಾಗಿದೆ.

ಉತ್ತರಗಳು.

I (a) ಪ್ರಕೃತಿಭಾವ,-ಸಂಧಿಕಾರ್ಯಗಳಾದ ಲೋಪ, ಆಗಮ, ಆದೇಶಗಳು ಬಾರದೇ ಇರುವದೇ ಪ್ರಕೃತಿಭಾವವೆನಿಸುವದು.

ಉದಾ. ಆ ಅರಸು.

ಕೃದಂತ,-ಧಾತುವಿನಮೇಲೆ ಕೃತ್ಪ್ರತ್ಯಯಗಳು ಸೇರಿದರೆ ಕೃದಂತ ಶಬ್ದಗಳಾಗುವವು. ಉದಾ, ಮಾಡುವ.

ದ್ವಿರುಕ್ತಿ,-ಒಂದು ಪದವು ಎರಡಾವರ್ತಿ ಪ್ರಯೋಗವಾಗುವದು.

(c) ಊಟ, ನಡತೆ, ಒಪ್ಪಿಕೆ, ಕೇಳಿಕೆ, ನೋಟ, ಮೊರೆ. ಈ ಭಾವನಾಮಗಳು ಯಾವ ಧಾತುಗಳಿಂದ ಬಂದಿವೆ?

IV (a) ಪುಸ್ತಕ, ಚಿತ್ರಪತ್ರ, ಅಕ್ಷರ, ನೇತ್ರ, ಇವಕ್ಕೆ ಸರಿಯಾದ ತದ್ಭವ ಪದಗಳನ್ನೂ; ಅಜ್ಜ, ಬತ್ತಿ, ಬಟ್ಟು, ಕಟ್ಟಿ ಇವಕ್ಕೆ ಸರಿಯಾದ ತತ್ಸಮಪದಗಳನ್ನೂ; ಹೋರಾಟ, ಹೋರು, ಹಬ್ಬ, ಹೊಮಸ್ತ್ರ. ಇವಕ್ಕೆ ಸರಿಯಾದ ಹಳಗನ್ನಡ ಪದಗಳನ್ನು ಬರೆಯಿರಿ.

(b) ಗರಿಯ, ಮುದುಕ, ಅಗಸ, ಚದುರ. ಇವಕ್ಕೆ ಸ್ತ್ರೀಲಿಂಗ ರೂಪಗಳನ್ನು ಬರೆಯಿರಿ.

(c) ಅವನು ಕೆಳಗೆ ಬಿದ್ದು ಬಿಟ್ಟನು. ಇವನು ಪಾಠವನ್ನು ಹೇಳಿ ಕೊಟ್ಟನು. ಇಲ್ಲಿ, ಬಿಡು, ಕೊಡು, ಎಂಬ ಧಾತುಗಳು ಸೇರುವುದರಿಂದ ಉಂಟಾಗುವ ಅರ್ಥ ವಿಶೇಷವೇನು?

V (a) ವಾಕ್ಯವೆಂದರೇನು? ಸಂಯೋಜಿತ ವಾಕ್ಯಕ್ಕೂ ಮಿಶ್ರವಾಕ್ಯಕ್ಕೂ ಇರುವ ಭೇದವೇನು? ಉದಾಹರಿಸಿರಿ.

(b) ನಿನಗೆಷ್ಟು ಫಲವಾಯಿತೋ ಅವನಿಗೂ ಅಷ್ಟೇ ಫಲವಾಯಿತು. ಇದು ಎಂಥಾವಾಕ್ಯ?

ಉತ್ತರಗಳು.

I (a) ನಾಮವಿಭಕ್ತಿ ಪ್ರತ್ಯಯವನ್ನು ಹೊಂದತಕ್ಕ ಶಬ್ದ [illegible]
ಆಖ್ಯಾತ ವಿಭಕ್ತಿ ಪ್ರತ್ಯಯವನ್ನು [illegible]
ರೂಪಕ್ಕೂ ಪ್ರತ್ಯಯ [illegible]
ಪ್ರಾತಿಪದಿಕ.—ಬಲ, ಹೊಲ, ಧ[illegible]
ಯೋಗವಾಹ—ಅನುಸ್ವಾರ ವಿಸ[illegible]
ಬಂದು ಸ್ವರದಸಂಗಡ ಸೇರಿಕೊಳ್ಳುವು, ಬಕ್ಕ-ಬಿಕ್ಕನೆ,
ಕಾರಣ ಯೋಗವಾಹವೆಂಬ [illegible]
ಕಂ, ಕಃ [illegible] ಮೂರು-ಸಂಖ್ಯೋಭಯ
ಅನುನಾಸಿಕ-ವರ್ಗದ [illegible]

ಸೇರಿಸಿ ಹುಟ್ಟುವುದರಿಂದ ಅನುನಾಸಿಕವೆಂಬ ಹೆಸರುಂಟಾಗಿದೆ. ಉದಾ—ಙ, ಞ.

ಪ್ರಕೃತಿಭಾವ—ಸಂಧಿಕಾರ್ಯಗಳಾದ ಲೋಪ, ಆಗಮ, ಆದೇಶಗಳು ಬಾರದೆ ಇದ್ದ ಹಾಗೆಯೇ ಇರುವುದು. ಉದಾ. ಆ ಆನೆ, ಅವನೂ ಇವನೂ,

(b) ಅಮ್ಮಯ = ಅಪ್ + ಮಯ,
ನೋಯಲು = ನೋ + ಅಲು,
ಆವೊಲೆ = ಆ + ಒಲೆ,

(c) ಏನು, ಏನನ್ನು, ಏತರಿಂದ, ಏತಕ್ಕೆ, ಏತರದೆಸೆಯಿಂದ, ಏತರ, ಏತರಲ್ಲಿ ;

II (a) ಸಮಾಸ ವಿಗ್ರಹವಾಕ್ಯ.
ಓರೆಗಣ್ಣ = ಓರೆಯಾದ ಕಣ್ಣು ಯಾರಿಗುಂಟೋ ಅವನು ; ಸಮಾನಾಧಿಕರಣ ಬಹುವ್ರೀಹಿ ಸಮಾಸ.
ಅಂಗೈ = ಕೈ + ಅಡಿ ; ಅವ್ಯಯೀಭಾವ ಸಮಾಸ.
ಹಣ್ಣುಕಾಯಿ = ಹಣ್ಣೂ + ಕಾಯೂ, ಸಮಾಹಾರದ್ವಂದ್ವ ಸ.
ಆ ಮನೆ = ಅದು + ಮನೆ ; ಗಮಕಸಮಾಸ.

(b) ಕೆಳಗೆ + ಕೆಳಗೆ = ಕೆಳಕೆಳಗೆ ; ಬಯಲು + ಬಯಲು = ಬಟ್ಟಬಯಲು ; ಕಡೆ + ಕಡೆ = ಕಟ್ಟಕಡೆ.

[illegible]ಕ್ರಿಯಾರ್ಥವನ್ನು ಕೊಡುವುದಾಗಿಯೂ ಆಖ್ಯಾತವಿಭಕ್ತಿಗಾರ ಪ್ರತ್ಯ[illegible]ಕವಾಗಿಯೂ ಇರುವ ಶಬ್ದ ರೂಪಕ್ಕೆ ಉದಾ,—ಪ[illegible] ಸರು.

(b) ಕರ್ತರಿ - ಕರ್ತರಿ ಭೂತರೂಪ ಪ್ರಥಮ ಪುರುಷೈಕವಚನ
ಪಾಪಿಃ. = ಹೊಕ್ಕನು.
ಇಂದ್ರ - ಇಂದಿರ = ಮಿಂದನು.
ಯ-ಎದೆ. = ಅಟ್ಟನು.

VI (a) ಕರ್ತೃ ಮೊದಲಾ— = ಬೇಸತ್ತನು.

III (a) ದ್ವಿತೀಯಾವಿಭಕ್ತಿಗೆ ಬದಲಾಗಿ ಷಷ್ಠೀ ವಿಭಕ್ತಿ ಬರುವುದಕ್ಕೆ ನನ್ನನ್ನು ಕೇಳಿದನು—ನನ್ನ ಕೇಳಿದನು.

ತೃತೀಯಾ ವಿಭಕ್ತಿಗೆ ಬದಲಾಗಿ ಸಪ್ತಮೀ ವಿಭಕ್ತಿ ಬರುವುದಕ್ಕೆ—ಕಿವಿಯಿಂದ ಕೇಳಿದನು—ಕಿವಿಯಲ್ಲಿ ಕೇಳಿದನು

ಸಪ್ತಮೀ ವಿಭಕ್ತಿಗೆ ಪ್ರತಿಯಾಗಿ ಪ್ರಥಮಾ ವಿಭಕ್ತಿ ಬರುವುದಕ್ಕೆ—ರಾತ್ರಿಯಲ್ಲಿ ಬಂದನು—ರಾತ್ರಿ ಬಂದನು.

(b) ಕನ್ನಡಿಗ—ಇದರಲ್ಲಿನ 'ಇಗ' ಪ್ರತ್ಯಯಕ್ಕೆ ಅರಿತವನು ಎಂದರ್ಥ.

ಧನವಂತ—ಇದರಲ್ಲಿನ 'ವಂತ' ಪ್ರತ್ಯಯಕ್ಕೆ 'ಇದು ಇವನಲ್ಲಿ ಉಂಟು' ಎಂದರ್ಥ.

ಬಳೆಗಾರ—ಇದರಲ್ಲಿನ 'ಗಾರ' ಪ್ರತ್ಯಯಕ್ಕೆ ಮಾರುವವನು, ಎಂದರ್ಥ.

ಮೊದಲನೆಯ—ಇದರಲ್ಲಿ 'ಅನೆಯ' ಪ್ರತ್ಯಯವು ಪೂರಣಾರ್ಥದಲ್ಲಿ ಬಂದಿದೆ.

(c) ಭಾವನಾಮ.	ಧಾತು.
ಊಟ	...ಡು
ನಡತೆ	...ಬರೆ
ಬಿತ್ತ	...ಣ್ಣು.
ಕೆಡಕು	... ಯಾವುವು ?
ಪಾಡು	...ಪ್ರ ಯಾ
ಹೊರೆ	

ಶಬ್ದಗಳಿಂದ ...

IV (a) ...ಂಟುಗಾರ, ಹೋಲಿ... ಗಾಡಿಕೆ, ಇವುಗಳ ತತ್ಪ್ರತ್ಯಯಗಳು ಎಂಥವು ? ಮತ್ತು ಇವುಗಳ ಅರ್ಥ

... ? ಮನೆ, ಹುಡುಗ, ...ೊಡಲಿ. ಇವುಗಳಿಗೆ ತಕ್ಕಂತೆ ...ೊಂದು ಬೇರೆಬೇರೆ ಕಾರಕ ಕೃದಂತವನ್ನು ಸೇರಿಸಿರಿ.

...ಣ್ಣ, ಅರಮನೆ, ಮೂಗಾಪುರ, ಮಣಿಗಣ್ಣ ಇವು

ತದ್ಭವ.	ತತ್ಸಮ.
ಅಜ್ಜ	ಆರ್ಯ
ಬತ್ತ	ವರ್ತಿ
ಪಿಟ್ಟು	ಪಿಷ್ಟ
ಕಡ್ಡಿ	ಕಾಷ್ಠ
ಹೊಸಗನ್ನಡ	ಹಳೆಗನ್ನಡ
ಪೊರಡು	ಪ್ರೋದ್ಧಾಟು
ಬೇಕು	ಬೇಳ್ಕು
ಹಬ್ಬ	ಪರ್ಬ
ಹೊಸ...	ಪ್ರೋಣ್ಣ

(b) ಶಬ್ದ. ಸ್ತ್ರೀಲಿಂಗರೂಪ.

ಕರಿಯ	ಕರಿಗಿ
ಮುದ...ಕ	ಮುದುಕಿ
ಅಗ...	ಅಗಸಗಿತ್ತಿ
...	ಚಕದುರೆ

(c) 'ಭ,—ಆ...ತು 'ಬಿದ್ದ' ಎಂಬ ಭೂತಕಾಲದ ಅವ್ಯಯ
ಕ್ರಿ...ಬಿಸಿಸುವು... ಸೇರಿ ಕ್ರಿಯೆ ಸಂಪೂರ್ಣವಾಗಿ ನಡೆಯಿತೆಂಬ
ಸವಾ...ಹುತ್ತದೆ.

II ವಾದ ... ಧಾತು 'ಹೇಳಿ' ಎಂಬ ಭೂತಕಾಲದ ಅ
(2) ಪೆರಸ್... ಸೇರಿ ಕ್ರಿಯೆ ಪರಾರ್ಥವಾಗಿ ನಡೆಯಿ
(3) ಸೂರ್ಯ... ಡುತ್ತದೆ.

III (1) ರಾಜ್ಯ...ವನ್ನು ಕೊಡುವ ಪದಗಳ ಸಮೂಹವೇ
(2) ಪದ...

ತಿದು...ಕ್ಕೂ ಮಿಶ್ರವಾಕ್ಯಕ್ಕೂ ಇರುವ ಭೇದ;—
ಕಂ...ಗವಾಗಿ ಹೊಂದಿರುವವಾಕ್ಯವು ಮಿಶ್ರವಾಕ್ಯ
ಉದಾ—

ಯೂ ಇರುವ ಶಬ್ದರೂಪ. ಉದಾ.—ಚಿಗಿ.

(b) ರಾಮ + ಅನುಜ = ರಾಮಾನುಜ.
ನಿಮ್ಮ + ಅನುಜ = ನಿಮ್ಮನುಜ.
ಅಯ್ಯೋ + ಇದೇನು = ಅಯ್ಯೋ ಇದೇನು.
ಎಲ್ಲಾ + ಬಿತ್ತು = ಎಲ್ಲಾ ಬಿತ್ತು.

II (a) ಹೆಗ್ಗಡೆ-ಹೆಗ್ಗಡಿತಿ, ಜಾಣ-ಜಾಣೆ,
ಜೆಸ್ತ-ಜೆಸ್ತಗಿತ್ತಿ ; ಗುಳ್ಳೆಗಣ್ಣ-ಗುಳ್ಳೆಗಣ್ಣಿ.

(b) ತಂದೆ-ತಂದೆಗಳು, ಅಣ್ಣ-ಅಣ್ಣಂದಿರು.
ಅರಸ-ಅರಸರು, ಪಶು-ಪಶುಗಳು.

(c) ನೀವು, ನಿಮ್ಮನ್ನು, ನಿಮ್ಮಿಂದ, ನಿಮಗೆ, ನಿಮ್ಮದೆಸೆಯಿಂದ, ನಿಮ್ಮ, ನಿಮ್ಮಲ್ಲಿ.

III (a) ವಿಕರಣ ಪ್ರತ್ಯಯಗಳು—ಉತ್ತ, ದ, ವ.
ಧಾತುವಿಗೆ ವರ್ತಮಾನಕಾಲದ ಆ... ತಪ್ರತ್ಯಯಗಳು ಸೇರು ವಾಗ ಧಾತುವಿಗೂ ಪ್ರತ್ಯಯಕ... ನಡುವೆ 'ಉತ್ತ' ಎಂ ಬ ವಿಕರಣ ಪ್ರತ್ಯಯವೂ, ಭೂತ...ತ್ಯಯಗಳು ಸೇರುವಾಗ 'ದ' ಎಂಬ ವಿಕರಣಪ್ರತ್ಯಯವೂ, ಭವಿಷ್ಯತ್ಪ್ರತ್ಯ ಯಗಳು ಸೇರುವಾಗ 'ವ' ಎಂಬ ವಿಕರಣಪ್ರತ್ಯಯವೂ ಬರುತ್ತವೆ.

(b) ಮಾಡು-ಮಾಡೀತು, ಮಾಡಾವು.
ಕೊಡು-ಕೊಟ್ಟ... ಕೊಟ್ಟಾವು ... ವು ಬೂ
ಬರು-ಬಂದೀತು, ಬಂದಾವು.
ನಿಲ್ಲು-ನಿಂತೀತು, ನಿಂತಾವು. ಗಾಡಿಕೆ, ಇವುಗಳ
... ಮತ್ತು ಇವುಗಳ ಅರ್ಥ

IV (a) ಕೊಡು-ಕೊಡುವಳಿ, ನೋ—
ಬಿಕ್ಕು-ಬಿಕ್ಕಲು. ... ಇವುಗಳಿಗೆ ತಕ್ಕಂತೆ

(b) ಎರಡುಮೂರು = ಎರಡು ಅಥ... ಕೃದಂತವನ್ನು ಸೇರಿಸಿರಿ.
ಪದ ಬಹುವ್ರೀಹಿ ಸಮಾಸ. ...ಪ್ಪದ, ಹಸಿಗಣ್ಣ ಇತ್ತು

ಕೋಲಾಕೋಲಿ = ಕೋಲಿನಿಂದ ಕೋಲಿನಿಂದ ಒಬ್ಬರಿಗೊಬ್ಬರು ಹೊಡೆದಾಡುವುದು ಎಂಬಂಥವುಗಳೆಲ್ಲಾ ಅವ್ಯಯೀಭಾವ ಬಹುವ್ರೀಹಿ ಸಮಾಸ.

ಮನೆಗಟ್ಟಿದನು = ಮನೆಯನ್ನು + ಕಟ್ಟಿದನು-ಕ್ರಿಯಾ ಸ.

ಎಲ್ಲಾ ಜನರು = ಎಲ್ಲರು + ಜನರು-ಗಮಕ ಸಮಾಸ.

V (a) 'ಅಲ್ಲಿರುವವನು' ಅಥವಾ 'ಅಲ್ಲಿ ಹುಟ್ಟಿದವನು,' ಎಂಬರ್ಥದಲ್ಲಿ ಸಪ್ತಮ್ಯಂತವಾದ ಮೂಡಲು ಮೊದಲಾದ ದಿಗ್ವಾಚಿಗಳ ಮೇಲೂ, ಅಲ್ಲಿ ಮೊದಲಾದ ಸ್ಥಾನವಾಚಕಗಳಮೇಲೂ 'ಅ' ಪ್ರತ್ಯಯ ಬರುವುದು.

ಉದಾ;— ಮೂಡಲ, ಅಲ್ಲಿಯ.

ಅನೆಯ,— ಸಂಖ್ಯಾವಾಚಕಗಳಮೇಲೂ, ಸಂಖ್ಯಾಪರಿಮಿತಿ ತೋರುವಾಗ ಪರಿಮಾಣ ವಾಚಕಗಳಮೇಲೂ, ಮೊದಲು ಎಂಬಶಬ್ದದಮೇಲೂ ಪೂರಣಾರ್ಥದಲ್ಲಿ 'ಅನೆಯ' ಪ್ರತ್ಯಯ ಬರುವುದು.

ಉದಾ;— [illegible]ನೆಯ, ಹತ್ತನೆಯ,

ಆಳಿ;— ಬಹಳ ಮಾತಾಡುವವನು ಎಂಬರ್ಥದಲ್ಲಿ.

ಉದಾ;— [illegible]ಮಾತಾಳಿ.

ಗಾರ,— ಇದನ್ನು ಇವನು ಮಾಡುತ್ತಾನೆ, ಎಂಬರ್ಥದಲ್ಲಿ ಜಾತಿ [illegible]ರುವಾಗ ಪ್ರಥಮಾ ವಿಭಕ್ತ್ಯಂತವಾದ ಶಬ್ದದ ಮೇಲೆ

II (2) ಪರಸ್ಪರ[illegible]ರಿಸುವುದು.

(3) [illegible] ಎಚ್ಚರಿಸುತ್ತಾನೆ.ನು = ಮಾಲೆಗಾರ.

III (1) [illegible] ದಡ - ತಟ, ಬಾವಿ-

(2) ಪದ- ಪ್ರತ್ಯಯ—

ತಿಲುಕ ಉಕ [illegible]ಮುಷಿ - ರಿಸಿ, ಪೃನೆ

ಕಂಕುಗಾನ ಗಾನ

[illegible] ಕೂಡಿ ಪೂರಣಾರ್ಥ

ವುಳ್ಳ ಒಂದೇ ಕ್ರಿಯಾಪದವನ್ನು ಹೊಂದಿರುವ ವಾಕ್ಯವು ಸಾಮಾನ್ಯ ವಾಕ್ಯವೆನಿಸುವುದು.

ಎರಡು ಅಥವಾ ಅನೇಕವಾದ ಸ್ವತಂತ್ರವಾಕ್ಯಗಳು ಮತ್ತು ಮೊದಲಾದ ಅವ್ಯಯಗಳಿಂದ ಸೇರಿಸಲ್ಪಟ್ಟದ್ದರೆ ಆ ಸಮುದಾಯವು ಸಂಯೋಜಿತವಾಕ್ಯವೆನಿಸುವುದು.

(b) ಕಾರಕ ಮಿಶ್ರವಾಕ್ಯ.

1906.

I (1) ಕಾರಕ, ಸಮಾಸ, ಕೃದಂತ ಎ… ಗಳೇನು ? ಉದಾಹರಣೆಯೊಡನೆ ತಿಳಿಸುವುದು.

(2) ಆನೆ + ಆನೆ, ಈಶ + ಈಶ, ಪಿ… + ಪಿಕ, ಓಹೊ + ಓಹೊ, ಚಿತ್ + ಚಿತ್,- ಇವುಗಳನ್ನು …ರಿಸಿ ಬರೆಯಬೇಕು.

II ಈ ಕೆಳಗಣವುಗಳನ್ನು ಸೇರಿ… ಆ ಕರ್ತೃಗಳ ಲಿಂಗಗಳೆಲ್ಲವೂ ಗೊತ್ತಾಗುವಂತೆ ಬೇ…ರೆ ವಾಕ್ಯವನ್ನು ಮಾಡಿ ಬರೆಯಿರಿ.

(1) ಹುಡುಗಿ (ಕರ್ತೃ) ಎಚ್ಚರು ಧಾತುವಿನ ಭೂತರೂಪ.

(2) ಪರಸೆ ,, ,, …ವಿಷ್ಯದ್ರೂಪ.

(3) ಸೂರ್ಯ ,, ,, ವರ್ತಮಾನ ರೂಪ.

III (1) ರಾಣಿ, ಎದೆ, …ಂಚು, ಕೋಳಿ, …ಗ, ಗಂಟು… ವು ಯಾವ ಸಂಸ್ಕೃತ, ಬಂದಾವು.

(2) ತಿರುಕ, ತೈ, ಸಿಂತಾವು. … ಗಾಡಿಕೆ, ಇವುಗಳಲ್ಲಿರುವ ಪ್ರತ್ಯಯವಳಿ, ನೇ— …ಮತ್ತು ಅವುಗಳ ಅರ್ಥವೇನು ? …ಉ.

(3) ಪೊಲ, …ರು — ಎರಡು ಅರ್ಥ…. ಇವುಗಳಿಗೆ ತಕ್ಕಂತೆ ಒಂದೆ… ಕೃದಂತವನ್ನು ಸೇರಿಸಿರಿ. …ವ್ರೀಹಿ ಸಮಾಸ.

IV (1) ಕೆನ… …ವ್ರದ, ಪಣಗ್ಗೂ ಇವು

ಯಾವ ಸಮಾಸಗಳು; ಮತ್ತು ಅವುಗಳ ವಿಗ್ರಹವು ಹೇಗೆ;
(2) ಕೇರಿಕೇರಿಯಲ್ಲಿ, ಹೋಗಹೋಗನೆ, ತಿರುಗಿತಿರುಗಿಬಂದನು ಇಲ್ಲಿಯ ದ್ವಿರುಕ್ತಿಗಳು ಯಾವಯಾವ ಅರ್ಥದಲ್ಲಿ ಬಂದಿರುವವು?

V ಈ ಕೆಳಗಣ ವಾಕ್ಯಗಳಲ್ಲಿ ವ್ಯಾಕರಣ ವಿಶೇಷವೇನಿರುವುದು?
(1) ವೇದಗಳೇ ಪ್ರಮಾಣವು.
(2) ಅತನೂ ನೀನೂ ಓದಿದಿರಿ.
(3) ಬೆಟ್ಟಕ್ಕೆ ಹತ್ತಿದನು.
(4) ನಾಳೆ ಬ[illegible]ತ್ತೇನೆ.

VI (1) ಆಲಸ್ಯವನ್ನು ಬಿಟ್ಟರೆ ಲೇಸಾಗುವುದು-ಇದು ಎಂಥಾವಾಕ್ಯ?
(2) ಆಲಸ್ಯವನ್ನು..........ವುದು ಎಂಬುದನ್ನು ಇಟ್ಟುಕೊಂಡು ಬಂದು ಪ್ರಧಾನವಿಶೇಷಣ ಮಿಶ್ರವಾಕ್ಯವನ್ನು ಮಾಡುವುದು.

ಉತ್ತರಗಳು—

I (1) ಕಾರಕ- ಕರ್ತೃ, ಕರ್ಮ, ಕರಣ, ಸಂಪ್ರದಾನ ಮೊದಲಾದ ವಿಭಕ್ತ್ಯರ್ಥಗಳಿಗೆ ಕಾರಕಗಳೆಂದು ಹೆಸರು. ಆದರೆ ಷಷ್ಠೀವಿಭಕ್ತಿಗೆ ಮಾತ್ರ ಕಾರಕಸಂಜ್ಞೆ ಇಲ್ಲ.
ಸಮಾಸ- [1805 ರಲ್ಲಿ I (a) ನೋಡಿ]
ಪ್ಲುತ-ಸ್ವರ- [illegible]ಲ್ಲಿ ಮೂರುಮಾತ್ರೆಯುಳ್ಳದ್ದು. ಉದಾ. ಕೂ 3
(2) ಆನೆಯಾನೆ, ಕಾರೇಶ, ಪಕ್ಕೈಕ, ಓಹೋಹೊ, ಚಿಚ್ಚಿತ್.

II (1) [illegible] ಎಚ್ಚರಿಸಿ[illegible] ಹುಡುಗಿ ಎಚ್ಚರಿಸಿತು.
(2) ಪರನೆ ಎಚ್ಚರಿಸುವುದು.
(3) ಸೂರ್ಯ ಎಚ್ಚರಿಸುತ್ತಾನೆ. ಸೂರ್ಯ ಎಚ್ಚರಿಸುತ್ತದೆ.

III (1) ನಾಜ್ಞೀಸ್ವದಯ, ಕಾಂಸ್ಯ, ಕುಕ್ಕುಟ, ಯುಗ, ಗ್ರಂಥಿ
(2)

ಪದ-	ಪ್ರತ್ಯಯ—	ಅರ್ಥ—
ತಿರುಕ	ಉಕ	ಸ್ವಭಾವವುಳ್ಳವನು.
ಕಂಚುಗಾರ	ಗಾರ	ಮಾಡುವವನು.

5

ಹೋಲಿಕೆ ಇಕೆ ಭಾವಾರ್ಥ.

ಗೌಡಿಕೆ ಇಕೆ ಗೌಡನಭಾವ.

(3) ಮೂಲ-ಬೆಳೆವಬೂಲ. ಮನೆ-ಮಲಗುವಮನೆ,
ಹುಡುಗ-ಓದುವಹುಡುಗ, ಕೊಡಲಿ-ಕಡಿವಕೊಡಲಿ.

IV (1). ಕೆಟ್ಟ ಸೆ, ಮಣ್ಣು = ವಿ. ಪೂ. ಕ.
ಅರಗಿನ + ಮನೆ = ಷ. ತ.

ಮೂರು + ಗ್ರಾಮಗಳ ಸಮಾಹಾರವು = ಸ. ದ್ವಿಗು.
ಹಣೆಯಲ್ಲಿ ಕಣ್ಣು ಯಾರಿಗುಂಟೋ ಅವನು = ವ್ಯ. ಬ. ಸ
(2) ಕೇರಿಕೇರಿಯಲ್ಲಿ—ವೀಪ್ಸೆಯಲ್ಲಿ,
ಬೇಗಬೇಗನೆ—ಆದಿಕ್ಯಾರ್ಥದಲ್ಲಿ,

ತಿರುತಿರುಗಿ—ಕ್ರಿಯೆ ಅನೇಕಾವರ್ತಿ ನಡೆಯಿತೆಂಬರ್ಥದಲ್ಲಿ.

V (1) ವೇದಗಳೇ ಪ್ರಮಾಣವು ಎಂಬಲ್ಲಿ ವೇದಗಳಲ್ಲಿ ಪ್ರಮಾಣ ವನ್ನು ವಿಧಾನಮಾಡುವುದರಿಂದ ಪ್ರಮಾಣವು ವಿಧೇಯ ವಿಶೇಷಣವಾಯಿತು.

(2) ಅತನೂ ನೀನೂ ಓದಿದಿರಿ ಎಂಬಲ್ಲಿ ಪ್ರಥಮ ಮಧ್ಯಮ ಪುರುಷ ಸರ್ವನಾಮಗಳೆರಡೂ ಕರ್ತೃವಾದ್ದರಿಂದ ಮಧ್ಯಮ ಪುರುಷ ಕ್ರಿಯೆ ಬಂದಿದೆ.

(3) ಬೆಟ್ಟಕ್ಕೆ ಹತ್ತಿದನು ಎಂಬಲ್ಲಿ ದ್ವಿತೀಯಾ ವಿಭಕ್ತಿಗೆ ಪ್ರತಿಯಾಗಿ ಚತುರ್ಥೀ ವಿಭಕ್ತಿ ಬಂದಿದೆ.

(4) ನಾಳೆ ಬರುತ್ತೇನೆ ಮೇಲಿನ ನೇನು ಎಂಬಪದವು ಅಧ್ಯಾಹಾರವಾಗಿದೆ.

VI (1) ಇದು ಸಾಮಾನ್ಯವಾಕ್ಯ.

(2) ಆಲಸ್ಯವನ್ನು ಬಿಟ್ಟರೆ ಲೇಸಾಗುವುದು ಯೆಂದು ವಿವೇಕಿಗಳು ತಿಳಿಯುತ್ತಾರೆ.

1907.

I (೧) ಅನುನಾಸಿಕವೆಂದರೇನು ?

(೨) " ರಂಗಸಿಲಯ ಗೋವಿಂದ ನಿನ್ನ ಪದಾಂಬುಜವ ಕಂಡು ವಾಂಛಿತವ ಪಡೆವವರಾರೊ ?

ಇಲ್ಲಿ ಅನುಸ್ವಾರಗಳು ಯಾವಯಾವ ಅನುನಾಸಿಕಗಳಿಗೆ ಬದಲಾಗಿ ಬಂದಿವೆ? ಅದನ್ನು ತಿಳಿಸಲು ಈ ವಾಕ್ಯವನ್ನು ಅನುಸ್ವಾರಗಳಿಲ್ಲದಂತೆ ಬರೆಯಿರಿ.

II (1) ಇಟ್ಟಾವ್ರು, ವಿ[illegible]ಯಿ, ತಿಳಿಯದು, ಬಗ್ಗಿಸ_ಇವು ಯಾವ ಧಾತುಗಳ ಯಾವ ರೂಪ, ಯಾವ ಪುರುಷ, ಯಾವ ವಚನ, ಯಾವಲಿಂಗ?

(2) ಬಿಡು, ಕೊಳ್ಳು—ಇವು ಇತರ ಧಾತುವಿನ ಯಾವ ರೂಪದೊಡನೆ ಸೇರಿ ಯಾವ ವಿಶೇಷಾರ್ಥವನ್ನು ಕೊಡುತ್ತವೆ? ಉದಾಹರಿಸಿರಿ.

(3) ಬಿಕ್ಕ[illegible]ಬಿಕ್ಕು, ಕುಣಿ, ಕೊಡು—ಇವುಗಳ ಭಾವನಾಮಗಳು ಯಾವುವು?

III (1) ವಿಭಕ್ತಿಯೆಂದರೇನು ?

(2) " ಅವನು ಬೆಟ್ಟಕ್ಕೆ ಹತ್ತುತ್ತಿರುವಾಗ ತಿಳಿಯದೆ ಕಲ್ಲ ಎಡವಿ ಪಕ್ಕದ ಹಳ್ಳಕ್ಕೆ ಬಿದ್ದನು.

(ಈ) ಈವಾಕ್ಯದಲ್ಲಿ ಯಾವ ವಿಭಕ್ತಿ ಯಾಕಡೆ ಯಾವ ವಿಭಕ್ತಿ ಬಂದಿದೆ?

IV (1) ಗೊಲ್ಲ[illegible], [illegible]ಶಸ್ತ್ರಿಗ, ಗಂಡಿಗ—ಇಲ್ಲಿ 'ಇಗ' ಪ್ರತ್ಯಯಗಳ ಅರ್ಥವೇನು ?

(2) ಅಗಸ, ಬ್ರಾಹ್ಮಣ, ಕರಿಯ ಇವುಗಳ ಸ್ತ್ರೀಲಿಂಗ ರೂಪಗಳು ಹೇಗೆ?

(3) ಗಮಕಸಮಾಸ, ಕ್ರಿಯಾಸಮಾಸ—ಒಂದೊಂದು ಉದಾಹರಣೆಯನ್ನು ಹೇಳಿ ಇವುಗಳ ಭೇದವನ್ನು ತೋರಿಸಿರಿ.

V (೩) 1. ಅವನು ಬರಿಯೋ ? 2. ಅವನು ಬಂದನೇ.

3. ಮರಿಯೇ ಪಾಲಿಸೋ ! 4. ಹರಿಯೋ ಹರನೋ ಅವನು. 5. ಏನೇನೋ ಹರಟುತ್ತಾನೆ.
ಈ ವಾಕ್ಯಗಳಲ್ಲಿರುವ 'ಏ' ಕಾರ 'ಓ' ಕಾರಗಳ ಅರ್ಥವನ್ನು ತಿಳಿಸಿರಿ.

(b) "ಕಪ್ಪಾದ ಹಲಗೆಯಲ್ಲಿ ಅಕ್ಷರಗಳು ಚನ್ನಾಗಿ ಕಾಣಿಸುತ್ತವೆ" ಇದು ಎಂಥಾ ವಾಕ್ಯ? ಇದನ್ನು ಮಿಶ್ರವಾಕ್ಯವನ್ನಾಗಿ ಬರೆಯಿರಿ.

(c) "ಹುಲ್ಲಿನಮೇಲೆ ತಿರುಗಾಡುವವರನ್ನು ಶಿಕ್ಷೆಗೆ ಗುರಿಮಾಡಲ್ಪಡುತ್ತದೆ" ಈ ವಾಕ್ಯದಲ್ಲಿ ತಪ್ಪಿದ್ದರೆ ಕಾರಣವನ್ನು ಹೇಳಿ ತಿದ್ದಿ ಬರೆಯಿರಿ.

ಉತ್ತರಗಳು.

(1) ವರ್ಗದ ಪಂಚಮಾಕ್ಷರವು ನಾಸಿಕವನ್ನನುಸರಿಸಿ ಹುಟ್ಟುವುದರಿಂದ ಅನುನಾಸಿಕವೆಂದು ಹೆಸರುಂಟಾಗಿದೆ.

(2) ರಙ್ಗ ನಿಲಯ ಗೋವಿನ್ದ ನಿನ್ನ ಪಾದಾಮ್ಬುಜವ ಕಣ್ಡು ವಾಞ್ಛಿತವ ಪಡೆಯದವರಾರೊ ?

[ಅನುಸ್ವಾರದ ಮುಂದೆ ಯಾವವರ್ಗದ ಅಕ್ಷರಗಳಿರುತ್ತವೆಯೋ ಆ ವರ್ಗದ ಅನುನಾಸಿಕವರ್ಣವು ಆ ಅನುಸ್ವಾರಕ್ಕೆ ಬರುವುದು. ಹೇಗೆಂದರೆ-ರಂಗ ಎಂಬಲ್ಲಿ ಅನುಸ್ವಾರದ ಮುಂದೆ ಕವರ್ಗದ, (ಗ) ಎಂಬ ವರ್ಣವಿರುವುದರಿಂದ ಆ ವರ್ಗದ ಪಂಚಮಾಕ್ಷರವಾದ (ಙ) ಎಂಬ ಅನುನಾಸಿಕ ವರ್ಣವು ಅನುಸ್ವಾರಕ್ಕೆ ಬಂದಿರುತ್ತದೆ. ಇದರಂತೆ ಉಳಿದವುಗಳನ್ನೂ ತಿಳಿಯುವುದು.]

II (1) ಇಟ್ಟಾವು- ಇಡು, ಧಾತುವಿನ ಸಂಭಾವನಾರೂಪ, ಪ್ರಥಮಪುರುಷ ಬಹುವಚನ, ನಪುಂಸಕಲಿಂಗ.
ವಿಸಾಯಿ- ವಿಸಾ, ಧಾತುವಿನ ವಿಧ್ಯರ್ಥರೂಪ, ಮಧ್ಯಮಪುರುಷ ಏಕವಚನ, ಸರ್ವಲಿಂಗ.

ತಿಳಿಯದು- 'ತಿಳಿ' ಧಾತುವಿನ ನಿಷೇಧರೂಪ, ಪ್ರಥಮಪುರುಷ ಏಕವಚನ, ನಪುಂಸಕಲಿಂಗ.

ಬಗ್ಗಿಸ- 'ಬಾಗು' ಧಾತುವಿನ ಕಾರಕ ಕೃದಂತರೂಪ.

(2) 'ಬಿಡು' ಧಾತುಭೂತಕಾಲದ ಅವ್ಯಯ ಕೃದಂತದಮೇಲೆ ಸೇರಿ ಕ್ರಿಯೆ ಸಂಪೂರ್ಣವಾಗಿ ನಡೆಯಿತೆಂಬರ್ಥವನ್ನು ಕೊಡುತ್ತದೆ. ಉದಾ-ಸಾಲವನ್ನು ತೀರಿಸಿಬಿಟ್ಟನು.

'ಕೊಳ್ಳು' ಧಾತು ಭೂತಕಾಲದ ಅವ್ಯಯಕೃದಂತದ ಮೇಲೆ ಸೇರಿಕ್ರಿಯೆಸ್ವಾರ್ಥವಾಗಿನಡೆಯಿತೆಂಬಅರ್ಥವನ್ನುಕೊಡುತ್ತದೆ.

ಉದಾ-ವರವನ್ನು ಬೇಡಿಕೊಂಡನು.

(3) ಬಿಕ್ಕಣೆ, ಒಕ್ಕಲು, ಕಾಣಿತ್ರ, ಕೊಡುವಳಿ.

III (1) ಪದದ ಅರ್ಥವನ್ನು ವಿಭಾಗಿಸುವುದರಿಂದ ವಿಭಕ್ತಿಯೆಂದು ಹೆಸರು ಬಂದಿದೆ.

(2) ರಾತ್ರಿ- ರಾತ್ರಿಯಲ್ಲಿ ಎಂಬ ಸಪ್ತಮೀವಿಭಕ್ತಿಗೆ ಪ್ರತಿಯಾಗಿ ಪ್ರಥಮಾ ವಿಭಕ್ತಿ ಬಂದಿದೆ.

ಬೆಟ್ಟಕ್ಕೆ- ಬೆಟ್ಟವನ್ನು ಎಂಬ ದ್ವಿತೀಯಾ ವಿಭಕ್ತಿಗೆ ಪ್ರತಿಯಾಗಿ ಚತುರ್ಥೀವಿಭಕ್ತಿ ಬಂದಿದೆ.

ಕಲ್ಲ-ಕಲ್ಲನ್ನು ಎಂಬ ದ್ವಿತೀಯಾ ವಿಭಕ್ತಿಗೆ ಪ್ರತಿಯಾಗಿಷಷ್ಠೀ ವಿಭಕ್ತಿ ಬಂದಿದೆ.

[illegible]- [illegible]ಲ್ಲಿ ಎಂಬ ಸಪ್ತಮೀ ವಿಭಕ್ತಿಗೆ ಪ್ರತಿಯಾಗಿ ಚತುರ್ಥೀ ವಿಭಕ್ತಿ ಬಂದಿದೆ.

IV 1. ಗಾಣಿಗ- [illegible]ಗಾರ್ಥದಲ್ಲಿ,

ಕಾಸ್ರಿಗ-ಅರಿವನು ಎಂಬರ್ಥದಲ್ಲಿ,

ಗಂಧಿಗ-ಮಾರುವವನು ಎಂಬರ್ಥದಲ್ಲಿ,

2.

ಶಬ್ದ	ಸ್ತ್ರೀಲಿಂಗರೂಪ
ಅಗಸ	ಅಗಸಗಿತ್ತಿ
ಬ್ರಾಹ್ಮಣ	ಬ್ರಾಹ್ಮಣಿತಿ

ಕರಿಯು ಕರಿಗೆ

3. ಕ್ರಿಯಾಸಮಾಸಕ್ಕೂ ಗಮಕ ಸಮಾಸಕ್ಕೂ ಭೇದ,— ದ್ವಿತೀಯಾ ವಿಭಕ್ತ್ಯಂತವಾದ ಸುಬಂತ ಪದವು ಪೂರ್ವಪದವಾಗಿದ್ದು ಉತ್ತರಪದವಾದ ಕೃದಂತದೊಡನೆ ಸಮಾಸವಾದರೆ ಕ್ರಿಯಾಸಮಾಸವೆನಿಸುವುದು.

ಕೃದಂತವು ಪೂರ್ವಪದವಾಗಿದ್ದು. ಸುಬಂತವಾದ ಉತ್ತರಪದದೊಡನೆ ಸಮಾಸವಾದರೆ ಗಮಕಸಮಾಸವೆನಿಸುವುದು ಉದಾ-
ಕ್ರಿಯಾ- ಕೆಲಸವನ್ನು + ಮಾಡುವುದು = ಕೆಲಸಮಾಡುವುದು.
ಗಮಕ- ಮಾಡುವುದು + ಕೆಲಸ = ಮಾಡುವಕೆಲಸ.

V (a) 1. ಅವನು ಹರಿಯೇ? ಇಲ್ಲಿ ಏ ಕಾರವು ಪ್ರಶ್ನಾರ್ಥದಲ್ಲಿ
2. ಅವನು ಹರಿಯೇ - ಇಲ್ಲಿ ಏ ಕಾರವು ಅವಧಾರಣಾರ್ಥದಲ್ಲಿ
3. ಹರಿಯೇ ಪಾಲಿಸೋ! ಇಲ್ಲಿ ಸಂಬೋಧನೆಯಲ್ಲಿ ಏ, ಓ, ಕಾರ
4. ಹರಿಯೋ ಹರನೋ ಅವನು - ಇಲ್ಲಿ ಓ ಕಾರವು ಸಂಶಯಾರ್ಥದಲ್ಲಿ ಬಂದಿದೆ.

5. ಏನೇನೋ ಹರಟುತ್ತಾನೆ - ಇಲ್ಲಿ ಓ, ಕಾರವು ಆಕ್ಷೇಪಣೆಯಲ್ಲಿ ಬಂದಿದೆ.

(b) ಈ ವಾಕ್ಯದಲ್ಲಿ ಕರ್ತೃಕರ್ಮಾದಿ ಕಾರಕಗಳಿದ್ದು ಸಂಪೂರ್ಣಾರ್ಥವುಳ್ಳ, ಒಂದೇ ಕ್ರಿಯಾಪದವಿರುವುದರಿಂದ ಸಾಮಾನ್ಯ ವಾಕ್ಯವು. ಈ ವಾಕ್ಯವನ್ನು ವಿ[illegible]ವಾಕ್ಯವಾಗಿ [illegible] ಬೇಕಾದರೆ ಇದನ್ನೇ ಮುಖ್ಯ ಂವಾಕ್ಯ[illegible] ಅಂಗವಾಗಿ ಮಾಡಬೇಕು. ಉದಾಹರಣೆ- "ಕಪ್ಪಾದ ಹಲಗೆಯ ಬಿಳಿ ಅಕ್ಷರಗಳು ಚೆನ್ನಾಗಿ ಕಾಣಿಸುತ್ತವೆ" ಎಂಬುದನ್ನು ನೋಡಿರಿ.

(c) ಈ ವಾಕ್ಯವು ಕರ್ಮಣಿಪ್ರಯೋಗವಾಗಿರುವುದರಿಂದ ಕರ್ಮಪದವು ಪ್ರಥಮಾ ವಿಭಕ್ತ್ಯಂತವಾಗಿರಬೇಕು. ಇದರಲ್ಲಿ ಕರ್ಮಪದವು ದ್ವಿತೀಯಾ ವಿಭಕ್ತ್ಯಂತವಾಗಿರುವುದು. ಅದಕ್ಕಾಗಿ 'ತಿನುಗಾಡುಗಳು' ಎಂದು ತಿದ್ದಿಕೊಳ್ಳಬೇಕು. ಆದರೆ ಈ ವಾ

ಶ್ಯಕ್ಕೆ ಕರ್ತೃಪದವಾಯಿತು. ಕರ್ತೃಪದವು ಪುಲ್ಲಿಂಗ ಬಹುವಚನದಲ್ಲಿರುವುದರಿಂದ ಕ್ರಿಯಾಪದವೂ ಅದಕ್ಕೆ ಸಮಾನವಾಗಿ 'ಗುರಿಮಾಡುತ್ತಾರೆ' ಎಂದು ತಿದ್ದಿಕೊಳ್ಳಬೇಕು.

•ಪುಲ್ಲಿಸಮೋಳಿಕೆತಿರುಗಾಡುವವರುಶಿಕ್ಷೆಗೆಗುರಿಮಾಡಲ್ಪಡುತ್ತಾರೆ.

1908

I (a) ಸಮಾಸ, ಸಂಧಿ- ಇವುಗಳಿಗೆ ಭೇದವೇನು? ಸ್ಪಷ್ಟವಾಗಿ ತಿಳಿಸಿ.

(b) ಎಲ್ಲಾ ಋಷಿಪುತ್ರರೂ ಆ ಮಹರ್ಷಿಗೆ ಭವತ್ಕಾರಣವೇ ಅಸ್ಮತ್ಕಾರಣವೆಂದು ಹೇಳುತ್ತಾ, ಆತನನ್ನು ಮರೆಹೊಕ್ಕರು

ಈ ವಾಕ್ಯದಲ್ಲಿ ಕೆಳಗೆ ಗೆರೆಹಾಕಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಗಳ ಹೆಸರುಗಳನ್ನು ಹೇಳಿ.

II (a) ಅವ್ಯಯ ಪದಗಳೆಂದರೇನು? ಈಗ, ಈಗಿನ, ಉಂಟು- ಇವುಗಳು ಎಂಥ ಅವ್ಯಯಗಳು ?

(b) (1) ಸಾ, ನೋ- ಈ ಧಾತುಗಳಿಗೆ ಭೂತರೂಪದಲ್ಲಿ ಪ್ರಥಮಪುರುಷ ಪುಲ್ಲಿಂಗೈಕವಚನಗಳನ್ನು ಬರೆಯಿರಿ.

(2) ಈದುವು, ಬಂದರೆ- ಇವುಗಳು ಯಾವಧಾತುಗಳ ಯಾವ [illegible]ನಗಳು ?

III (a) ವಿಧ್ಯರ್ಥದಲ್ಲಿ [illegible] ಎಂಬ ಪ್ರತ್ಯಯವು ಯಾವ ವಿಶೇಷಾರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತದೆ? ಉದಾಹರಣ ರೂಪವಾದ ವಾಕ್ಯ ಬರೆಯಿರಿ.

(b) ಭೂತರೂಪಕ್ಕೆ ಬದಲಾಗಿ ಭವಿಷ್ಯದ್ರೂಪವೂ, ಏಕವಚನಕ್ಕೆ ಬದಲಾಗಿ ಬಹುವಚನವೂ ಯಾವ ಅರ್ಥಗಳಲ್ಲಿ ಬರುವುವು? ಉದಾಹರಣರೂಪವಾಗಿ ನಿಮ್ಮ ಸ್ವಂತವಾಕ್ಯಗಳನ್ನು ಬರೆಯಿರಿ.

(c) (1) ಮುಳ್ಳು, ಮುಳ್ಳು ನೋಡಿ ನಡಿ. (2) ಅದು ತುದಿ ತುದಿಯಲ್ಲಿ ಸಣ್ಣ. ಇವುಗಳಲ್ಲಿರುವ ದ್ವಿರುಕ್ತಿಯ ಪ್ರಯೋಜನ ವೇನು?

VI (a) ಹಣೆಗಣ್ಣ, ಹಣೆಗಣ್ಣು,- ಇವುಗಳಿಗೆ ವಿಗ್ರಹವಾಕ್ಯ ಬರೆದು ಸಮಾಸದ ಹೆಸರುಗಳನ್ನು ಹೇಳಿ.

(b) ಸುಶೀಲೆ, ಅಕ್ಷತೆ, ಕೇಳೆ,- ಇವುಗಳಲ್ಲಿ "ಎ" ಎಂಬ ಪ್ರತ್ಯಯವು ಏತಕ್ಕೆ ಬಂದಿದೆ?

(c) (1) ಪುಸ್ತಕ, ಅರ್ಗಳ,- ಇವುಗಳಿಗೆ ತದ್ಭವಗಳನ್ನೂ, (2) ಸೇಲೆ, ಸೊಬಗು,- ಇವುಗಳಿಗೆ ತತ್ಸಮಗಳನ್ನೂ, (3) ಪೊಣ್ಮು, ಇರುಂಪೆ,- ಇವುಗಳಿಗೆ ಹೊಸಗನ್ನಡದ ಶಬ್ದಗಳನ್ನು ಬರೆಯಿರಿ.

V (a) ಕೆಳಗೆ ಬರೆದಿರುವ ವಾಕ್ಯಗಳನ್ನು ಅರ್ಥ ಕೆಡದಂತೆ, ಅಲ್ಲಿ ಹೇಳಿರುವ ಪ್ರಕಾರ ಬದಲಾಯಿಸಿ ಬರೆಯಿರಿ.

(1) ಅವನಿಗೆ ವಯಸ್ಸಿನೊಡನೆಯೇ ವಿವೇಕವೂ ಹೆಚ್ಚುತ್ತದೆ.

(ನಿತ್ಯ ಸಂಬಂಧ ವಾಕ್ಯವನ್ನಾಗಿ ಮಾಡಿ)

(2) ಅವನು ಜಾಣನೆಂಬುವುದು ಎಲ್ಲರಿಗೂ ತಿಳಿದಿರುತ್ತದೆ.

('ಎಲ್ಲರೂ' ಎಂಬುದನ್ನು ಪ್ರಯೋಗಿಸಿ ಸಾಮಾನ್ಯವಾಕ್ಯ ಮಾಡಿ)

(3) ನನ್ನಿಂದ ಕೇಳಲ್ಪಟ್ಟ ಪ್ರಶ್ನೆಗೆ ಅವನು ಉತ್ತರ ಕೊಡಲಿಲ್ಲ.

(ಇಲ್ಲಿ ಕರ್ಮಣಿ ಕರ್ತರಿ ಪ್ರಯೋಗಗಳನ್ನು ಬದಲಾಯಿಸಿ)

(b) ಈ ವಾಕ್ಯದಲ್ಲಿ [illegible] ಕಾರಣವನ್ನು ತಿಳಿಸಿ ಸೃಷ್ಟಿಯ ದಿವಸ ತಾತರು ಬಂದಾಗ [illegible]ಯೊಬ್ಬನೇ ಇದ್ದನು. ಇತರೇ ಜನಗಳಿರಲಿಲ್ಲ.

ಉತ್ತರಗಳು:-

I (a) ಅಕ್ಷರಗಳು ಒಂದಕ್ಕೊಂದು ಸೇರುವುದೇ ಸಂಧಿಯೆನಿಸುವುದು. ಎರಡು ಅಥವಾ ಅನೇಕ ಸುಬಂತ ಪದಗಳು ಮಧ್ಯಗತವಾದ ವಿಭಕ್ತಿ ಪ್ರತ್ಯಯದ ಲೋಪವನ್ನು ಹೊಂದಿ ಒಂದಕ್ಕೊಂದು ಸೇರಿ

ಎರಡು ಅಥವಾ ಅನೇಕ ಸುಬಂತ ಪದಗಳು ಮಧ್ಯಗತವಾದ ವಿಭಕ್ತಿ ಪ್ರತ್ಯಯದ ಲೋಪವನ್ನು ಹೊಂದಿ ಒಂದಕ್ಕೊಂದು ಸೇರಿ ಒಂದರ್ಥವನ್ನು ಕೊಡುವ ಒಂದು ಪದವಾಗುವುದು ಸಮಾಸವೆನಿಸುವುದು. ಉದಾ,—

ಸಂಧಿಗೆ,- ಪುಸ್ತಕ + ಅನ್ನು = ಪುಸ್ತಕವನ್ನು,
ಸಮಾಸಕ್ಕೆ,- ಪುಸ್ತಕವನ್ನು + ಮಾರುವವನು = ಪುಸ್ತಕಮಾರುವವನು.

[b] ಎಲ್ಲಾ + ಋಷಿ = ಎಲ್ಲಾ ರುಷಿ; ವ್ಯಂಜನಾದೇಶ ಸಂಧಿ.
ಮಹಾ + ಋಷಿ = ಮಹರ್ಷಿ; ಗುಣಸಂಧಿ.
ಭವತ್ + ಚರಣ = ಭವಚ್ಚರಣ; ಶ್ಚುತ್ವಸಂಧಿ.
ಅಸ್ಮತ್ + ಶರಣ = ಅಸ್ಮಚ್ಛರಣ ; ಛತ್ವಸಂಧಿ.

II (a) ಲಿಂಗ ವಚನ ವಿಭಕ್ತಿಗಳಿಂದ ವ್ಯತ್ಯಾಸವನ್ನು ಹೊಂದದೆ ಏಕರೂಪವಾಗಿರುವ ಶಬ್ದವು ಅವ್ಯಯವೆನಿಸುವುದು.
ಈಗ-ಸಾಮಾನ್ಯಾವ್ಯಯ, ಈಗಿನ-ಸುಬಂತ ಪ್ರತಿರೂಪಕಾವ್ಯಯ ಉಂಟು-ಕ್ರಿಯಾರ್ಥಕಾವ್ಯಯ.

(b) (1) ಸಾ-ಸತ್ತನು, ನೋ-ನೊಂದನು.
(2) ಈದುವು- ಈನು, ಧಾತುವಿನ ಭೂತರೂಪ ಪ್ರಥಮ ಪುರುಷ ನಪುಂಸಕಲಿಂಗ ಬಹುವಚನ.
ಹೇಗೆಂದರೆ,- ಈನು ಎಂಬ ಧಾತುವಿಗೆ ದುವು, ಎಂಬ ದಕಾರಾದಿ ಪ್ರತ್ಯಯವು ಸೇರಿ ಆಗಿರುವ ರೂಪ.

III (a) ವಿಧ್ಯರ್ಥದಲ್ಲಿ, ಅಲಿ, ಎಂಬ ಪ್ರತ್ಯಯವು ಇಷ್ಟಾರ್ಥವನ್ನು ಕೇಳಿಕೊಳ್ಳುವುದರಲ್ಲಿಯೂ, ಆಜ್ಞೆ ಮಾಡುವುದರಲ್ಲಿಯೂ, ವಿಜ್ಞಾಪನೆಯಲ್ಲಿಯೂ, ಪ್ರಶ್ನೆಮೊದಲಾದ ಅರ್ಥಗಳಲ್ಲಿಯೂ ಪ್ರಯೋಗಿಸಲ್ಪಡುವುದು. ಉದಾ,—

ಇಷ್ಟಾರ್ಥಕ್ಕೆ—ದೇವರು ನಮ್ಮನ್ನು ರಕ್ಷಿಸಲಿ.
ಆಜ್ಞೆಗೆ—ನೀನು ಈ ಕೆಲಸವನ್ನು ಮಾಡು.
ವಿಜ್ಞಾಪನೆಗೆ—ದೊರೆಗಳು ಇದನ್ನು ಪಾಲಿಸಲಿ.

ಪ್ರಶ್ನೆಗೆ—ನಾಳೆ ನಾನು ಏನುಮಾಡಲಿ?

(b) ಇತಿಹಾಸದಲ್ಲಿ ಭೂತರೂಪಕ್ಕೆ ಪ್ರತಿಯಾಗಿ ಭವಿಷ್ಯದ್ರೂಪವು ಪ್ರಯೋಗಿಸಲ್ಪಡುವುದು. ಉದಾ,—

ಪೂರ್ವದಲ್ಲಿ ಆ ಮರದ ಬುಡದಲ್ಲಿ ಒಂದು ನರಿ ಇರುವುದು ಎಂದು ವಿಷ್ಣುಶರ್ಮನು ರಾಜಕುಮಾರನನ್ನು ಕುರಿತು ಹೇಳುವನು.

ಗೌರವಾರ್ಥದಲ್ಲಿಯೂ, ಹಾಸ್ಯದಲ್ಲಿಯೂ, ನಿಂದೆಯಲ್ಲಿಯೂ ಏಕವಚನಕ್ಕೆ ಪ್ರತಿಯಾಗಿ ಬಹುವಚನವು ಪ್ರಯೋಗಿಸಲ್ಪಡುವುದು. ಗೌರವಕ್ಕೆ—ಗುರುಗಳು ಬಂದರು.

ಹಾಸ್ಯಕ್ಕೆ-ಏನು ರಾಮರಾಯರೇ ! ನಿಮ್ಮ ವಿಷಯ ನನಗೆ ತಿಳಿಯದೇ?

ನಿಂದೆಗೆ—ತಮ್ಮಂಥವರಿಗೆ ಇದು ಗೊತ್ತಿಯಿಲ್ಲ.

(c) ಮುಳ್ಳುಮುಳ್ಳು ನೋಡಿನಡೆ, ಬಾಧಾವಿಷಯದಲ್ಲಿ ದ್ವಿರುಕ್ತಿ ಬಂದಿದೆ. ತುದಿತುದಿಯಲ್ಲಿಸಣ್ಣ-ಕ್ರಮವಾನುಲ್ಲೇಖನೆಯಲ್ಲಿ ದ್ವಿರುಕ್ತಿ ಬಂದಿದೆ

IV (a) ಹಣೆಗಣ್ಣ = ಹಣೆಯಲ್ಲಿ + ಕಣ್ಣು ಯಾರಿಗುಂಟೋ ಅವನು; ವ್ಯಧಿ. ಬ. ಸ. ಹಣೆಗಣ್ಣು = ಹಣೆ(ಯ) + ಕಣ್ಣು ಷ. ತ. ಸ.

(b) ಸುಶೀಲೆ-ಸುಶೀಲಾ ಎಂಬ ಆಕಾರಾಂತ ತತ್ಸಮ ಶಬ್ದದ ತದ್ಭವರೂಪ, ಕೇಳೆ-ಕೇಳು ಎಂಬ ಧಾತುವಿನ ನಿಷೇಧರೂಪ ಮಧ್ಯಮ ಪುರುಷ, ಏಕವಚನ.

(c) (1) ಪುಸ್ತಕ-ಹೊತ್ತಗೆ, ಅಗ್ಗಳ-ಅಗುಳ.

(2) ಸೇಲೆ- ಚೇಲ, ಸೊಬಗು-ಸೌಭಾಗ್ಯ.

(3) ಬ್ರಹ್ಮ-ಬೊಮ್ಮ, ಇ[illegible]ರಾವೆ. [illegible]

V (a) (1) ಅವನಿಗೆ ವಯಸ್ಸು ಹೇಗೆ ಹೆಚ್ಚುತ್ತದೆಯೋ ಹಾಗೆ ವಿವೇಕವೂ ಹೆಚ್ಚುತ್ತದೆ.

(2) ಅವನು-ತನ್ನ ಜಾಣತನದ ಕಾರ್ಯಗಳನ್ನು ಹೇಳುತ್ತಿರಲು ಎಲ್ಲರೂ ಕೇಳಿ ತಿಳಿದರು.

(3) ಕರ್ತರಿ ಪ್ರಯೋಗ-

ನಾನು ಕೇಳಿದ ಪ್ರಶ್ನೆಗೆ ಅವನು ಉತ್ತರಕೊಡಲಿಲ್ಲ.

ಕರ್ಮಣಿ ಪ್ರಯೋಗ;—

ನನ್ನಿಂದ ಕೇಳಲ್ಪಟ್ಟ ಪ್ರಶ್ನೆಗೆ ಅವನಿಂದ ಉತ್ತರಕೊಡಲ್ಪಡಲಿಲ್ಲ.

(b) ಸೃಷ್ಟೀದಿವಸ-ಷಷ್ಟೀದಿವಸ ಎಂದಿರಬೇಕು.

ತಾತರು—ಅಂದಿರು ಪ್ರತ್ಯಯ ಬರಬೇಕಾದುದರಿಂದ ತಾತಂದಿರು ಎಂದಿರಬೇಕು.

ಹಸುಳೆಯೊಬ್ಬನೇ-ನಿತ್ಯನಪುಂಸಕವಾದುದರಿಂದ ಹಸುಳೆ ಯೊಂದೇ ಎಂದಿರಬೇಕು.

ಇದ್ದನು- ಕರ್ತೃಪದವು ನಪುಂಸಕಲಿಂಗವಾದುದರಿಂದ ಕ್ರಿಯಾಪದವೂ ನಪುಂಸಕಲಿಂಗವಾಗಿ ಇತ್ತು ಎಂದಿರಬೇಕು.

ಇತರೇ - ಇದು ತಪ್ಪು, ಇತರ ಎಂದಿರಬೇಕು.

ಶುದ್ಧವಾಕ್ಯ:—

ಷಷ್ಟೀದಿವಸ ತಾತಂದಿರು ಬಂದಾಗ ಹಸುಳೆಯೊಂದೇ ಇತ್ತು. ಇತರ ಜನಗಳಿರಲಿಲ್ಲ.

1909.

I (೧) ಆ + ಆಕಳು, ಈ + ಊಟ, ವಿಧಿ + ಇಲ್ಲ, ಹತ್ತು + ಎಂಟು ಇವುಗಳನ್ನು ಸೇರಿಸಿ ಬರೆದು ಅಲ್ಲಲ್ಲಿಯ ಸಂಧಿಸೂತ್ರವನ್ನು ತಿಳಿಸುವುದು.

(೨) ಮಾತಾಳಿ, ಮೇವು, ಬೇಗಿತಿ, ಕರುಬ,—ಇವು ಎಂಥಪ್ರಾತಿಪದಿಕಗಳು? ಇವುಗಳಲ್ಲಿರುವ ಪ್ರತ್ಯಯಗಳ ಅರ್ಥವೇನು ?

(೩) ಕೆಳಗು, ಪಿತೃ, ಅಕ್ಕ—ಇವುಗಳ ಚತುರ್ಥೀ ವಿಭಕ್ತಿ ರೂಪಗಳಾವುವು ?

II (೧) ಪ್ರೇರ್ಯಕರ್ತೃ, ಸಮಾನಕರ್ತೃಕ,—ಎಂದರೇನು ? ಒಂದೊಂದು ಉದಾಹರಣ ವಾಕ್ಯವನ್ನು ಬರೆಯಿರಿ.

(೨) ಇರುವ ಮನೆಯೂ ಉಡುವ ಬಟ್ಟೆಯೂ ಶುಚಿಯಾಗಿರಬೇಕು. ಇಲ್ಲಿ ಗುರುತು ಮಾಡಿರುವ ಕೃದಂತಗಳು ಯಾವ ಕಾರಕಾರ್ಥಗಳನ್ನು ಹೇಳುವುವು ?

(೪) ಎಲ್ಲರಿಂದಲೂ ಕೊಂಡಾಡಲ್ಪಡುವ ದೇವರು ಜಗತ್ತನ್ನು ಕಾಪಾಡುತ್ತಾನೆ. —ಇಲ್ಲಿಯ ಕರ್ತರಿ ಕರ್ಮಣಿ ಪ್ರಯೋಗಗಳನ್ನು ವಿನಿಮಯಮಾಡಿ (ಬದಲಾಯಿಸಿ) ಬರೆವುದು.

III (೧) ಪರ್ಬಿದ ಕಳ್ತಲೆಯೊಳದಗೆ ಪೊರನೋಡುವುದು—ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಬೇಕು.

(೨) ಬಹುವ್ರೀಹಿಸಮಾಸ, ಸಂಪ್ರದಾನಕಾರಕ—ಇವುಗಳ ಲಕ್ಷಣವೇನು? ಉದಾಹರಿಸಿರಿ.

(೩) ಅಂಗೈ, [illegible]—ಇವು ಯಾವ ಸಮಾಸಗಳು? ಇವುಗಳ ವಿಗ್ರಹವಾಕ್ಯಗಳು ಹೇಗೆ?

IV (a) ಪಕ್ಷಿ, ಸೂಗ, ಸಸಿ, ಕಾರ್ಯ, ಬೆ[illegible], ಸಿಂಹ—ಇವುಗಳೊಳಗೆ ಇರುವ ತತ್ಸಮಗಳಿಗೆ ತದ್ಭವಗಳನ್ನೂ, ತದ್ಭವಗಳಿಗೆ ತತ್ಸಮಗಳನ್ನೂ ಬರೆವುದು.

(b) (೧) ಅರಸನೂ, ರಾಣಿಯೂ, ಕುದುರೆಗಳೂ, ಬಂದುವು.

(೨) ಬನದೊಳಗೆ ತಿರುಗಿ ತಿರುಗಿ ಬಳಲಿದನು. —ಈ ವಾಕ್ಯಗಳಲ್ಲಿ ವ್ಯಾಕರಣದ ವಿಶೇಷವೇನು?

(c) ಯಾವುದನ್ನು ಲೋಕವು ಹಳಿಯುವುದೋ ಅದನ್ನು ಆಚರಿಸಬಾರದು—ಇದರ ಅರ್ಥವು ಕೆಡದಂತೆ "ಬಾರದು" ಎಂಬಲ್ಲಿ "ಬೇಕು" ಎಂಬುದನ್ನು ಸೇರಿಸಿ ಒಂದೇವಾಕ್ಯವಾಗಿ ಮಾಡುವುದು.

(d) ಕಾಲಕ್ಕೆ ಸರಿಯಾಗಿ ವೃಷ್ಟಿಯಾದರೆ ದೇಶಕ್ಕೆ ಸುಭಿಕ್ಷವಾಗುವುದು—ಇದು ಎಂಥ ವಾಕ್ಯ?

ಉತ್ತರಗಳು

I (೧) ಆ + ಆಕಳು = ಆ ಆಕಳು, ಪ್ರಕೃತಿಭಾವ.

ಆ ಎಂಬ ಶಬ್ದಕ್ಕೆ ಅ ಆ ಇ ಈ ಎಂಬ ವರ್ಣಗಳು ಪರವಾದರೆ ಸಂಧಿಕಾರ್ಯವು ಬರುವದಿಲ್ಲ.

ಈ + ಊಟ = ಈಯೂಟ, ಯಕಾರಾಗಮಸಂಧಿ.

ಈ ಕಾರಕ್ಕೆ ಊ ಎಂಬ ಸ್ವರವು ಪರವಾಗಿ ಯಕಾರಾಗಮವು

ಬಂದಿರುವುದು. (ಈಮಾಟ) ಹೀಗೂ ಪ್ರಯೋಗವಿದೆ.

ವಿಧಿ + ಇಲ್ಲ = ವಿಧಿಯಿಲ್ಲ; ಯಕಾರಾಗಮ ಸಂಧಿ.

ಇ ಕಾರಕ್ಕೆ ಇ ಎಂಬ ಸ್ವರವು ಪರವಾಗಿ ಯಕಾರಾಗಮ ಬಂದಿರುವುದು.

ಹತ್ತು + ಎಂಟು = ಹತ್ತೆಂಟು; ಲೋಪಸಂಧಿ.

ಉ ಕಾರಕ್ಕೆ ಎ ಕಾರಪರವಾಗಿ ಪೂರ್ವಶಬ್ದದ ಕಡೆಯ ಸ್ವರವಾದ ಉ ಕ್ಕೆ ಲೋಪ ಬಂದಿರುವುದು.

(೨) ಮಾತಾಳಿ - ತದ್ಧಿತಾಂತ ಪ್ರಕೃತಿ.

ಆಳಿ-ಪ್ರತ್ಯಯ - ಬಹಳ ಮಾತಾಡುವವನು.

ಬೇಗಿ - ತದ್ಧಿತನಾಮ.

ಇತಿ-ಪ್ರತ್ಯಯ ಹೆಂಡತಿ ಎಂಬರ್ಥದಲ್ಲಿ.

ಕರುಬ- ಕೃಪಣನು.

ಅ-ಪ್ರತ್ಯಯ- ಹೊಟ್ಟೆಕಿಚ್ಚು ಪಡುವವನು.

(೩) ಕೆಳಕ್ಕೆ, ಪತಕ್ಕೆ (ಪಕ್ಕೆ) ಅಕ್ಕಸಿಗೆ.

II (೧) ಕೆಲಸವನ್ನು ಮಾಡುವವನಿಗೆ ಪ್ರೇರ್ಯಕರ್ತೃವೆಂದು ಹೆಸರು.

ಉದಾ-ಅರಸನು ಬಡಿಗಿಯಿಂದ ಪೆಟ್ಟಿಗೆಯನ್ನು ಮಾಡಿಸಿದನು.

(ಬಡಗಿ-ಪ್ರೇರ್ಯಕರ್ತೃ)

ಸಮಾನ ಕರ್ತೃ .... ಕ್ರಿಯೆಗಳಿಗೆ ಬಂದೇ ಕರ್ತೃವಿದ್ದರೆ ಆ ಕ್ರಿಯೆಗಳು ಸಮಾನ ಕರ್ತೃಗಳೆನಿಸುವುವು.

ಉದಾ; ನುಡಿದನು ಹೋದನು.

(ನುಡಿದು, ಹೋದನು-ಸಮಾನ ಕರ್ತೃಕಗಳು.)

(೨) ಇರುವಮನೆ-ಯಾವ ಮನೆಯಲ್ಲಿ ಇರುತ್ತೇವೋ ಆಮನೆ-ಅಧಿಕರಣಾರ್ಥವನ್ನು ಹೇಳುವುದು.

ಉಡುವಬಟ್ಟೆ-ಯಾವ ಬಟ್ಟೆಯನ್ನು ಉಡುತ್ತೇವೋ ಆಬಟ್ಟೆ-

ಕರ್ಮಾರ್ಥದಲ್ಲಿ ಬಂದಿದೆ.

(೪) ಎಲ್ಲರೂ ಕೊಂಡಾಡುವ ದೇವರಿಂದ ಜಗತ್ತು ಕಾಪಾಡಲ್ಪಡುತ್ತದೆ.

III (೧) ಪಟ್ಟಿದಕತ್ತಲೆಯಲ್ಲಿ ಹೇಗೆ ಹೊರಡುವದು.

(೨) (೧) ಎರಡು ಅಥವಾ ಅನೇಕ ಸುಬಂತ ಪದಗಳು ಸೇರಿ ಸಮಾಸವಾಗುವಾಗ ಅನ್ಯಪದಾರ್ಥವು ತೋರಿದರೆ ಆ ಸಮಾಸವು ಬಹುವ್ರೀಹಿ ಯೆನಿಸುವುದು.

ಉದಾ; ಹೂಗಣ್ಣು, ಸೊತ್ತುಗೈಯ್ಯ, ಪೀತಾಂಬರ.

(೨) ನಾವು ಕೊಡುವ ವಸ್ತುವು ಯಾರನ್ನು ಸೇರುತ್ತದೆಯೋ ಅವಕ್ಕೆ ಸಂಪ್ರದಾನಕಾರಕವೆಂದು ಹೆಸರು.

ಉದಾ; ಕೊಡುವನುತಿ.

(೩) ಕೈಯು + ಅಡಿ = ಅಂಗೈ - ಅವ್ಯಯೀಭಾವಸಮಾಸ.

ಕಡಿದು + ಇರುವೆ = ಕಟ್ಟಿರುವೆ - ಕರ್ಮಧಾರಯ.

ಬಳಗಿನ + ಬಾಗಿಲು = ಬಳಬಾಗಿಲು - ಷಷ್ಠೀ. ತ.

ಅಡಿಯು + ತಾವರೆಯಂತೆ = ಅಡಿದಾವರೆ - ಉ. ಉತ್ತರಪದ ಕರ್ಮಧಾರಯ ಸಮಾಸ.

IV (a) ತತ್ಸಮ ——— ತದ್ಭವ

ಅಕ್ಷ ——— ಅಚ್ಚು

ಯುಗ ——— ನೊಗ

(ಬಿ) ಸಸ್ಯ ——— ಸಸಿ

ಕಾರ್ಯ ——— ಕಜ್ಜ

ವಿನಾಯಕ ——— ಬೆನಕ

ಸಿಂಹ ——— ಸಿಂಗ

(b) (೧) ಅರಸನೂ ರಾಣಿಯೂ ಕುದುರೆಗಳೂ ಬಂದುವು. ಭಿನ್ನಲಿಂಗಗಳಾದ ಅನೇಕ ಕರ್ತೃಗಳಿದ್ದರೆ ಕೊನೆಯಲ್ಲಿರುವ ಕರ್ತೃವಿನ ಲಿಂಗವೇ ಕ್ರಿಯೆಗೂ ಬರುವುದು. ಎಂಬಸೂತ್ರದಂತೆ ಅರಸನೂ ಎಂಬುದು ಪುಲಿಂಗವಾಗಿಯೂ ರಾಣಿಯೂ ಎಂಬು

ಮ ಸ್ತ್ರೀಲಿಂಗವಾಗಿಯೂ ಇದ್ದಾಗ್ಗ್ಯೆ ಕೊನೆಯಲ್ಲಿ ಕುದುರೆಗಳೂ ಎಂಬುದು ನಪುಂಸಕಲಿಂಗವಾಗಿರುವುದರಿಂದ ಬಂದುವು ಎಂಬುದು ನಪುಂಸಕಲಿಂಗವಾಗಿ ಪ್ರಯೋಗಿಸಲ್ಪಟ್ಟಿದೆ.

(3) ತಿರುತಿರುಗಿ ಬಳಲಿದನು- ಕ್ರಿಯೆ ಅನೇಕಾವರ್ತಿ ನಡೆಯಿತು ಎಂಬರ್ಥದಲ್ಲಿ ದ್ವಿರುಕ್ತಿ ಬಂದಿದೆ.

ಅನೇಕಸಾರಿ ತಿರುಗಿದೆನೆಂದರ್ಥವು.

(c) ಯಾವುದನ್ನು ಲೋಕವು ಹಳಿಯದೋ ಅದನ್ನು ಆಚರಿಸಬೇಕು.

(d) ಸಾಮಾನ್ಯ ವಾಕ್ಯ.

1911

I (a) ಚದುರನಾಗಿಯೂ ವಿನಯಶಾಲಿಯಾಗಿಯೂ ಇರುವ ಮಗನು ಅವನ ಜನಕನಿಗೂ, ಜನನಿಗೂ, ಅತ್ತೆಗೂ, ಮಾವನಿಗೂ ಪ್ರತಿಯೊಂದು ಸಂದರ್ಭದಲ್ಲಿಯೂ ಮನಸ್ಸಿಗೆ ಹರ್ಷವನ್ನುಂಟು ಮಾಡುವನು— ಇಲ್ಲಿ ,ಮಗನು, ಎಂಬುದಕ್ಕೆ ಬದಲಾಗಿ ಅದಕ್ಕೆ ಸರಿಯಾದ ಬಹುವಚನರೂಪವನ್ನೂ, ಮತ್ತು "ಸಂದರ್ಭ" ಎಂಬ ಪದದ ಬಹುವಚನರೂಪವನ್ನೂ ಉಪಯೋಗಿಸಿ, ಅವಶ್ಯಕವಾದ ಇತರಬದಲಾವಣೆಗಳನ್ನುಮಾಡಿ, ವಾಕ್ಯವನ್ನುಬರೆಯಿರಿ.

(b) ಭವಬ್ಧಕ್ತರಪರಾರಾಧನೋನ್ಮುಖರಾದ ಅನೇಕದೇವತೆಗಳು ತಮ್ಮಡಿದಾವರೆಗೆ ವಂದನೆಮಾಡಿ ಸ್ತುತಿಸುವರು.-ಈ ವಾಕ್ಯದಲ್ಲಿರುವ ಸಂಧಿಪದಗಳನ್ನು ಬಿಡಿಸಿ ಬರೆದು ಸಂಧಿಗಳ ಹೆಸರುಗಳನ್ನು ಹೇಳಿ ಮತ್ತು ಕೆಳಗೆ ಗೆರೆಹಾಕಿರುವ ಸಮಾಸಪದಗಳಿಗೆ ವಿಗ್ರಹವಾಕ್ಯ ಬರೆದು ಸಮಾಸಗಳ ಹೆಸರುಗಳನ್ನು ತಿಳಿಸಿ.

(c) ದೇವಪೂಜಕರಾದ ಬ್ರಾಹ್ಮಣರು, ತಮ್ಮ ಶಕ್ತಿಗೆ ವಿಾರದೆ ದೇವರಿಗೆ ಪುಷ್ಪಗಳಿಂದ ಅರ್ಚನೆಯುಂಮಾಡಿ ಹಣ್ಣನ್ನೂ ಕಾಯಿಯನ್ನೂ ಸಮರ್ಪಿಸಿದರು.—

ಈ ವಾಕ್ಯದಲ್ಲಿ ಗೆರೆಹಾಕಿರುವ ಪದಗಳಿಗೆ ಬದಲಾಗಿ ಒಂದೊಂದೇಸಮಾಸ ಪದವನ್ನುಪಯೋಗಿಸಿ ಬರೆದು ಸಮಾಸಗಳ ಹೆಸರುಗಳನ್ನು ಹೇಳಿ.

II [a] ರಾಮ, ರಾಮನು, ಕುದುರೆ, ನಡೆ, ಆಟ, ಹೋಯಿತು.— ಇವುಗಳಲ್ಲಿ ಪ್ರಾತಿಪದಿಕ, ಧಾತು ಮತ್ತು ಪದಗಳಾವುವು. ಸಕಾರಣವಾಗಿ ತಿಳಿಸಿ.

[b] ಕಾರಕ ಕೃದಂತದ ನಾಲ್ಕು ರೂಪಗಳಾವುವು? ಅವುಗಳಿಗೆ ಉದಾಹರಣೆ ಕೊಡಿರಿ.

[c] ವಾಚ್ಯಲಿಂಗವೆಂದರೇನು? ಎಂತಹಶಬ್ದಗಳುವಾಚ್ಯಲಿಂಗಗಳು?

[d] ಬ್ರಹ್ಮನೂ, ಸ್ವರ್ಗಾಧಿಪತಿಯೂ, ಯಮರಾಜನೂ, ನೃಸಿಹ್ಮನ ಕೋಪನಿವಾರಣೆ ಮಾಡಬೇಕೆಂದು ಭಕ್ತಿಯಿಂದ ಲಕ್ಷ್ಮಿಗೆ ವಿಜ್ಞಾಪನೆಯಂ ಮಾಡಿದರು.

[ಈ ವಾಕ್ಯದಲ್ಲಿರುವ ಸಂಸ್ಕೃತ ಪದಗಳಿಗೆ ಬದಲಾಗಿ ಸರಿಯಾದ ತದ್ಭವ ಶಬ್ದಗಳಿದ್ದರೆ ಅವುಗಳನ್ನಾಗಲಿ, ಹಾಗೆ ಇಲ್ಲದಿದ್ದರೆ ದೇಶ್ಯಪದವನ್ನಾಗಲಿ, ಉಪಯೋಗಿಸಿ ವಾಕ್ಯಬರೆಯಿರಿ.]

III ಕೆಳಗೆ ಬರೆದಿರುವ ಪ್ರತಿಯೊಂದು ವಾಕ್ಯವನ್ನೂ, ಅರ್ಥಕೆಡದೆ ಇರಲು ಅವಶ್ಯಕವಾದ ಇತರ ಬದಲಾವಣೆಯಿಂದ ಅಲ್ಲಿ ಹೇಳಿರುವ ಪ್ರಕಾರ ಬದಲಾಯಿಸಿ ಬರೆಯಿರಿ:—

[a] ವಿಶೇಷವಾದ ನದೀಪ್ರವಾಹದಿಂದ ಪೈರುಗಳು ಕೊಚ್ಚಿ ಹೋದುವು— [ಇಲ್ಲಿ "ಪ್ರವಾಹ" ಎಂಬುದರ ಕ್ರಿಯಾ[illegible]ವನ್ನುಪಯೋಗಿಸಿ ಹೇತ್ವರ್ಥಕ [illegible] ವಾಕ್ಯಮಾಡಿ.]

[b] ಪ್ರಪಂಚದಲ್ಲಿ ಪ್ರಾಯಿಕವಾಗಿ ಎಲ್ಲರೂ ಸ್ವಾರ್ಥಪರರೇ.— [ಇಲ್ಲಿ "ಇಲ್ಲ" ಎಂಬುದನ್ನುಪಯೋಗಿಸಿ.]

[c] ತಟವಟವನ್ನಾಚರಿಸುವವನೊಡನು, ಬಡುಪಾತಾಪುವವನೊಡನೂ, ಅವನನ್ನು ಎಲ್ಲರೂ ಎಂದುಕೊಳ್ಳುತ್ತಾರೆ.—[ಇಲ್ಲಿ ಗೆರೆ ಹಾಕಿರುವ ಪದಗಳಿಗೆ ಬದಲಾಗಿ ಒಂದೊಂದೇ ತದ್ಧಿತನಾಮವನ್ನುಪಯೋಗಿಸಿ ಕರ್ಮಣಿಪ್ರಯೋಗದಲ್ಲಿ ಬರೆಯಿರಿ.]

IV ಕೆಳಗೆ ಬರೆದಿರುವ ವಾಕ್ಯಗಳನ್ನು ತಪ್ಪಿಲ್ಲದಂತೆ ತಿದ್ದಿ ಬರೆಯಿರಿ. ಮತ್ತು ವ್ಯಾಕರಣ ವಿರುದ್ಧವಾದ ಸಂಗತಿ, ಅಥವಾ, ಅಸಂಗತವಾದ ಮಾತು ಇದ್ದರೆ ಅವುಗಳನ್ನೂ ತಿಳಿಸಿರಿ:—

(1) ಅವನಿಗೆ ಉಶ್ವಾಸವೇ ತೋರೋಹಾಗಿಲ್ಲ.

(2) ಈ ಗಿಡವು ಅವನಿಂದಲೇವೇ ಕಿತ್ತಲ್ಪಟ್ಟಿತು.

(3) ಯಿನ್ನಾದಿನ್ನ ಶೇವಕನ ಮನೆಯಲ್ಲಿ ಬಳೆಯುವ ಮಹೂರ್ತ್ನವಕ್ಕೆ ವಿನಿಸ್ಟರೂ ವಯಮಾಡಿ ಕೃತಾರ್ಥರಾಗಬೇಕು.

ಉತ್ತರಗಳು.

I. (a) ಚತುರರಾಗಿಯೂ, ವಿನಯಶಾಲಿಗಳಾಗಿಯೂ, ಇರುವ ಮಕ್ಕಳು ಅವರ ಜನಕರಿಗೂ, ಜನನಿಯರಿಗೂ, ಅತ್ತೆಯರಿಗೂ ಮಾವಂದರಿಗೂ ಎಲ್ಲಾ ಸಂದರ್ಭಗಳಲ್ಲಿಯೂ ಮನಸ್ಸಿಗೆ ಹರ್ಷವನ್ನುಂಟುಮಾಡುವರು.

(b) ಭವಚ್ಚರಣ= ಭವತ್ + ಚರಣ= ಶ್ಚುತ್ವಸಂಧಿ.

ಭವಚ್ಚರಣಾರಾಧನ= ಭವಚ್ಚರಣ + ಆರಾಧನ= ಸವರ್ಣದೀರ್ಘಸಂಧಿ

ಆರಾಧನೋನ್ಮುಖರು= ಆರಾಧನ + ಉನ್ಮುಖರು-ಗುಣಸಂಧಿ.

ತಮ್ಮಡಿದಾವರೆ= ತಮ್ಮ + ಅಡಿದಾವರೆ-ಅಕಾರಲೋಪಸಂಧಿ.

ಅಡಿದಾವರೆ= ಅಡಿ + ತಾವರೆ= ಆದೇಶಸಂಧಿ.

ಅಡಿದಾವರೆ= ಅಡಿಯು + ತಾವರೆಯಂತೆ= ಉ. ಉತ್ತರಪದ ಕರ್ಮಧಾರಯ ಸಮಾಸ.

ವಂದನೆಮಾಡಿ= ವಂದನೆಯನ್ನು + ಮಾಡಿ= ಕ್ರಿಯಾಸಮಾಸ.

(c) ದೇವಬ್ರಾಹ್ಮಣರು, ತಮ್ಮ ಶಕ್ತಿಮೀರಿ ದೇವರಿಗೆ ಪುಷ್ಪಾರ್ಚನೆಯಂಮಾಡಿ ಹಣ್ಣುಕಾಯನ್ನು ಸಮರ್ಪಿಸಿದರು.

ದೇವಪ್ರೂಜಕರಾದ ಬ್ರಾಹ್ಮಣರು- ಲುಪ್ತಮಧ್ಯಮಪದ ಕ ಸ॥

ಶಕ್ತಿಮೀರದೆ—ಚ. ತತ್ಪುರುಷ ಸಮಾಸ.

ಪುಷ್ಪಾರ್ಚನೆಯಂ—ತೃತೀಯಾ ತತ್ಪುರುಷ ಸಮಾಸ.

ಹಣ್ಣುಕಾಯನ್ನು—ದ್ವಂದ್ವ ಸಮಾಸ.

II (a) ರಾಮ-ಪ್ರಾತಿಪದಿಕ (ನಾಮವಿಭಕ್ತಿಪ್ರತ್ಯಯವನ್ನು ಹೊಂದಿಲ್ಲ)
ರಾಮನು—ಪದ (ವಿಭಕ್ತಿ ಪ್ರತ್ಯಯವನ್ನು ಹೊಂದಿದೆ.)
ಕುದುರೆ—ಪ್ರಾತಿಪದಿಕ (ವಿಭಕ್ತಿಪ್ರತ್ಯಯವಿಲ್ಲ)
ನಡೆ—ಧಾತು (ಆಖ್ಯಾತವಿಭಕ್ತಿ ಪ್ರತ್ಯಯವನ್ನು ಹೊಂದಿಲ್ಲ)
ಆಟ—ಧಾತು (,, ,,)
ಹೋಯಿತು-ಪದ (ಆಖ್ಯಾತವಿಭಕ್ತಿಪ್ರತ್ಯಯವನ್ನು ಹೊಂದಿದೆ)
(b) ಕಾರಕಕೃದಂತದ ನಾಲ್ಕು ರೂಪಗಳು:—
ಭೂತರೂಪ - ಉದಾ - ಮಾಡಿದ, ಕರೆದ
ವರ್ತಮಾನರೂಪ- ಉದಾ- ಮಾಡುವ, ಕರೆವ
ಭವಿಷ್ಯದ್ರೂಪಕ್ಕೆ- ಉದಾ- ಮಾಡುವ, ಕರೆವ
ನಿಷೇಧರೂಪಕ್ಕೆ- ಉದಾ- ಮಾಡದ, ಕರೆಯದ
(c) ವಿಶೇಷ್ಯವು ಯಾವಲಿಂಗವೋ ಆ ಲಿಂಗವುಳ್ಳುದು ವಾಚ್ಯ ಲಿಂಗವೆನಿಸುವುದು.
ನೀನು, ನಾನು, ತಾನು, ಎಂಬ ಶಬ್ದಗಳು ವಾಚ್ಯಲಿಂಗಗಳು.
(d) ಬೊಮ್ಮನೂ, ಸಗ್ಗಾಧಿಪತಿಯೂ, ಜವರಾಜನೂ, ನರಸಿಂಗನ ಕೋಪನಿವಾರಣೆ ಮಾಡಬೇಕೆಂದು ಬಕುತಿಯಿಂದ ಲಕುಮಿಗೆ ಬಿನ್ನಣವಂ ಮಾಡಿದರು.

1II (a) ವಿಶೇಷವಾಗಿ ನದೀಪ್ರವಹಿಸಿತು. ಆದುದರಿಂದ ಸೇತುವೆಗಳು ಕೊಚ್ಚಿಹೋದುವು.
(b) ಪ್ರಪಂಚದಲ್ಲಿ ಪ್ರಾಯಿಕವಾಗಿ ಸ್ವಾರ್ಥಪರರಲ್ಲದವರೇ ಇಲ್ಲ
(c) ಅವನು ತಟವಟಿಗನೆಂದೂ, ಮಾ[illegible]ವೂ ಎಲ್ಲರಿಂದಲೂ ಎನ್ನಿಸಿಕೊಳ್ಳಲ್ಪಟ್ಟಿರುತ್ತಾನೆ.

VI (೧) ಅವನಿಗೆ ಉಛ್ವಾಸವೇ ಆಡುವಹಾಗಿಲ್ಲ,
(೨) ಈ ಗಿಡವು ಅವನಿಂದಲೇ ಕೀಳಲ್ಪಟ್ಟಿತು.
(೩) ಈ ದಿವಸ ಸೇವಕನಮನೆಯಲ್ಲಿ ನಡೆಯುವ ಮಹೋತ್ಸವಕ್ಕೆ ವಿಶಿಷ್ಟರೂ ದಯಮಾಡಿ ಕೃತಾರ್ಥನನ್ನಾಗಿ ಮಾಡಬೇಕು.

1912

I (a) ಪ್ರಕೃತಿಭಾವವೆಂದರೇನು? ಇದು ಯಾವ ಯಾವ ಸಂದರ್ಭದಲ್ಲಿ ಬರುತ್ತದೆ? ಉದಾಹರಿಸಿರಿ.

(b) ಹರಿ + ಅಷ್ಟಕ, ಅ + ಮಯು, ಆವ್ + ಉಡಿಗೆ, ಈ + ಒಕ್ಕಲು, ಇವುಗಳನ್ನು ಸಂಧಿಮಾಡಿ ಬರೆದು ಸಂಧಿಯ ಹೆಸರನ್ನು ಹೇಳಿರಿ.

(c) ರೂಢನಾಮ, ಅನ್ವರ್ಥನಾಮ, ಇವಕ್ಕೆ ಭೇದವೇನು? ಉದಾಹರಣವನ್ನು ಕೊಡಿರಿ.

II (a) ಧಾತುವೆಂದರೇನು? ಮಿಂದನು, ಕೊಂದನು, ಸತ್ತನು, ತೆತ್ತನು, ಇವು ಯಾವ ಧಾತುಗಳಿಂದ ಬಂದಿವೆ?

(b) ಧಾತು ಸ್ವರೂಪದಲ್ಲಿಯೇ ಇರುವ ಭಾವಕೃದಂತಗಳಿಗೆ ನಾಲ್ಕು ಉದಾಹರಣಗಳನ್ನು ಕೊಡಿರಿ.

(c) ಅಲು, [illegible]ಇಕ್ಕೆ. ಈ ಪ್ರತ್ಯಯಗಳು ಯಾವ ಅರ್ಥಗಳಲ್ಲಿ ಬರುತ್ತವೆ? ಉದಾಹರಿಸಿರಿ.

III (a) ಹಣಾಹಣಿ, ಅಂಗೈ, ಆಮನೆ, ಅನ್ನಬಟ್ಟೆ. ಇವಕ್ಕೆ ವಿಗ್ರಹವನ್ನು ಬರೆದು ಸಮಾಸದ ಹೆಸರನ್ನು ಹೇಳಿರಿ.

(b) ದವಸಿಗ, ಕನ್ನಡಿಗ, ಬೇಟೆಗಾರ, ಬಳೆಗಾರ, ಇಲ್ಲಿಯ ಪ್ರತ್ಯಯಗಳಿಗೆ ಅರ್ಥವೇನು?

(c) ಹೆಸ[illegible], ಹೊತ್ತಗೆ, ಕಾಷ್ಟ, ಬೇಸಿಗೆ, ವಿಜ್ಞಾಪನೆ, ಸಂದು, ಪಾ[illegible], ಇಲ್ಲಿಯ ತದ್ಭವಗಳಿಗೆ ತತ್ಸಮಗಳನ್ನೂ ತತ್ಸಮಗಳಿಗೆ ತದ್ಭವಗಳನ್ನೂ ಬರೆಯಿರಿ.

(d) ಏಕವಚನಕ್ಕೆ ಬದಲಾಗಿ ಬಹುವಚನವು ಯಾವಯಾವ ಸಂದರ್ಭಗಳಲ್ಲಿ ಬರುವುದು? ಉದಾಹರಿಸಿರಿ.

IV (a) ಕೆಲಸವನ್ನು ಮಾಡಿಕೊಟ್ಟನು; ಮೃಗವನ್ನು ಕೊಂದು ಬಿಟ್ಟನು. ಇಲ್ಲಿ ಕೊಡು, ಬಿಡು ಎಂಬ ಧಾತುಗಳು ಸೇರಿ ಯಾವ ವಿಶೇಷಾರ್ಥವನ್ನು ಕೊಡುತ್ತವೆ?

(b) ವಾಕ್ಯವೆಂದರೇನು? ಮಿಶ್ರವಾಕ್ಯ, ಸಂಯೋಜಿತವಾಕ್ಯ ಇ

ವಕ್ಕಿರುವ ಭೇದವೇನು ? ಉದಾಹರಿಸಿರಿ.

(c) ಜನರು ಮೆಚ್ಚುವಂತೆ ನಾವು ನಡೆದುಕೊಳ್ಳಬೇಕು.

ಈ ವಾಕ್ಯವನ್ನು ಅರ್ಥಕೆಡದಂತೆ (೧) ನಡೆವಳಿ, ಮೆಚ್ಚಿಕೆ (೨) ಬಾರದು (೩) ಹೇಗೆ, ಹಾಗೆ ಎಂಬ ಪದಗಳನ್ನು ಉಪಯೋಗಿಸಿ ಉಚಿತವಾದ ಮಾರ್ಪಾಡುಗಳನ್ನು ಮಾಡಿ ಮೂರು ಪ್ರತ್ಯೇಕ ವಾಕ್ಯಗಳಾಗಿ ಬರೆಯಿರಿ.

ಉತ್ತರಗಳು—

I (a) ಸಂಧಿಕಾರ್ಯಗಳಾದ ಲೋಪ, ಆಗಮ, ಆದೇಶಗಳು ಬಾರದೇ ಇರುವುದು ಪ್ರಕೃತಿಭಾವವೆನಿಸುವುದು.

ಪ್ರಕೃತಿಭಾವ ಉಂಟಾಗುವ ಸ್ಥಳಗಳು—

ಪ್ಲುತಕ್ಕೆ ಸ್ವರಪರವಾದರೆ ಪ್ರಕೃತಿಭಾವವುಂಟಾಗುವುದು.

ಉದಾ:—ಅಮ್ಮಾ ೨ ಇಲ್ಲಿಬಾ ;

ಅದು ಎಂಬ ಸರ್ವನಾಮವು ಸಮಾಸನವಾಗುವಾಗ ಆ ಎಂದಾಗುವದು. ಆ ರೀತಿಯಾಗಿ ಆದ ಆ ಎಂಬ ಶಬ್ದಕ್ಕೆ ಅ ಆ ಐ ಔ ಎಂಬ ವರ್ಣಗಳು ಪರವಾದರೆ ಪ್ರಕೃತಿಭಾವ ವುಂಟಾಗುವುದು.

ಉದಾ—ಆ ಅರಸು, ಆ ಔದಾರ್ಯ.

ನಿಪಾತ ವಿಶಂಕೆ ಅವಧಾರಣೆಗಳಿಗೆ ಸ್ವರವು ಪರವಾದರೆ ಪ್ರಕೃತಿಭಾವವುಂಟಾಗುವುದು.

ಉದಾ:— ನಿಪಾತಕ್ಕೆ—ಓಹೋ ಇದೇನು ?

ಅವಧಾರಣೆಗೆ—ಅವನೇ ಇವನು

ವಿಶಂಕೆಗೆ—ಅವನೋ ? ಇವನೋ ?

ರೂಢಿಕೆಡುವ ಪಕ್ಷದಲ್ಲಿಯೂ, ಮೆಚ್ಚಿಕೆಯಲ್ಲಿಯೂ, ಆಕ್ಷೇಪಣೆಯಲ್ಲಿಯೂ, ದುಃಖದಲ್ಲಿಯೂ ಪ್ರಕೃತಿಭಾವವುಂಟಾಗುವುದು.

ಉದಾ:— ರೂಢಿಕೆಡುವಿಕೆಗೆ- ಮನೆ ಇತ್ತು.

ಮೆಚ್ಚಿಕೆಗೆ- ಭಲಾ ಅವನೇ ಧೀರ.

ಆಕ್ಷೇಪಣೆಗೆ- ಇದೇನೋ ಓದುವಿಕೆ.

ದುಃಖಕ್ಕೆ—ಅಯ್ಯೋ ಇಷ್ಟೇನು.

(b) ಹಬ್ಬೆಪ್ಪತ್ತ — ಯಣ್ಸಂಧಿ.

ಅವ್ಮಯು — ಅನುನಾಸಿಕ ಸಂಧಿ.

ಆ ವುಡಿಗೆ — ವಕಾರಾಗಮ ಸಂಧಿ.

ಈ ಯೊಕ್ಕಲು—ಯಕಾರಾಗಮ ಸಂಧಿ.

(c) ವಸ್ತುವಾಚಕಗಳಲ್ಲಿ ವಸ್ತುವಿನ ರೂಢವಾದ ಹೆಸರನ್ನು ತಿಳಿಸುವುದಕ್ಕೆ ರೂಢನಾಮವೆಂದೂ ಅರ್ಥಕ್ಕೆ ಅನುಸಾರವಾದ ಹೆಸರನ್ನು ತಿಳಿಸುವುದಕ್ಕೆ ಅನ್ವರ್ಥನಾಮವೆಂದೂ ಹೆಸರು.

ರೂಢನಾಮಕ್ಕೆ.	ಅನ್ವರ್ಥನಾಮಕ್ಕೆ.
ಅರಸು	ಕುಂಟ
ನೆಲ	ಕುರುಡ
ಮನುಷ್ಯ	ಕಿವುಡ
ಧನ	ಹೇಳವ

II (a) ಕ್ರಿಯಾರ್ಥವನ್ನು ಕೊಡುವುದಾಗಿಯೂ ಆಖ್ಯಾತ ವಿಭಕ್ತಿ ಪ್ರತ್ಯಯವನ್ನು ಹೊಂದುವದಾಗಿಯೂ ಇರುವ ಶಬ್ದರೂಪಕ್ಕೆ ಧಾತು ಎಂದು ಹೆಸರು.

ಮಿಂದನು—ಮಿಂಧಾತುವಿನಿಂದ

ಕೊಂದನು—ಕೊಲ್ಲು ,,

ಸತ್ತನು—ಸಾ ,,

ತೆತ್ತನು—ತೆರು ,,

(b) ಹುಟ್ಟು, ನಡೆ, ಅಳುಕು, ಓದು.

(c) ಎರಡು ಕ್ರಿಯೆಗಳಿಗೂ ಸಮಾನಕಾಲವು ತೋರುವಾಗ ಸಮಾನ ಕಾಲಿಕ ಕೃದಂತದೊಡನೆ ಕೂಡಿದ ಇರು ಧಾತುವಿನಮೇಲೆ ಅಲು ಪ್ರತ್ಯಯವು ಬರುವುದು.

ಉದಾ:—ಅವನು ಬರುತ್ತಿರಲು ನಾನು ಕಂಡೆನು.

ಸೂರ್ಯನು ಉದಯಿಸುತ್ತಿರಲು ತಾವರೆಗಳು ಅರಳಿದುವು.

ಒಂದು ಕ್ರಿಯೆ ಮತ್ತೊಂದು ಕ್ರಿಯೆಗೆ ಪ್ರಯೋಜನವಾಗಿದ್ದರೆ ಪ್ರಯೋಜನವಾದ ಕ್ರಿಯೆಯನ್ನು ಹೇಳುವ ಧಾತುವಿನ ಮೇಲೆ ಅಲಿಕ್ಕೆ ಪ್ರತ್ಯಯವು ಬರುವುದು.

ಉದಾ:—ಓದಲಿಕ್ಕೆ ಬಂದನು.
ತರಲಿಕ್ಕೆ ಹೋದನು.

III (a) ಹಣೆಯಿಂದ ಹಣೆಯಿಂದ ಒಬ್ಬರನ್ನೊಬ್ಬರು ತಾಡಿಸುವುದು ಯಾವ ಜಗಳದಲ್ಲೋ ಅದು-ಹಣಾಹಣಿ, ವ್ಯತಿಹಾರಬಹು ವ್ರೀಹಿ ಸಮಾಸ.

ಕೈಯ್ಯ + ಅಡಿ = ಅಂಗೈ, ಅವ್ಯಯೀಭಾವ.

ಅದು + ಮನೆ = ಆಮನೆ, ಗಮಕ ಸಮಾಸ.

ಅನ್ನವೂ + ಬಟ್ಟೆಯೂ = ಅನ್ನಬಟ್ಟೆ, ಸಮಾಹಾರದ್ವಂದ್ವ.

(b) ದವಸಿಗ-ಇಗ-ಮಾರುವವನು.
ಕನ್ನಡಿಗ-ಇಗ-ಅರಿತವನು.
ಬೇಟೆಗಾರ-ಗಾರ-ಆಡುವವನು.
ಬಳೆಗಾರ-ಗಾರ-ಮಾರುವವನು.

(c)

ತದ್ಭವ	ತತ್ಸಮ
ಬೆನಕ	ವಿನಾಯಕ
ಹೊತ್ತಿಗೆ	ಪುಸ್ತಕ
ಬೇಸಿಗೆ	ವೈಶಾಖ
ಸಂಮು	ಸಂಧಿ
ತತ್ಸಮ	ತದ್ಭವ
ಆಜ್ಞೆ	ಆಣೆ
ಕಾಷ್ಠ	ಕಡ್ಡಿ
ವಿಜ್ಞಾಪನ	ಬಿನ್ನಹ
ಪಾಟಲಿ	ಪಾದರಿ

(d) ಗೌರವಾರ್ಥದಲ್ಲಿಯೂ, ಹಾಸ್ಯದಲ್ಲಿಯೂ, ನಿಂದೆಯಲ್ಲಿಯೂ

ಏಕವಚನಕ್ಕೆ ಪ್ರತಿಯಾಗಿ ಬಹುವಚನವು ಪ್ರಯೋಗಿಸಲ್ಪಡುವುದು.

ಗೌರವಕ್ಕೆ—ಸ್ವಾಮಿಗಳು ದಯಮಾಡಿಸಿದರು.

ಹಾಸ್ಯಕ್ಕೆ—ಏನು ಸೆಟ್ಟರೇ, ನೀವೂ ತಿರುಪಕ್ಕೆ ಬಂದಿರಾ?

ನಿಂದೆಗೆ—ತಾವುದೊಡ್ಡವರು, ನನ್ನ ಸಹವಾಸವು ತಮಗೆಬೇಡ.

IV (a) ಕೆಲಸನ್ನು ಮಾಡಿಕೊಟ್ಟನು.

ಕೊಡು,ಧಾತು ಮಾಡುಎಂಬಭೂತಕಾಲದ ಅವ್ಯಯಕೃತ್ತಿನಮೇಲೆಸೇರಿ ಕ್ರಿಯೆಪರಾರ್ಥವಾಗಿ ನಡೆಯಿತೆಂಬರ್ಥವನ್ನುಕೊಡುತ್ತದೆ.

ಮೃಗವನ್ನು ಕೊಂದು ಬಿಟ್ಟನು.

ಬಿಡು.ಧಾತು ಕೊಲ್ಲು ಎಂಬಭೂತಕಾಲದ ಅವ್ಯಯ ಕೃತ್ತಿನಮೇಲೆಸೇರಿಕ್ರಿಯೆಸಂಪೂರ್ಣವಾಗಿನಡೆಯಿತೆಂಬರ್ಥವನ್ನುಕೊಡುತ್ತದೆ

(b) ಸಂಪೂರ್ಣಾರ್ಥವನ್ನು ಕೊಡುವ ಪದಗಳ ಸಮೂಹವೇ ವಾಕ್ಯವೆನಿಸುವುದು.

ಮಿಶ್ರವಾಕ್ಯಕ್ಕೂ ಸಂಯೋಜಿತವಾಕ್ಯಕ್ಕೂ ಇರುವ ಭೇದ:- ವಾಕ್ಯಗಳನ್ನೇ ಅಂಗವಾಗಿ ಹೊಂದಿರುವ ವಾಕ್ಯವು ಮಿಶ್ರವಾಕ್ಯವೆನಿಸುವುದು. ಉದಾಹರಣೆ:—

ದೇವರು ಇದ್ದಾನೆ ಎಂಬುವದನ್ನು ಎಲ್ಲರೂ ನಂಬುತ್ತಾರೆ.

ಎರಡು ಅಥವಾ ಅನೇಕವಾದ ಸ್ವತಂತ್ರವಾಕ್ಯಗಳು 'ಮತ್ತು' ಮೊದಲಾದ ಅವ್ಯಯಗಳಿಂದ ಸೇರಿಸಲ್ಪಟ್ಟಿದ್ದರೆ ಆ ಸಮುದಾಯವು ಸಂಯೋಜಿತವಾಕ್ಯವೆನಿಸುವುದು. ಉದಾಹರಣೆ:— ಶಿಷ್ಟರನ್ನು ಅರಸರು ಸನ್ಮಾನಿಸುತ್ತಾರೆ; ಮತ್ತು ಪ್ರಜೆಗಳು ಹೊಗಳುತ್ತಾರೆ.

(c) (೧) ನಮ್ಮ ನಡವಳಿಯು ಜನರಮೆಚ್ಚಿಕೆಗೆ ತಕ್ಕಂತಿರಬೇಕು.

(೨) ಜನರು ಮೆಚ್ಚದಂತೆ ನಾವು ನಡೆದುಕೊಳ್ಳಬಾರದು.

(೩) ಜನರುಮೆಚ್ಚುವುದಕ್ಕೆ ಹೇಗೆನಡೆದುಕೊಳ್ಳಬೇಕೋ ಹಾಗೆ ನಾವು ನಡೆದುಕೊಳ್ಳಬೇಕು.

1913.

I (a) (೧) ಯೋಗವಾಹ, (೨) ಪ್ರಾತಿಪದಿಕ, (೩) ಸಾಪೇಕ್ಷ್ಯ ವಾಚಕ, (೪) ವಾಚ್ಯಲಿಂಗ.
ಇವುಗಳ ಅರ್ಥವನ್ನು ವಿವರಿಸಿ ಉದಾಹರಣೆಗಳನ್ನು ಕೊಡಿರಿ.

(b) (೧) ಮಾವಿನಹಣ್ಣು, (೨) ಹಣ್ಗಣ್ಣು, (೩) ಬರುವ ಜನರು, (೪) ಕಡುರಾಗ. ಇವು ಯಾವ ಸಮಾಸಗಳು?

[c] ವಿಭಕ್ತಿ ಪಲ್ಲಟವೆಂದರೇನು? ಎರಡು ಉದಾಹರಣೆಗಳನ್ನು ಕೊಡಿರಿ.

[d] ತೃತೀಯಾ ವಿಭಕ್ತಿ ಯಾವ ಯಾವ ಅರ್ಥದಲ್ಲಿ ಬರುತ್ತದೆ, ಉದಾಹರಿಸಿರಿ.

II [a] ಆಡು, ಅಡು; ಹೋಗು, ಹೊಗು; ತೀರು, ತೆರು; ಇವಕ್ಕೆ ಭೂತರೂಪದಲ್ಲಿ ಉತ್ತಮ ಪುರುಷೈಕ ವಚನವನ್ನು ಬರೆಯಿರಿ.

[b] ಇಸು ಪ್ರತ್ಯಯದ ಉಪಯೋಗವನ್ನು ಉದಾಹರಣೆಗಳ ಮೂಲಕವಾಗಿ ವಿವರಿಸಿರಿ.

[c] ಗಾಣಿಗ, ಹಣವಂತ, ಮುದುಕ, ಬ್ರಾಹ್ಮಣ ಇವಕ್ಕೆ ಸ್ತ್ರೀ ಲಿಂಗ ರೂಪಗಳನ್ನು ಬರೆಯಿರಿ.

[d] ೧. ನೋಡಿ ನೋಡಿನಕ್ಕನು. ೨. ಮಲ್ಲಿಗೆ ಮೊದಲು ಮೇಲು ಹೂವಾಯಿತು ಇಲ್ಲಿ ದ್ವಿರುಕ್ತಿ ಯಾವ ಅರ್ಥದಲ್ಲಿ ಬಂದಿದೆ?

III [a] ಹಾವನ್ನು ಆಡಿಸುವವನು, ಬಹಳ ಮಾತನಾಡುವವನು, ಮಡಿಯನ್ನು ಮಾಡುವವನು, ಓಲೆಯನ್ನು ತರುವವನು, ಈ ಅರ್ಥವನ್ನು ಕೊಡುವ ತದ್ಧಿತಾಂತ ಪದಗಳನ್ನು ಬರೆಯಿರಿ.

[b] ಬಸದಿ, ಜಾನ, ಕಾರ, ಸೊಸೆ ಇವುಗಳ ತತ್ಸಮ ರೂಪವನ್ನೂ, ಬರ್ಬೂರ, ಪ್ರಗ್ರಹ, ಲೇಪ್ಯ, ಕಾಂಸ್ಯ ಇವುಗಳ ತದ್ಭವ ರೂಪವನ್ನೂ, ಬೇಕು, ಅಂಥ, ಹೀಗೆ, ಕಿವುಚು. ಇವುಗಳ ಹಳಗನ್ನಡ ರೂಪವನ್ನೂ ಬರೆಯಿರಿ.

(c) ಕ್ರಿಯಾರೂಪಗಳಲ್ಲಿ ಒಂದಕ್ಕೆ ಪ್ರತಿಯಾಗಿ ಮತ್ತೊಂದು ಬರುವುದಕ್ಕೆ ಎರಡು ಉದಾಹರಣೆಗಳನ್ನು ಕೊಡಿರಿ.

VI (a) ಸಂಯೋಜಿತ ವಾಕ್ಯದಭೇದಗಳನ್ನು ವಿವರಿಸಿ ಉದಾಹರಿಸಿರಿ.

(b) ಕೆಳಗಣ ವಾಕ್ಯಗಳನ್ನು ಅಲ್ಲಲ್ಲಿ ತಿಳಿಸಿರುವ ಮಾರ್ಪಾಡುಗಳನ್ನು ಮಾಡಿ ಪುನಃ ಬರೆಯಿರಿ.

1. ಅವನ ಮಾತಿನಿಂದ ಜಗಳವು ಹುಟ್ಟಿತು. ‹ಮಾತು› ಎಂಬ ಪ್ರಥಮಾ ರೂಪವನ್ನು ಉಪಯೋಗಿಸಿರಿ.

2 ಮೃದುವಲ್ಲದ ಮಾತಾವುದೂ ಆವಳ ಬಾಯಿಂದ ಹೊರಡುತ್ತಿರಲಿಲ್ಲ. ‘ ಹೊರಡುತ್ತಿದ್ದಿತು ’ ಎಂಬ ಕ್ರಿಯೆಯನ್ನು ಉಪಯೋಗಿಸಿರಿ.

3. ದೇಹ ಶುದ್ಧಿಯಂತೆಯೇ ಚಿತ್ತ ಶುದ್ಧಿಯು ನಮ್ಮ ಸೌಖ್ಯಕ್ಕೆ ಅವಶ್ಯಕವು. ‘ ಹೇಗೆ ’ ‹ಹಾಗೆ› ಎಂಬ ಪದಗಳನ್ನು ಪ್ರಯೋಗಿಸಿರಿ.

(c) ಇದನ್ನು ತಿದ್ದಿ ಬರೆಯಿರಿ

ನಾ ಅವನ್ಗಸೀ ಘೋಗಿ ಹೇಳ್ಬಿಟ್ಬಂದೆ ಅವ ಬರ್ತೀನಿ ಅಂತ ಅಂದು ಮನೀ ಬಿಟ್ಟೊಂಟ.

ಉತ್ತರಗಳು.

I (a) 1 ಬಿಂದು ವಿಸರ್ಗಗಳು ಯಾವದಾದರೂ ಒಂದು ಸ್ವರದ ಸಹಾಯವಿದ್ದ ಹೊರತು ಉಚ್ಚಾರಣೆಗೆ ಬಾರದಕಾರಣ ಇವುಗಳಿಗೆ ಯೋಗವಾಹಗಳೆಂದುಹೆಸರು.(ಯೋಗ-ಸಂಬಂಧವನ್ನು, ವಾಹ-ಪಡೆಯುವಂಥಾದ್ದು.)

ಉದಾಹರಣೆ-ಕಃ, ನಂ.

(2) ನಾಮ ವಿಭಕ್ತಿ ಪ್ರತ್ಯಯವನ್ನು ಹೊಂದತಕ್ಕ ಶಬ್ದ ರೂಪಕ್ಕೆ ಪ್ರಾತಿಪದಿಕವೆಂದು ಹೆಸರು.

ಉದಾಹರಣೆ-ಹಸು, ಮನುಷ್ಯ

(3) ಸಂಖ್ಯಾವಾಚಕಗಳು ಲೆಕ್ಕಿಸಲ್ಪಡುವ ವಸ್ತುಗಳನ್ನು ವಿಶೇಷಿ

ಸುವಾಗ ಸಂಖ್ಯೇಯವಾಚಕಗಳೆನಿಸುವುವು.

ಉದಾಹರಣೆ-ಎರಡನೆಯವನು, ನಾಲ್ಕನೆಯವಳು.

(4) ವಿಶೇಷ್ಯವು ಯಾವಲಿಂಗವೊ ಆ ಲಿಂಗವುಳ್ಳದ್ದು ವಾಚ್ಯಲಿಂಗ ವೆನಿಸುವುದು.

ಉದಾಹರಣೆ-ನೀನು, ಎರಡು.

(b) (1) ಮಾವಿನಹಣ್ಣು-ಅಲುಕ್ಸಮಾಸ.

(2) ಹಣೆಗಣ್ಣ — ವ್ಯಧಿಕರಣ ಬಹುವ್ರೀಹಿ ಸಮಾಸ.

(3) ಬರುವಜನರು—ಗಮಕಸಮಾಸ.

(4) ಕಡುರಾಗ—ಗಮಕಸಮಾಸ.

(c) ವಿಭಕ್ತಿಗಳಲ್ಲಿ ಒಂದು ವಿಭಕ್ತಿಗೆ ಪ್ರತಿಯಾಗಿ ಮತ್ತೊಂದ ನ್ನು ಪ್ರಯೋಗಿಸುವುದುಂಟು. ಇಕ್ಕೆ ವಿಭಕ್ತಿ ಪಲ್ಲಟವೆಂದು ಹೆಸರು.

ಉದಾಹರಣೆ—ಹಳ್ಳಕ್ಕೆ ಬಿದ್ದನು.

ಕೊಡಲಿಯಲ್ಲಿ ಕಡಿದನು.

(b) ತೃತೀಯಾವಿಭಕ್ತಿ —

(1) ಕರ್ತೃ, ಕರಣ, ಹೇತ್ವರ್ಥಗಳಲ್ಲಿರುವ ಶಬ್ದಗಳ ಮೇಲೆ ತೃತೀಯಾವಿಭಕ್ತಿ ಬರುವುದು.

ಉದಾಹರಣೆ —

ಕರ್ತೃವಿಗೆ - ಶತ್ರುವಿನಿಂದ ಬಾಣವು ಬಿಡಲ್ಪಟ್ಟಿತು.

ಕರಣಕ್ಕೆ - ಒಕ್ಕಲಿಗನು ಕೊಡಲಿಯಿಂದ ಕಡಿದನು.

ಹೇತುವಿಗೆ - ವಿದ್ಯೆಯಿಂದ ಯಶಸ್ಸುಂಟಾಗುವುದು.

(2) ಎಡೆಬಿಡದೆ ಕ್ರಿಯೆ ನಡೆಯಿತೆಂಬ ಅರ್ಥವು ತೋರಿದರೆ ಕಾಲವಾಚಕದಮೇಲೂ ಅಧ್ವವಾಚಕದಮೇಲೂ ಬರುವುದು.

ಉದಾಹರಣೆ -

ಕಾಲವಾಚಕಕ್ಕೆ - ಒಂದು ತಿಂಗಳಿನಿಂದ

ಅಧ್ವವಾಚಕಕ್ಕೆ - ಮೂರು ಹರದಾರಿಯಿಂದ

(3) ಸಕರ್ಮಕ ಧಾತುಗಳು ಪ್ರೇರಣಾರ್ಥದಲ್ಲಿ 'ಇಸು' ಪ್ರ ತ್ಯಯವನ್ನು ಹೊಂದಿದಾಗ ಪ್ರೇರ್ಯ ಕರ್ತೃವಾಚಕದ ಮೇಲೆ

ತೃತಿಯಾ ವಿಭಕ್ತಿ ಬರುವುದು. ಉದಾಹರಣೆ-
ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿಸಿದನು.

II (a) ಆಡು-ಆಡಿದೆನು. ಅಡು-ಅಟ್ಟೆನು.
ಹೋಗು-ಹೋದೆನು. ಪೊಗು-ಪೊಕ್ಕೆನು.
ತೇರು-ತೇರಿದೆನು. ತೆರು-ತೆತ್ತೆನು.

(d) ಭೋಗ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳೂ ಕಳವಳ ಮೊದಲಾದ ಕೆಲವು ಕನ್ನಡ ನಾಮವಾಚಕಗಳೂ ಕನ್ನಡಕ್ಕೆ ಹೊಸಧಾತುಗಳಾಗುವಾಗ "ಇಸು" ಪ್ರತ್ಯಯ ಸೇರುತ್ತದೆ. ಉದಾ-ಭೋಗ + ಇಸು = ಭೋಗಿಸು; ಕಳವಳ + ಇಸು = ಕಳವಳಿಸು;
ರಕ್ಷಣ ಮೊದಲಾದ ಕೆಲವು ಸಂಸ್ಕೃತ ಭಾವನಾಮಗಳು ಕನ್ನಡಕ್ಕೆ ಹೊಸಧಾತುಗಳಾಗುವಾಗ ಕೊನೆಯ ಅಕ್ಷರ ಲೋಪ ಹೊಂದಿ "ಇಸು" ಪ್ರತ್ಯಯ ಸೇರುತ್ತದೆ.
ಉದಾ-ರಕ್ಷಣ + ಇಸು = ರಕ್ಷಿಸು; ಭಜಿಸು;
ಧಗಧಗ, ಛಟಛಟ, ಮೊದಲಾದ ಅನುಕರಣ ಶಬ್ದಗಳು ಕನ್ನಡಕ್ಕೆ ಹೊಸಧಾತುಗಳಾಗುವಾಗ "ಇಸು" ಪ್ರತ್ಯಯ ಸೇರುತ್ತದೆ. ಉದಾ-ಧಗಧಗ + ಇಸು = ಧಗಧಗಿಸು;
ಎಲ್ಲಾ ಧಾತುಗಳ ಮೇಲೂ ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವು ಬರುವುದು. ಉದಾ-ಮಾಡು + ಇಸು = ಮಾಡಿಸು;

(c) ಗಾಣಗಗಿತ್ತಿ, ...ವಂತೆ, ಮುದುಕಿ, ಬ್ರಾಹ್ಮಣಿತಿ, (ಬ್ರಾಹ್ಮಣಿ).

(d) (1) ನೋಡಿ-ನೋಡಿ ನಕ್ಕನು—ಕ್ರಿಯೆ ಅನೇಕಾವರ್ತಿ ನಡೆಯಿತೆಂಬರ್ಥದಲ್ಲಿ ದ್ವಿರುಕ್ತಿ.

[2] ಮಲ್ಲಿಗೆ ಮೊದಲು ಮೊದಲು ಹೂವಾಯಿತು= ಅತಿಶಯಾರ್ಥದಲ್ಲಿ ದ್ವಿರುಕ್ತಿ

III (a) ಹಾವಾಡಿಗ, ಮಾತಾಳಿ, ಮಡಿವಾಳ, ಓಲೆಕಾರ,
(b) ಬಸದಿ= ವಸತಿ; ಜಾನ= ಧ್ಯಾನ, ಕಾರ= ಕ್ಷಾರ,

ಸೊಸೆ= ಶ್ನುಷಾ, ಬರ್ಬರ= ಬಬ್ಬುಳ್ಳಿ, ಪ್ರಗ್ರಹ= ಹಗ್ಗ
ಲೇಪ್ಯ= ಲೆಪ್ಪ, ಕಾಂಸ್ಯ= ಕಂಚು.

(c) ನಾಳೆ ಬರುತ್ತೇನೆ. ಇದೋ ಬಂದೆನು.

VI (a) (1) "ಆದಕಾರಣ" "ಆದುದರಿಂದ" ಮೊದಲಾದವುಗಳ ದಸೇರಿಸಲ್ಪಟ್ಟಿದ್ದರೆ ಹೇತ್ವರ್ಥಕ ಸಂಯೋಜಿತವಾಕ್ಯ ವೆ ಸುವುದು. ಉದಾಹರಣೆ.

ಮಳೆ ಬಂದಿತು; ಆದುದರಿಂದ ನದಿಗಳು ಹೆಚ್ಚಿದವು.

[2] 'ಮತ್ತು' ಮೊದಲಾದುವು ಸೇರಿಸಲ್ಪಟ್ಟಿದ್ದರೆ ಸಮುಚ್ಚ ಯಾರ್ಥಕಸಂಯೋಜಿತವಾಕ್ಯವೆನಿಸುವುದು.

ಉದಾಹರಣೆ:— ಶಿಷ್ಟರನ್ನು ಅರಸರು ಸನ್ಮಾನಿಸುತ್ತಾರೆ ಮತ್ತು ಪ್ರಜೆಗಳು ಹೊಗಳುತ್ತಾರೆ.

[3] 'ಆದರೆ' ಮೊದಲಾದವುಗಳಿಂದ ಸೇರಿಸಲ್ಪಟ್ಟಿದ್ದರೆ ವಿರೋ ಧಾರ್ಥಕ ಸಂಯೋಜಿತ ವಾಕ್ಯವೆನಿಸುವುದು. ಉದಾಹರಣೆ ಅನೇಕರು ಧರ್ಮೋಪದೇಶವನ್ನು ಮಾಡುತ್ತಾರೆ. ಆದರೆ ಕೆಲ ರು ಮಾತ್ರ ತಾವು ಆಚರಿಸುತ್ತಾರೆ.

[4] 'ಅಥವಾ' ಮೊದಲಾದವುಗಳಿಂದ ಸೇರಿಸಲ್ಪಟ್ಟಿದ್ದರೆ ಪಕ್ಷಾಂ ತರಾರ್ಥಕ ಸಂಯೋಜಿತವಾಕ್ಯವೆನಿಸುವುದು.

ಜನರು ವ್ಯಾಪಾರದಿಂದ ಜೀವಿಸುತ್ತಾರೆ; ಅಥವಾ ವ್ಯವಸಾ ದಿಂದ ಜೀವಿಸುತ್ತಾರೆ.

[b] [1] ಅವನಮಾತು ಜಗಳವನ್ನು ಹುಟ್ಟಿಸಿತು.

[2] ಮೃದುವಾದ ಮಾತೇ ಅವಳ ಬಾಯಿಂದ ಹೊರಡುತ್ತಿತ್ತು

[3] ದೇಹಶುದ್ಧಿಯು ನಮ್ಮ ಸೌಖ್ಯಕ್ಕೆ ಹೇಗೆ ಅವಶ್ಯಕ ಚಿತ್ತಶುದ್ಧಿಯು ಹಾಗೆಯೇ ಅವಶ್ಯಕ

[c] ನಾನು ಅವನ ಮನೆಗೆಹೋಗಿ ಹೇಳಬಿಟ್ಟು ಬಂದೆನು. ಅ ಬರುವೆನು ಎಂದು ಅಂದು ಮನೆಯನ್ನು ಬಿಟ್ಟುಹೊರಟ

1914.

I [೧] ಆಗಮಸಂಧಿಗೂ ಆದೇಶಸಂಧಿಗೂ ಭೇದವೇನು ? ಉದಾಹರಣೆ ಕೊಡಿ.

[೨] "ಸಂತಾನಾಭಿವೃದ್ಧಿ"—"ಮೂಡಗಣೆ" ಇವುಗಳಲ್ಲಿರುವಸಂಧಿಯನ್ನು ಬಿಡಿಸಿ ಬರೆಯಿರಿ. ಆಯಾಸಂಧಿಯ ಹೆಸರೇನು?

II [೧] ದ್ವಿಗುಸಮಾಸವೆಂದರೇನು ? ಉದಾಹರಣೆ ಕೊಡಿ.

[೨] "ಉದಾರಬುದ್ಧಿಗಳು"—ಇಲ್ಲಿ ಯಾವ ಸಮಾಸಗಳಿವೆ? ವಿವರಿಸಿ ಬರೆಯಿರಿ.

III ಈ ಕೆಳಗಿನ ವಾಕ್ಯದಲ್ಲಿರುವ ಶಬ್ದಗಳ ರೂಪ ನಿಷ್ಪತ್ತಿಯನ್ನು ಬರೆಯಿರಿ:— "ಇನ್ನು ನಮ್ಮನ್ನು ಕೆಣಕದಿರು"

IV ಅಧೀನವಾಕ್ಯವೆಂದರೇನು ? ನಾಮಾತ್ಮಕ ಅಧೀನವಾಕ್ಯ, ಗುಣಾತ್ಮಕ ಅಧೀನವಾಕ್ಯ-ಇವೆರಡಕ್ಕೂ ಒಂದೊಂದು ಉದಾಹರಣೆಯನ್ನು ಬರೆಯಿರಿ.

ಉತ್ತರಗಳು.

I (೧) ಆಗಮಸಂಧಿ:—ಸ್ವರಕ್ಕೆ ಸ್ವರವು ಪರವಾದಾಗ, ಕೆಲವುಕಡೆ ; ಪೂರ್ವಪರಸ್ವರಗಳ ನಡುವೆ ಬೇರೊಂದು ಹೊಸ ಅಕ್ಷರವು ಬಂದು ಸಂಧಿಯಾಗುವುದು. ಇದಕ್ಕೆ ಆಗಮಸಂಧಿಯೆಂದು ಹೆಸರು.

ಉದಾಹರಣೆ- ಸೀತೆ + ಅನ್ನು = ಸೀತೆಯನ್ನು

ಗೋ + ಅನ್ನು = ಗೋವನ್ನು ಆ + ಊರು = ಆವೂರು

ಆದೇಶಸಂಧಿ:—ಸಂಧಿಯಾಗುವಾಗ ವ್ಯಂಜನಕ್ಕೆ ವ್ಯಂಜನಪರವಾದಾಗಲೂ, ಸ್ವರಕ್ಕೆ ಸ್ವರ ಪರವಾದಾಗಲೂ, ಕೆಲವು ಸಂದರ್ಭವಲ್ಲಿ ; ಪೂರ್ವಪದದ ಕಡೇ ಅಕ್ಷರಕ್ಕಾಗಲಿ, ಅಥವಾ ಪರಪದದ ಮೊದಲನೇ ಅಕ್ಷರಕ್ಕಾಗಲಿ, ಪ್ರತಿಯಾಗಿ ಬೇರೊಂದು ಅಕ್ಷರ ಬರುವುದು. ಇದಕ್ಕೆ ಆದೇಶಸಂಧಿಯೆಂದು ಹೆಸರು.

ಉದಾಹರಣೆ. ಮಳೆ + ಕಾಲ = ಮಳೆಗಾಲ ಆ + ಬಿುತು = ಆರುತ್ತ

(೨) (೧) ಸಂತಾನ + ಅಭಿವೃದ್ಧಿ = ಸವರ್ಣದೀರ್ಘಸಂಧಿ.

ದಾಂಟಿದುದು,- ದಾಂಟು-ಧಾತು, ಪ-ವಿ. ಪ್ರ. ಉದು-ಕೃ. ಪ್ರ=
ದಾಂಟಿದುದು ಆಗಬೇಕಾಗಿತ್ತು.

ಇರ್ಮ್ಮಗಿಲು,-ಎರಡು + ಮುಗಿಲು = ಇರ್ಮುಗಿಲು ಆಗಬೇಕಾಗಿತ್ತು
ನಿಮ್ಮವನು,-ನಿಮ್ಮ + ಅವನು = ನಿಮ್ಮವನು ಆಗಬೇಕಾಗಿತ್ತು.
ಮಕ್ಕಳುಗಳು,-ಮಕ್ಕಳು ಎಂಬುವುದೇ ಬಹುವಚನ. ಇದ
ಮೇಲೆಗಳು ಅನಾವಶ್ಯಕ. ಮಕ್ಕಳು ಎಂದರೆ ಸಾಕು.

(2) ಅರಿ-ಅರಿವು = ತಿಳಿಯುವುದು. ಬೆಳೆ-ಬೆಳಸು = ಧಾನ್ಯ ಬೆಳಸು
ಅರಿ = ತುಂಡು ಬೆಳವಳಿಕೆ = ಅಭಿವೃದ್ಧಿ.
ಹೆರು-ಹೆರಿಗೆ = ಹೆರುವುದು. ನಡೆ- ನಡಿಗೆ = ನಡ[illegible].
ಹೆರುವುದು = ಹೊಂದುವುದು. ನಡತೆ = ನಡವಳಿಕೆ.
ಬಿಡು-ಬಿಡುವುದು = ವಿಸರ್ಜಿಸುವಿಕೆ. ಮೆರೆ-ಮೆರೆತ-ಡಂಭಮಾಡುವುದ
ಬಿಡುವು = ವಿಶ್ರಾಂತಿ. ಮೆರವಣಿಗೆ = ದೇವರಮೆರವಣಿಗೆ

(3) ಆರುವೆರಳು = ಆರಾದ + ಬೆರಳಿನ ಸಮಾಹಾರ-ಸಮಾಹಾರದ್ವಿಗುಸ
ಬಿಳುಮನೆ = ಬಿಳಿದಾದ + ಮನೆ-ವಿಶೇಷಣಪೂರ್ವಪದಕರ್ಮಧಾರಯ
ಬತ್ತೀಸಾಯುಧ = ಬತ್ತೀಸಸಂಖ್ಯಾತವಾದ + ಆಯುಧ-ಲುಪ್ತ
ಮಧ್ಯಮ ಪದ ಕರ್ಮಧಾರಯ.
ಮೊಗಸನ್ನೆ = ಮೊಗದ + ಸನ್ನೆ-ಷಷ್ಠೀ ತತ್ಪುರುಷ ಸಮಾಸ
ಮೊಳೆನಗೆಮಾತು = ಮೊಳೆವ + ನಗೆ-ಗಮಕಸಮಾಸ.
ಮೊಳೆನಗೆಯಿಂದ ಕೂಡಿದಮಾತು-ಲುಪ್ತ ಮಧ್ಯಮಪದ ಕರ್ಮ
ಧಾರಯ ಸಮಾಸ.

II (1) ನನಗೇನೋ ಕಣ್ಣು ಕೈ ಕಾಲುಗಳೇನೂ ಇಲ್ಲದಹಾಗೆ ಭ
ವಿಸಿ ಕಾದಾಡುತ್ತಿದ್ದ ಈ ಓಲೆಕಾರರಸಂಭ್ರಮ ಸಾಕುಸಾಕ
(2) ಇವರೆಲ್ಲಾ ನನಗೆ ಸಹಾಯಮಾಡುವಹಾಗೆ ಈ ಓಲೆಕಾರ
ಸಂಭ್ರಮ ಸಾಕು ಸಾಕು,
(3) ಒಬ್ಬನೀಕಡೆಬರುವನಲ್ಲ. ಒಬ್ಬ ನಾಕಡೆಹೋಕುವನಲ್ಲ. ಹೀ
ಕಾದಾಡುತ್ತಿದ್ದ ಈ ಓಲೆಕಾರರಸಂಭ್ರಮಸಾಕುಸಾಕು.

ಕರ್ಣಾಟಕ ಕಾವ್ಯಮಂಜರಿ.

— ಉದಯಾದಿತ್ಯಾಲಂಕಾರಂ —

[೭]

ಎಸ್. ಜಿ. ನರಸಿಂಹಾಚಾರ್,
ಮ. ಅ. ರಾಮಾನುಜೈಯ್ಯಂಗಾರ್,
ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,
ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿದೆ.
೧೮೯೪.

[ಕ್ರಯ 2½ ಆಣೆ.

ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾ. ಪ್ರೊಪ್ರೈಟರ್ ಮ. ಕುಮಾರಸ್ವಾಮಿ
ತಿರುಮಲಾಚಾರ್, ಅ. ಅನಂದಾಳ್ವಾರ್ ಇವರಲ್ಲಿ ದೊರೆಯುತ್ತದೆ.

ಪೀಠಿಕೆ.

ಈ ಗ್ರಂಥಕರ್ತನಿಗೆ ಉದಯಾದಿತ್ಯನೆಂದು ಹೆಸರು. ಈತನು ಚೋಳರಾಜ ಂಶಕ್ಕೆ ಸೇರಿದವನು. ಸೋಮನಾಥ ಭೂಪನೆಂದು ಈತನ ತಂದೆಯ ಹೆಸರು. ತನಿಗೆ 'ಸಾಹಿತ್ಯ ರತ್ನಾಕರ', 'ರಾಜಸುಕವಿರತ್ನಾಭರಣ', 'ಕವಿ ರಾಜ ೇಖರ' ಎಂಬ ಬಿರುದುಗಳುಂಟು. ಈತನು ಯಾವ ದೇಶವನ್ನು ಆಳುತ್ತಿದ್ದ ೋ ಗೊತ್ತಿಲ್ಲ. ಈತನ ಇತರ ಗ್ರಂಥಗಳು ಯಾವವೂ ದೊರಕಿಲ್ಲ. ಆದರೆ ಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ—

ಉದಧಿಪುರಾಧಿಪಸುತವಂ ।
ತ್ರಿದೂತಗಮನಾಜಿವಿರಹಪರಿಣಯಸುರತ ॥
ತ್ರ್ಯದಿನೇಶಚಂದ್ರಮಧುಕುಂಭೈ ।
ದುದಕವನಸ್ಪತಿಯುಂ ಕೃತಿಗೆ ಪದಿನೆಂಟಂಗಂ ॥ (ಪು.೪.೧೩)

ಎಂಬ ಪದ್ಯವು ಉದ್ಧೃತವಾಗಿರುವದರಿಂದ ಆ ಕವಿಗಿಂತಲೂ ಈತನು ಪೂರ್ವ ವನೆಂದು ತಿಳಿಯುತ್ತದೆ. ಮಲ್ಲಿಕಾರ್ಜುನನು ಸುಮಾರು ಕ್ರಿ. ೧೨೪೦ ರಲ್ಲಿ ದ್ದಂತೆ ಮಿ॥ ರೈಸ್ ಸಾಹೇಬರು ಹೇಳುತ್ತಾರೆ.

ಉದಯಾದಿತ್ಯನ ಹೆಸರನ್ನು ಸಾಳ್ವಕವಿಯು ತನ್ನ ರಸರತ್ನಾಕರದಲ್ಲಿ ಹೇ ುತ್ತಾನೆ. ನೃಪತುಂಗನು ತನ್ನ ಕವಿರಾಜಮಾರ್ಗಾಲಂಕಾರದಲ್ಲಿ ಒಬ್ಬ ಉದ ರಕವಿಯ ಹೆಸರನ್ನು ಹೇಳುತ್ತಾನೆ; ಬಹುಶಃ ಆತನು ಬೇರೆ ಕವಿಯಾಗಿರ ಹುದು.

ಉದಯಾದಿತ್ಯಾಲಂಕಾರಂ.

ಶ್ರೀಯುಂ ವಾಕ್ಶ್ರೀಯುಮೆನಿ ।
ಪ್ಪಾಯತಿಯಿಂದರ್ಥಶಬ್ದರೂಪಮನಾಂತಾ ॥
ಮ್ನಾಯನಿಧಿಯಾದಳಾವಳ ।
ಜೇಯೆ ಜಗನ್ಮೂರ್ತಿ ಸಕಳಮಂಗಳನಿಳಯಳ್ ॥ ೧
ಆಭಾರತಿಗತಿನಿರ್ಮ್ಮಳ ।
ಶೋಭಾವತಿಗೆಱಗಿ ಕಿಱಿದಱಿಂ ತಿಳಿಪಿದಪೆಂ ॥
ಶ್ರೀಭರಿತಬಾಲಕರ್ ಕವಿ ।
ತಾಭಣಿತೆಯೊಳಮರ್ದ್ದ* ನಿಮಿರ್ದ್ದ* ನೆಱ ಮೆಱೆವಿನೆಗಂ ॥ ೨
(ಕುಳಕಂ)

ಪದೆದರ್ಥಮನಳವಡಿಸಿದ ।
ಪದಾಳಿ ಕಾವ್ಯದ ಶರೀರಮೆನಿಕುಂ. ಮತ್ತಂ ॥
ಕಾವ್ಯಭೇದಂ. ಅದು ಗದ್ಯಪದ್ಯಮಿಶ್ರ ।
ತ್ವದೆ ಮೂದೆಱನಕ್ಕುಮಲ್ಲಿ
ಗದ್ಯಂ. ಗದ್ಯಮಪಾದಂ ॥ ೩
ಪದ್ಯಂ. ಪಾದಮಯಂ ಪದ್ಯಂ ತ ।
ತದ್ಭೇದಂ. ತ್ಪಾದದ ಪದ್ಯಕ್ಕೆ ಮುಕ್ತಕಂ ಕುಳಕಂ ಪ್ರ ॥

ಧೋದಿತಕೋಶಂ ಸಂಘಾ ।
ತಾದಿಗಳೆನೆ ಪಲವು ಭೇದವಾಕಾವ್ಯಾಂಗಂ ॥೪

ಪದ್ಯಕಾವ್ಯಂ. ಪದ್ಯದೊಳೆ ಸರ್ಗಬಂಧಂ ।
ಗದ್ಯಕಾವ್ಯಂ. ಗದ್ಯದೊಳಾಖ್ಯಾಯಿಕಾಕಥಾಯುತಮಂತಾ ॥
ಚಂಪೂಕಾವ್ಯಂ. ಗದ್ಯದ ಪದ್ಯದ ಮಿಶ್ರದೆ ।
ಹೃದ್ಯಂ ಚಂಪೂಸಮಾಖ್ಯಕಾವ್ಯಂ ಸೇವ್ಯಂ ॥೫

ವಚನಕಾವ್ಯಂ. ಕನ್ನಡದೊಳ್ ಚಂಪೂಕೃತಿ ।
ಸನ್ನುತತರವಚನಕಾವ್ಯಮೆನಿಕುಂ
ಸರ್ಗಕಾವ್ಯಂ. ಚತ್ರಾ ॥
ಱಂ ನೆಱೆ ವೈದಂಡಕಮೆನೆ ।
ಸನ್ನುತಿಯಂ ಸರ್ಗಬಂಧಕೃತಿ ತಳೆದಿರ್ಕುಂ ॥೬

ರೀತಿ, ಪಲವುಂ ದೇಶದ ಪರಿಗಳ್ ।
ತದ್ಭೇದಂಗಳ್. ಪಲವದಱಿಂ ರೀತಿ ಪಲವುಮೊಳವಾದೊಡಮು ॥
ಜ್ಜ್ವಲವೈದರ್ಭಂ ಪಾಂಚಾ ।
ಲಲಲಿತಮುಂ ಗೌಡರೀತಿಯೆಂಬಿವು ನಿಬಿಡಂ ॥೭

ವೈದರ್ಭರೀತಿ. ಅಸಮಾಸಮುಪ್ಪ ಬಂಧದೊ ।
ಳೆಸೆಗುಂ ವೈದರ್ಭರೀತಿ
ಪಾಂಚಾಲರೀತಿ. ಸುಕರಂ ಪಾಂಚಾ ॥
ಲಸಮಾಖ್ಯರೀತಿ
ಗೌಡರೀತಿ. ಗೌಡಂ ।
ಲಸಿತಸ್ಫುಟವಿಕಟವರ್ಣಮೋಜಃಪೂರ್ಣಂ ॥೮

ನವರಸಂಗಳ್. ವರಶೃಂಗಾರಂ ವೀರಂ।
ಕರುಣಂ ಹಾಸ್ಯಂ ಭಯಾನಕಂ ಬೀಭತ್ಸಂ॥
ಸ್ಫುರದದ್ಭುತರೌದ್ರಂಗಳ್।
ಪರಮಂ ಶಾಂತಂ ರಸಂಗಳೀಯೊಂಬತ್ತುಂ ॥೯

ಗೌಡರೀತ್ಯುಚಿತ ರಸಂಗಳ್ ವಿತತಭಯಾನಕರೌದ್ರಾ।
ದ್ಭುತವೀರರಸಂಗಳೆಯ್ದೆ ಗೌಡೋಕ್ತಿಗಲಂ॥
ಕೃತಿ

ಪಾಂಚಾಲರೀತ್ಯುಚಿತರಸಂಗಳ್. ಕರುಣಶಾಂತರಸಸಂ।
ಗತಿ ಪಾಂಚಾಲಕ್ಕೆ

ವೈದರ್ಭರೀತ್ಯುಚಿತರಸಂಗಳ್:— ನಿಕ್ಕವಿತರಕ್ಕಕ್ಕುಂ ॥೧೦
(ಶೃಂಗಾರ, ಹಾಸ್ಯ, ಬೀಭತ್ಸ.)

ಮಂಗಳಂಗಳ್. ಆದಿಕವೀಶ್ವರವರವಚ।
ನೋದಿತಮೆನಿಸಿದ ಮಹಾಕೃತಿಗೆ ಪದಸಂ ತಾ॥
ನಾದುವು ಬಗೆವಂದಾಶೀ।
ರ್ವಾದನಮಸ್ಕಾರವಸ್ತುನಿರ್ದೇಶಂಗಳ್ ॥೧೧

ಈಕಾವ್ಯಂ ಸೇವ್ಯಂ ಶೋ।
ಭಾಕಾಂಕ್ಷ್ಯಮೆನಿಕ್ಕುಮಖಿಳರೂಪಕನಿಕರಂ॥
ಲೋಕಕ್ಕೆ ನಾಟಕಾದಿನಿ।
ಜಾಕಾರದೊಳಂತವಕ್ಕೆ ಲಕ್ಷಣಮನ್ಯಂ ॥೧೨

ಮಹಾಕಾವ್ಯದ ಪದಿನೆಂಟಂಗಂ. ಉದಧಿಪುರಾಧಿಪಸುತಮಂ।
ತ್ರಿದೂತಗಮನಾಜಿವಿರಹಪರಿಣಯಸುರತ॥

ರ್ಕದಿನೇಶಚಂದ್ರಮಧುಕುಭೃ ।
ದುದಕವನಸ್ಪತಿಯೆ ಕೃತಿಗೆ ಪಡಿನೆಂಟುಗಂ ॥೧೩

ಕಾವ್ಯಕ್ಕಿರುವ ಗುಣಂಗಳ್.

ಅಸುಗಳೆನಿಕ್ಕುಂ ಶ್ಲೇಷ ।
ಪ್ರಸಾದ ಸಮ ಮಧುರಭಾವ ಸುಕುಮಾರಾರ್ಥ ॥
ವಸಥೋದಾರೋಜಃ ಕಾಂ ।
ತಿ ಸಮಾಧಿಗಳೆಂಬ ಪೆಸರ್ಗೊಳೀರೈದು ಗುಣಂ ॥೧೫

೧. ಶ್ಲೇಷಂ. ಮದಸಿಂಧುರಕುಂಭಸ್ಥಳ ।
ವಿದಳನಮುಂ ಮಾಳ್ಪನೆಂಬ ವಚನಂ ಶ್ಲೇಷಂ ॥

೨. ಪ್ರಸಾದಂ. ಸದಮಲಮುಕ್ತಾಲಂಕೃತಿ ।
ಕದನೋರ್ವರೆಯೆಂಬುದಂ ಪ್ರಸಾದಕ್ಕುಸಿರ್ವರ್* ॥೧೬

೩. ಸಮಂ. ಆವಿಷಮಮಲ್ಲದುದು ಸಮ ।
ಮೀವನದೊಳ್ಮಲಯಪವನನೊಪ್ಪಿದನೆಂದಿಂ ॥
ತಾವಗಂ

೪. ಮಾಧುರ್ಯಂ. ಅಗ್ರಾಮ್ಯತೆಯೊಳ್ ।
ತೀವಿದ ನುಡಿ ಮಧುರಮತಿರಸಾವಹಮಕ್ಕುಂ ॥೧೭
ಎಂತೆನೆ ನಿನಗಾನೊಲ್ದೆಂ[1] ।
ಕಾಂತೇ ಎನ್ನದೆ ಲತಾಂಗಿ ಮದನಲತಾಂತಾ ॥
ಸಂತತಶರಶರಧಿಭೂತ ।
ಸ್ವಾಂತತೆಯುಂ ತಳೆದೆನೆಂಬ ನುಡಿ[2] ಮಾಧುರ್ಯಂ ॥೧೮

೫. ಸುಕುಮಾರಂ. ಸುಕುಮಾರವೆಂಬ ಗುಣಮದು ।
ಸುಕುಮಾರವಚೋವಿಲಾಸಿ ಚೈತ್ರಾಗಮದೊಳ್ ॥

---

೧. ನಿನಗಾನೊಲಿದೆಂ. ಕ॥ ೨. ಮಾಜ್ಮಾಧುರ್ಯಂ. ಗ॥

ಪಿಕನಿಕರಂ ಬಗ್ಗಿಸಿದುವು ।
ಶುಕಮಂಡಲಿ ತೊಂಡುಗೆಡೆದುವೆಂಬೀನುಡಿವೊಲ್ ॥೧೮

೬. ಅರ್ಥವ್ಯಕ್ತಿ. ಕನಕಚ್ಛವಿಯಾದುದು ಕೊಳ ।
ನೆನೆ ನೇಯುಂ ಬಾರದಂದು ಸರಸಿಜರಜದಿಂ ॥
ಕನಕಚ್ಛವಿಯಾದುದು ಕೊಳ ।
ನೆನೆ ಸೂಕ್ತಮನೇಯುಮಪ್ಪುದರ್ಥವ್ಯಕ್ತಿಂ ॥೧೯

೭. ಉದಾರಂ. ನಿನಗಾಂತ ವೈರಿ ಮತ್ತಾ ।
ತನುವಿಂ ಸ್ವಪುರಪ್ರವೇಶಮಂ ಮಾಡಲ್ ನೆ ॥
ಟ್ಟನೆ ನೆಱಿಯುನೆಂಬನೀರಾ ।
ಜನುತಗುಣೋತ್ಕರ್ಷಸಾರಮಪ್ಪುದುದಾರಂ ॥೨೦

೮. ಓಜಸ್ಸು. ಓಜೋಗುಣಂ ಸಮಾಸವಿ ।
ರಾಜಿತಮತಿಶುಭ್ರಶಾರದಾಭ್ರಾದಭ್ರ ॥
ಭ್ರಾಜಿತನಿಜಯಶಮಭಿನವ ।
ರಾಜಿತಗಿರಿರಾಜಮೌಳಯೆಂಬುಕ್ತಿಯವೋಲ್ ॥೨೧

೯. ಕಾಂತಂ. ಕಾಂತಂ [2]ಸಮುಚಿತಲೋಕೋ ।
ದಂತಂ ನಿನ್ನುದಯದಿಂದಮುದಯಧರಿತ್ರೀ ॥
ಕಾಂತ ದಿನಕಾಂತಕುಲ ಕೇ ।
[3]ಳಂತೀಲೋಕಮೆ ಕೃತಾರ್ಥಮೆಂಬೀನುಡಿವೊಲ್ ॥೨೨

೧೦. ಸಮಾಧಿ. ಒಂದಱ ಧರ್ಮಮನೊಂದ ।
ಕ್ಕೆಂದಂಬಡಿಪ್ಪುದೆ ಸಮಾಧಿ ನಿಜಗುಣನುತಿಯೊಳ್ ॥

೧. ಮಕ್ಕುಮ. ಕ॥ ೨. ಸಮುದಿತ. ಚ॥ ೩. ಲೋಕಂ. ಗ॥

ವಂದಿಗೆ ನಾಲಗೆ ಕೂರಿ |
ತ್ತೆಂದಸಿಧರ್ಮ್ಮವನೆ ರಸನೆಗುಸಿರ್ವರ್ಪಾಂಗಿಂ ||೨೩
ಎಸೆವೀಕಾವ್ಯಶರೀರಮಂ ಪೊಸೆಯಿಸಿದರ್ಷ್ಟಾದಶಾಂಗಂಗಳಂ |
ರಸರೀತಿಕ್ರಮದಿಂದವೊಂದಿದ ದಶಪ್ರಾಣಂಗಳೊಂದಂದಮಂ ||
ವಸುಧಾನಾಥನ ಸೋಮನಾಥನ ಸುತಂ ಚೋಳೋದಯಾದಿತ್ಯನಿ
ಱುಸಿದರ್ಂ ಪೇಳ್ದಪನಿನ್ನಲಂಕೃತಿಗಳಂ ಸಾಹಿತ್ಯರತ್ನಾಕರಂ ||೨೪

ಅಲಂಕಾರಂಗಳ ಪೆಸರ್ಗಳ್.

ಜಾತಿಯನುಪಮಾನಮನಾ |
ಖ್ಯಾತಿಯನಾಂತಿರ್ದ ರೂಪಕಾಲಂಕೃತಿಯಂ ||
ಪ್ರೀತಪ್ರದೀಪಕಮುಮಂ |
ನೂತಾವೃತ್ತಿಯುಮನನುಪಮಾಕ್ಷೇಪಮುಮಂ||೨
ಅಮರ್ದರ್ಥಾಂತರವಿನ್ಯಾ |
ಸಮನಾವ್ಯತಿರೇಕಮಂ ವಿಭಾವನೆಯಂ ಸಂ ||
ದಮಲಸಮಾಸಮನತಿಶಯ |
ಮುಮನುತ್ಪ್ರೇಕ್ಷೆಯುಮನೊಪ್ಪುವಾಹೇತುವುಮ
ಮಿಗೆ ಸೂಕ್ಷ್ಮಮಂ ಲವಕ್ರಮ |
ಯುಗಮಂ ಪ್ರೇಯಮನನೂನರಸವತ್ವಮನಾ ||
ನೆಗೞ್ದೂರ್ಜಸ್ವಿಯನಾದಂ |
ಸೊಗಯಿಪ ಪರ್ಯಾಯಮಂ ಸಮಾಹಿತವಚಮಂ ||೨
ಅತುಳೋದಾತ್ತಯುತಾಪ |
ಹ್ನುತಿ ವಿಶ್ಲಿಷ್ಟಂ ವಿಶೇಷಮಾಸಮಯೋಗಂ ||

---

೧. ವಿಧಿಯಿಸಿ. ಗ||

ವಿತತವಿರುದ್ಧಾಪ್ರಸ್ತುತ।
ನುತಿಸಹಿತಂ ವ್ಯಾಜನುತಿಗಳೆಂದಿಂತಿವ್ರುಮಂ ॥೨೮
ಮಿಸುಪ ನಿದರ್ಶನಮುಂ ಮಿ।
ಕ್ಕ ಸಹೋಕ್ತಿಯನಿಂಬುವೆತ್ತಪರಿವೃತ್ತಿಯನೋ॥
ಳ್ಪಸಮಾಶಿಯುಮಂ ಸಂಕೀ।
ರ್ಣಸಮೇತಕಮೆನಿಪ ಭಾವಿಕಾಂಗಾಂಗಿಕಮುಂ ॥೨೯

೧. ಸ್ವಭಾವಾಲಂಕಾರಂ. ಅದು ತಾನೆಂತೆನೆ ಲಕ್ಷ್ಮೀ।
ಸುದತೀಪತಿ ಪೀತವಾಸಸಂ ವನಮಾಲಂ॥
ಸದಮಲಕೌಸ್ತುಭಧರನೊ।
ಪ್ಪಿದನಚ್ಯುತನೆಂಬುದಾ ಸ್ವಭಾವಾಖ್ಯಾನಂ॥ ೩೦
ಇಂತುಳ್ಳದನುಳ್ಳಂತು ಸ।
ಮಂತುಸಿರ್ವ್ವುದು* ಜಾತಿ

೨. ಉಪಮೆ. ಕರ್ಣನಂತಿರೆ ನೀನೆಂ॥
ದಂತೊಂದನೆ ಪೋಲಿಸುವೊಡ।
ದುತಾದೊಡನುಪಮೆಯೆಂಬುದುದಯಾದಿತ್ಯಾ ॥೩೧

೩. ರೂಪಕಂ. ಸಸಿಯುಂ ಪೋಲ್ವುದು ಮೊಗಮೆಂ।
ದುಸಿರದೆ ನಗೆಮೊಗಮೆ ಸಸಿ ದಲೆಂದಿಂತು ಸಮಂ॥
ತುಸಿರ್ವೊಡೆ* ರೂಪಕಮಕ್ಕುಂ।
ವಸುಧಾಧಿಪ ರಾಜಸುಕವಿರತ್ನಾಭರಣಾ ॥೩೨

೪. ದೀಪಕಂ. ಕ್ರಿಯೆ ಜಾತಿ ಗುಣದ್ರವ್ಯಂ।
ನಿಯತಂ ತಾನಾವುದೊಂದು ವಾಚ್ಯಚಯಕ್ಕಾ॥

ಶ್ರಯಮಾಗೆ ದೀಪಕಂ ರಿಪು।
ಭಯಪತಿಜಯಕಾರಿ ಸುಭಟನೆಂಬೀನುಡಿವೊಲ್ ॥೩

೫. ಆವೃತ್ತಿ. ಪದೆದರ್ಥಮುಭಯಥಾವೃ।
ತ್ತಿ ದಲಾವೃತಿ ಲೋಕನೇತ್ರಮಲರ್ದುದು ಕಮಲಂ
ವಿದಳಿತಮಾದುವು ದಿನಕರ।
ನುದಯದೊಳೆಂಬುಕ್ತಿಯಂ ತಿರುದಯಾದಿತ್ಯಾ ॥೩೪

೬. ಆಕ್ಷೇಪಂ. ಬಡತನಮಂ ಬಿಡಿ ಬುಧರೊಳ್।
ಪಡೆದಂ ಪಡೆದಜನಿನುದೆಗ ನೀನವರೆಡರಂ ॥
ಕೆಡಿಸಲುದಯಿಸಿದೆಯೆಂಬೀ।
ನುಡಿವೊಲ್ಪ್ರತಿಷೇಧಮಪ್ಪ ನುಡಿಯಾಕ್ಷೇಪಂ ॥೩೫

೭. ಅರ್ಥಾಂತರ ವಿನ್ಯಾಸಂ. ಪುರುಳೊಂದನಾಡಿ ನೆರಪುವ।
ಪುರುಳಂ ಬೇಱೊಂದನೊಪ್ಪಲಾಡುವುದರ್ಥಾಂ ॥
ತರನಿನ್ಯಾಸಂ ನಿಜಧನ।
ಮೆರೆವವರ್ಗನೆ ತಮಗೆ ಪಡೆವರೇ ಸತ್ಪುರುಷರ್ ?॥೩

೮. ವ್ಯತಿರೇಕಂ. ಸರಿ ವಿತರಣಗುಣದೊಳ್ಸುರ।
ತರುವುಂ ನೀನುಂ ವಿವೇಕಿ ನೀನುದಯನರೇ ॥
ಶ್ವರನೆಂಬ ಭೇದಮಂ ದೊರೆ।
ಯೆರಡಱೊಳೊಲ್ದಂತೆ ನುಡಿವುದಾವ್ಯತಿರೇಕಂ ॥೩೭

೯. ವಿಭಾವನೆ. ಎಸೆವ ನಿಮಿತ್ತಾಂತರಮಂ।
ಪ್ರಸಿದ್ಧಕಾರಣಮನುಱಿದು ಸಹಜತೆಯಂ ಮೇ॥
ಱುಸಿರೆ ವಿಭಾವನೆ ಕಣ್ಗಳ್।
ಮಸೆಯದೆ ಕೊಱದುವು ಕಾಮನಿಱಿಯದೆ ಗೆಲ್ದಂ ॥೩

೧೦. ಸಮಾಸಂ. ಪೆರುಳೊಂದಂ ಬಗೆದದಱೊಳ್ ।
ಪರಿಯಂ ಬೇಱೊಂದನುಸಿರ್ದೊಡದುವೆ ಸಮಾಸಂ ॥
ಸಿರಿಗಂಪಂ ತೇದೊಡಮೇಂ ।
ಪರಿಮಳಮಂ ತಣ್ಪನೀವುದಂ ಮಾಣ್ದಪುದೇ ? ॥೩೯

೧೧. ಅತಿಶಯಂ. ಸವಿಶೇಷವಚನಮತಿಶಯ ।
ಮವಧರಿಸುದಯಕ್ಷಿತೀಶ! ನಿಜವಿಶದಯಶೋ ॥
ಧವಳಮದೊಳ್ಪೆಟ್ಟಸಲೊಗೆ ।
ದುವು ಧವಳಮಯಂಗಳುಮುಖ್ಯಧವಳಪದಾರ್ಥಂ ॥೪೦

೧೨. ಉತ್ಪ್ರೇಕ್ಷೆ. ಇರೆ ವಸ್ತುವೊಂದು ತನ್ನಯ ।
ಪರಿಯಿಂ ಬೇಱೊಂದನದಱೊಳುತ್ಪ್ರೇಕ್ಷಿಸುವಾ ॥
ಪರಿಯುತ್ಪ್ರೇಕ್ಷಾಲಂಕೃತಿ ।
ಬಿರಿದುವು ನಗುವಂತೆ ಬಿರಯಿಯಂ ಮಲ್ಲಿಗೆಗಳ್ ॥೪೧

೧೩. ಹೇತು. ಕಾರಣಮೆ ಹೇತ್ವಲಂಕೃತಿ ।
ಸಾರಂ ದಕ್ಷಿಣಸಮೀರಣಂ ಮಲಯಕುಭೃ ॥
ದ್ಭೂರುಹವನದಿಂ ತೀಡುವ ।
ಕಾರಣದಿಂ ರಾಜ ಸುಕವಿರತ್ನಾಭರಣಾ ! ॥೪೨

೧೪. ಸೂಕ್ಷ್ಮಂ. ಇಂಗಿತಲಕ್ಷ್ಮಂ ಸೂಕ್ಷ್ಮಂ ।
ಸಂಗಮಮಾವಾಗಳೆಂದು ನೋಡುವ ನಲ್ಲಂ ॥
ಗಂಗನೆ ಮುಗಿಯಿಸಿದಳ್ ಜನ ।
ಸಂಗದೊಳಿರುಳೆಂಬುದರ್ಕೆ ಹಸ್ತಾಂಬುಜಮಂ ॥೪೩

೧. ಧವಳತೆಯೊ. ಗ॥ ೨. ಸಂಗಮದಾಹಾ. ಕ॥

೧೫. ಲವಂ. ಲವರೂಪವಿಕೃತಮಂ ಮಾ ।
ಚ್ಛಾವುದು ಲವಂ ರಾಜಸುತೆಯನೀಕ್ಷಿಸಿ ಮೆಯ್ಯೊ
ಱುವ ಪುಳಕಮನಱಿವರಿಗಂ ।
ತು ವಿಟಂ ವನದತುಳಶೀತಪವನನಿನೆಂದಂ ॥೪೪

೧೬. ಕ್ರಮಂ. ಕುಱಿತ ಪದಾರ್ಥದ ಬೞಿಯೊಳ್ ।
ನೆಱೆವ ಪದಾರ್ಥಂ ಕ್ರಮಂ ಹರಂ ಹರಿಬೊಮ್ಮರ್ ॥
ನೆಱೆ ವರಪನೀಗೆ ನಿಮಗಿ ।
ನ್ನೞಿಕದೆ ಗಿರಿಸುತೆಗೆ ಸಿರಿಗೆ ಸರಸತಿಗೆಱೆಯರ್ ॥೪

೧೭. ಪ್ರೇಯಂ. ಪ್ರಿಯವಚನಂ ಪ್ರೇಯಂ ಮಾ ।
ತ್ಪ್ರಿಯಮಿನ್ನೊಂದುಂಟೆ ಕಾವ್ಯಕನ್ಯೆಗೆ ನಿನ್ನಂ ॥
ಪ್ರಿಯನಂ ಪಡೆದೆಂ ರಾಜಾ ।
ನ್ವಯದೊಳಗೆಲೆ ರಾಜ ಸುಕವಿರತ್ನಾಭರಣಾ ! ॥೪೬

೧೮. ರಸವತ್ವಂ. ಆವ ರಸಮಾದೊಡಂ ನಿಜ ।
ಭಾವದಿನೆಸೆವಂತು ಪೇೞ್ ರಸವತ್ವಂ ನೋ ॥
ಡಾವಗಮುದೆಗನ ರೂಪಂ ।
ಭಾವಿಸುವೊಡೆ ಕೆಳವ ತನ್ಮಯಂ ಜಗಮೆಲ್ಲಂ ॥೪೭

[೧] ಉದೆಗನೊಳಾಂ ಪರಾಮರ್ಳದೊಡಂತಕನಾಂತೊಡೆ ಕಂಡಪಿಂ
ಯಂ । ಕೆದಱುವನೊಡ್ಡಿದಾನೆಗಳನಿರ್ಕಡಿಮಾಡುವನಾತನೊಳ್ಜಸ
ಬೆದಱಿಸದಾರನೋಡಿಸದದಾರನದಾರನುದಾತ್ತದೈನ್ಯದೊಳ್ । ಪ್ರ
ಯಿಸದಾರನಾಗಿಸದು ತಾಪಸವೃತ್ತಿಯನಬ್ಜಲೋಚನೇ ! ॥೪೮

೧. ಈ ಶ್ಲೋಕವು ಗ॥ ಪುಸ್ತಕದಲ್ಲಿಲ್ಲ.

೧೯. ಊರ್ಜಸ್ವಿ. ಎಸೆವೂರ್ಜಸ್ವಿಯೆ ವೀರೋ।
ಲ್ಲಸಿತಾಹಂಕಾರಮರಿಗಳರದೋಡುವಿರೇಂ ॥
ವಿಶಸನದೊಳುದೆಗನೀಕೂ।
ರಸಿ ಕೊಲ್ಲದು ವಿನುತಕೀರ್ತಿ ಭೀತಾತ್ಮಕರಂ ॥೪೯

೨೦. ಪರ್ಯಾಯಂ. ಪದೆದಿಷ್ಟಾರ್ಥಮನಾದೊಡಂತದನೆ ನೋಡಲ್ ಬೇಱ
ದೊಂದಾಗಲುಂ । ತದು ಪರ್ಯಾಯವಚಂ ಪಿಕಂ ತರುಣ
ಚೂತಾಂಕೂರವಂ ಖಂಡಿಪಂ ॥ ಅದನಾಂ ಮಾಣಿಪೆ
ನಿಲ್ಲಿರೆಂದು ಸತಿಯುಂ ಸೈತೊಂದಿಪ್ರೊಂದಿಚ್ಛೆಯಿಂ । ದು
ದಯಾದಿತ್ಯನೊಳಾಳ ತಾಂ ತೊಲಗಿದಳ್ ಕೇಳೀಲತಾ
ಗೇಹಮುಂ ॥೫೦

೨೧. ಸಮಾಹಿತಂ. ತೊಡಗಿದ ಕಾರ್ಯಂ ದೈವದೆ।
ಗಡಣಿಸಲದು ತಾಂ ಸಮಾಹಿತಂ ತಿಳಿಪಲ್ ಕಾ ॥
ಲ್ವಿಡಿಯಲಿರೆ ಮೊಱಗನಾಲಿಸಿ ।
ಮಡದಿ ಬಿಗುರ್ತುದಯನೃಪನನಪ್ಪಿದಳಾಗಳ್ ॥೫೧

೨೨. ಉದಾತ್ತಂ. ಹೃದಯದ ವಿಭವದ ಮಹಿಮೆಯು ।
ದುದಾತ್ತಮಾಂತೊಡೆ ಧರಿತ್ರಿ ಕೈಯಾಂತೊಡೆ ಪ್ರೊ॥
ಱ್ದುದೆಗನುಱದೀವಗುಣದಿಂ ।
ಸದರ್ಥ[ಮೇಂ] ಮನದ ಧನದ ಪೆಂಪತಿಶಯಮೋ ! ॥

೨೩. ಅಪಹ್ನುತಿ. ಬಂದಂ ಪುಸಿದೊಂದಂ ಪೇ ।
ಳ್ವಂದಮಪಹ್ನುತಿ ಜಗಕ್ಕೆ ಸೋಮಮಹೀಭೃ ॥

೧. ಖಂಡಿಪಂ ॥ ತಿದನಾಂ. ಕ॥

ನ್ನಂದನನೇನರಸನೆ ಪುಸಿ ।
ಮಂದಾನಿಲನಿಂದು ರತಿಕಳತ್ರಂ ಚೈತ್ರಂ ॥೫೩

೨೪. ಶ್ಲಿಷ್ಟಂ. ಪದವೊಂದನೇಕಮರ್ಥಂ ।
ಪುದಿದಿರೆ ತಾಂ ಶ್ಲಿಷ್ಟಮದುವೆ ಭಿನ್ನಮಭಿನ್ನಂ ॥
ಪದದೊಳ್ ರಾಜಂ ಶಶಿಯುವೊ ।
ಲುದೆಗಂ ವಿಕ್ರಮವಿಭಾಸಿ ದಾನವರಿಪುವೊಲ್ ॥ ೫೪

೨೫. ವಿಶೇಷಂ. ಗುಣಜಾತ್ಯಾದಿಗಳಿಂದೊಂ ।
ದಣಿಯುರವಾಗಿರೆ ವಿಶೇಷಮದುವೆ ವಿಶೇಷಂ ॥
ಗಣಿಯಿಸೆ ಸೋಲಿಪುದಬಲಾ ।
ಗಣಮಾರುಮನಾನೆ ಕುದುರೆ ತಮಗಿಲ್ಲದೊಡಂ ॥೫೫

೨೬. ಸಮಯೋಗಂ. ಸಮಗುಣಗಣನದೆ ಪೇೞ್ವುದು ।
ಸಮಯೋಗಂ ಪೆಱರ ಸಿರಿಯುಮಾಲವಣಸಮು ॥
ದ್ರುಮಮಾರ್ಗಮಸೇವ್ಯಂ ಸೇ ।
ವ್ಯಮಾಮರುನ್ನದಿಯುಮುದೆಗ ನಿನ್ನಯ ಸಿರಿಯುಂ

೨೭. ವಿರುದ್ಧಂ. ಧರೆಗೆ ವಿರೋಧಮನಱಿವುವ ।
ವಿರುದ್ಧಶಬ್ದಾರ್ಥಘಟನೆಯಾಗೆ ವಿರುದ್ಧಂ ॥
ಪರಬಲಮಂ ಸುಡುವುದು ನಿಜ ।
ಕರಾಸಿಜಲಮುದಯನೃಪ ಧರಿತ್ರಿಗೆ ಚಿತ್ರಂ ॥೫೭

೨೮. ಅಪ್ರಸ್ತುತ ಪ್ರಶಂಸೆ. ಪ್ರಸ್ತುತಮಲ್ಲದ ನುಡಿಯು ।
ಪ್ರಸ್ತುತಮದು ಪೆಱರನೋಲಗಿಸುವದಱುದು ॥
ಸ್ವಸ್ಥಂ ಬನದೊಳಗಣ ವನ ।
ವಿಸ್ತಾರದಿನಾಡುತಿರ್ಪ ಮೃಗವಿಸ್ತಾರಂ ॥೫೮

೨೯. ವ್ಯಾಜಸ್ತುತಿ. ಉದೆಗನ್ಯ ಪೊಗೞ್ವವೊಲ್ ಪೞಿ।
ವೃದು ತಾಂ ವ್ಯಾಜಸ್ತವಂ. ಜಗತ್ರಯಮುಮಂ ಪ॥
ವಿಡಿದುದು ಜಸಮೆಂದು ಗರ್ವಿಸ।
ಲದೇಕೆ ಪೇೞ್ ಜಗಮನಿತ್ತು ಹರಿಯುದರಗತಂ ॥೫೯

೩೦. ನಿದರ್ಶನಂ. ದೊರೆವಡೆಯೆ ಫಲಮನರ್ಥಾಂ।
ತರದೊಳ್ ತರ್ಪುದು ನಿದರ್ಶನಂ. ನಭದ ದಿವಾ॥
ಕರನುದಯಿಸೆ ಕಮಲಕ್ಕೆಲ್ಲ।
ಸಿರಿಯೆನೆ ಬಡವಂಗೆ ಬಂಧು ಸುಪ್ರೀತಿಕರಂ ॥೬೦

೩೧. ಸಹೋಕ್ತಿ. ಮುನಿಕರಮುಂ ಕಮಲಂಗಳು।
ಮನುನಯದಿಂದೊಡನೆ ಮುಗಿದುವಾಸಂಜೆಯೊಳೆಂ॥
ದೆನಲದನೆ ಸತ್ಕವೀಂದ್ರರ್।
ವಿನಯದಿನದು ತಾಂ ಸಹೋಕ್ತಿಯೆಂಬರ್ ಪೆಸಱಿಂ ॥೬೧

೩೨. ಪರಿವೃತ್ತಿ. ಪರಿವೃತ್ತಿ ಪದಾರ್ಥಪರ।
ಸ್ಪರವಿನಿಮಯಮುಮರಪ್ರರಮನಹಿತಧರಿತ್ರೀ॥

ಪತಿಯೊಡನೆ ಸತಿಗೆ ಸಸಿಯೊಡ।ನುತುಪಲವಿಭವಕ್ಕೆ ರವಿಯೊಡನೆ ಪದುಮಿನಿಗೀ॥
ಕ್ಷತೆಯುಂ ತಾಳ್ದುವೊಡದು ಕವಿ।ಮತದಿಂದಂ ತಾಂ ನಿದರ್ಶನಾಲಂಕಾರಂ ॥
ಎಂದು ನಿದರ್ಶನಕ್ಕೆ ಮತ್ತೊಂದೂ,
ಗುಣಿಗಳ ಗುಣಕರ್ಮಮನೊಡ।ನೆಣಿಸುವುದು ಸಹೋಕ್ತಿ. ಜಡಿಯೆ ನಿನ್ನ ಕೃಪಾಣಂ॥
ರಣದೊಳ್ಕಂಪಿಸುವುದು ರಿಪು। ಗಣದೊಡನೆ ಗಜೇಂದ್ರವೈರಿವಿಕ್ರಮನಿಳಯಾ ॥
ಎಂದು ಸಹೋಕ್ತಿಗೆ ಇನ್ನೊಂದೂ,
ಜಳಕೇಳಿಯೊಳಧರಂ ಕ।ಣ್ಗಳ ಬೆಳಗಂ ತಾನೆ ಕೊಂಡು ತನ್ನಯ ಕೆಂಪಂ॥
ಕೊಳಗುವ ಲೋಚನಕೀವುದ।ನಿಳೆಯೊಳ್ ಪರಿವೃತ್ತಿಯೆಂದು ವಿಬುಧರ್ ನುಡಿವರ್॥
ಎಂದು ಪರಿವೃತ್ತಿಗೆ ಬೇರೊಂದೂ ಒಂದು ಪ್ರತಿಯಲ್ಲಿ ಉದಾಹೃತವಾಗಿವೆ.

ಶ್ವರಗರ್ಗಿತ್ತ್ತಹಿತಧರಿತ್ರೀ !
ಶ್ವರಪುರಮಂ ಕೊಳ್ವನುದೆಗಧಾತ್ರೀರಮಣಂ ॥೬೦

೩೩. ಆಶೀ
ರಲಂಕಾರಂ.
ಆಶೀರ್ವಚನಮದಭಿಲಷ ।
ತಾಶಂಸನವಚನಮುದೆಗ ನಿನ್ನಂ ಪೊರೆಗಿಂ ॥
ತಾಶಿವನಾದಾನವರಿಪು ।
ವಾಶತದಳಗರ್ಭರಾ ತ್ರಿಶಕ್ತಿಸಮೇತರ್॥೬೩

೩೪. ಭಾವಿಕಂ. ಭಾವಿಕಮೆನಿಕುಂ ಸತ್ಕವಿ।
ಭಾವಗತಾರ್ಥಂ ಸ್ಥಳೋಪವರ್ಣನ ಶಬ್ದೋ ॥
ದ್ಭಾವಾದ್ಭುತಾರ್ಥಕಂ ಸ।
ದ್ಭಾವಿತರಸಸಂಮತಂಗಳವು ಭಾವಂಗಳ್ ॥೬೪

ಕವಿಗಳ ಕಾವ್ಯಭಾವನೆಯೆ ಭಾವಿಕವೆಂಬುದದ
ಪ್ರಬಂಧವಾ । ಸ್ತವವಿಷಯಂ ಪರಸ್ಪರಕೃತಾಖಿಳ.
.........ಸುಧಿವ್ಯೆ ॥ ಭವಮನುಳಾಂಗಪಾವನಪದಾ
ವಿಶೇಷಣಯುಕ್ತಭೂಷಣಂ । ಭುವನಜನಾನುರಂಜಿತ
ಳಾನಿಳಯುಂ ಕವಿರತ್ನಶೇಖರಂ ॥೬೫

ಭಾವಿಕಾಲಂಕಾರಕ್ಕೆ ನಾಗವರ್ಮನ ಅರ್ಥಾಲಂಕಾರದಲ್ಲಿ—

“ ಭಾವಿಕಮೆಂದರೆಬರ್ಕವಿ । ಭಾವಗತಾರ್ಥಮನೆ ತಾವಲಂಕೃತಿಗಳೊಳು ॥
ದ್ಭಾವಿಸಿ ಪೇಳ್ವರ್ಶಕ್ತಿಸ । ಮಾವಿರ್ಭೂತಪ್ರಬಂಧ ವಿಷಯಮದಕ್ಕಂ
ಸ್ಥಾನೋಪವರ್ಣನಂ ಶ । ಬ್ದಾನಾಕುಳಭಾವಮದ್ಭುತಾರ್ಥತ್ವಂ ಸ್ವಾ
ಧೀನರಸವೃತ್ತಿ ಸಂಬಂ । ಧಾನುಗಮಂ ಭಾವಿಕಕ್ಕೆ ಭಾವಮಿವಕ್ಕುಂ ॥
ಎಂದಿದೆ.

ನಿನಗೆ ಶುಭೋದಯಮಕ್ಕಂ। ಎನಲದು ತಾನಾಶಿಯೆಂಬಲಂಕಾರಮುಮಾ ॥
ಮನುಮಾರ್ಗಚರಿತಕವಿಗಳ್।ಮನೋಮುದಂ ಪೆರ್ಚೆ ಪೇಳ್ವುದಖಿಳಾವನಿಯೊಳ್
ಎಂದು ಮತ್ತೊಂದು ಆಶೀರಲಂಕಾರಕ್ಕೆ ಒಂದು ಪ್ರತಿಯಲ್ಲಿ ಉದಾಹೃತವಾಗಿ

೨೫. ಸಂಕೀರ್ಣಂ. (ಇದು ೧. ಸಮೇತಕಂ=ಸಮಕಕ್ಷಂ, ೨. ಅಂಗಾಂಗಕಂ, ಎಂದು ಎರಡುಂ ತೆಱಂ.)

ಸಮಸಂದೊಪ್ಪುವಲಂಕ್ರಿಯಾಗುಣದ ಯೋಗಂ ಸಂದ ಸಂಶ್ಲಿಷ್ಟಮೂ । ಸಮಕಕ್ಷಾಂಗಿತದಂಗಿಭಾವಮೆರಡಕ್ಕುಂ ತೇಜಮಕ್ಕುಂ ಪ್ರತಾ॥ ಪಮುಮಂ ಮಿಕ್ಕುದು ಕೀರ್ತಿಚಂದ್ರಿಕೆ ವಿಲಾಸಂಬೆತ್ತುದೆಂದೆಂಬುದಾ । ಸಮಕಕ್ಷಂ ಮುಖಚಂದ್ರನಿಂ ಕುಮುದಮೆೞ್ಪಾಯ್ತೆಂಬುದಂಗಾಂಗಿಕಂ ॥೬೭

ಯಮಕಪ್ರಹೇಳಿಕಾದಿಗ ।
ಳ ಮಾರ್ಗಮೊಂದಿಂತು ಮಾಣ್ದೊಡಮಂತಾ ॥
ಯಮಕಪ್ರಹೇಳಿಕಾದಿಗ ।
ಳ ಮಾರ್ಗಮಂ ತಿಳಿಪುವೆರಡು ಪದ್ಯಮನುಸಿರ್ವೆಂ* ॥

ಯಮಕಂ. ಎರಡರ್ಥದಿನೆಸೆವೊಂದ ।
ಕ್ಷರಾಳಿ ಯಮಕಂ ಪದಾದಿಮಧ್ಯಾಂತಗತಂ ॥
ಚರಣದೊಳೊಂದುಮರತ್ಯು ।
ಚ್ಚರಣದೊಳಹಿತಾವನೀಶರುದೆಗನರೇಶಾ ॥೬೮

ಪ್ರಹೇಳಿಕೆ. ಸಂಧಿಸಿ ಮೂರಾಕಾಶದ ।
ಪಿಂದೊರ್ವಂ ನಿಂದನಾಸದಾಶಿವನಿಂದಂ ॥
ಬಂದುದು ಲೆಕ್ಕಂ ಸಾಸಿರ।
ಮೆಂದೊಡಮಂತವನನಱಿದೊಡಾಗಮವಱಿಗುಂ ॥೬೯

ಒದವಿದೊರ್ಂದು ತಮಂ ಜಗಕ್ಕೆ ಪಱಿವನ್ನಂ ತನ್ನ ಸಿಂಹಾಸನ।
ಕ್ಕುದಯಾದ್ರೀಂದ್ರಕೆ ಬರ್ಪ ಪೆರ್ಮೆ ಮೊಱೆವನ್ನಂ ಸತ್ಕವಿಪ್ರೋಲ್ಲಸ॥

ದ್ವದನಾಂಭೋರುಹಷಂಡಮುಳ್ಳಲರ್ವಿನಂ ಭೂಮಂಡಲಾಧೀಶನ ।
ಪ್ಪುದಯಾದಿತ್ಯನುದಾರಕಾರ್ಯನೆಸೆದಂ ಸಾಹಿತ್ಯವಿದ್ಯಾಧರಂ ॥೭೦

ಒದವಿದ ಮುಂಜನ ಭೋಜನ ।
ವಿದಿತಶ್ರೀಹರ್ಷನುದಯಮತ್ಕೃತಿಯೊಳ್ ತ ।
ನ್ನುದಯಮುಮಂಕುರಿಪುದಱಿಂ ।
ದುದಯನೃಪಂ ರಾಜಸುಕವಿರತ್ನಾಭರಣಂ ॥೭೧

ಸೆದಮಲಕಾಂತಿಯಿಂ ಸಮತೆಯಿಂ ಸುಕುಮಾರತೆಯಿಂದೆ ಭಿನ್ನಭಾ
ವದೆ ನುತಲಕ್ಷ್ಯದಿಂ ಸಕಲಭೋಗದಿನುಜ್ಜ್ವಳರೂಪದಿಂ ಪೊದ ॥
ಜೊದವಿದ ಕಾವ್ಯದಿಂ ಕವಿಶಿಖಾಮಣಿಯಾದುದಱಿಂದವಾದನಿಂ ।
ತುದಯನೃಪೇಶ್ವರಂ ನೃಪಕವೀಶ್ವರರಿಂ ಕವಿರಾಜಶೇಖರಂ ॥೭೨

ಉದಯಾದಿತ್ಯಾಲಂಕಾರಂ ಸಂಪೂರ್ಣಂ.

119

165